**ಸಂಪುಟ:** 06 **ಸಂಚಿಕೆ:** 204 **ಪುಟಗಳು:** 08 **ಶುಕ್ರವಾರ** 09 **ಅಕ್ಟೋಬರ್** 2026 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 + 91 8035621249 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಬದುಕು
ನಿಧಾನವಾಗಿ ಪಾಠ ಕಲಿಸುತ್ತೆ.
ನಿನ್ನ ತನವನ್ನು ಅಡವಿಟ್ಟು ಯಾರನ್ನು
ನೀನು ಪ್ರೀತಿಸುವ ಅಗತ್ಯವಿಲ್ಲ.
ಏಕೆಂದರೆ, ಇಲ್ಲಿ ಯಾರು ಯಾರಿಗೂ
ಅನಿವಾರ್ಯರಲ್ಲ.!!

## 150 ಕೋಟಿ ವೆಚ್ಚದಲ್ಲಿ ಪುನಶ್ಚೇತನ ಯೋಜನೆ: ನೀರಿನ ಶುದ್ಧೀಕರಣ, ಸೌಂದರ್ಯೀಕರಣ ಹೊರತಾಗಿ ನಡೆಯಲಿದೆಯಾ ಕೆರೆ ಪುನಶ್ಚೇತನ

• **ಉದಯವಾಹಿನಿ, ಬೆಂಗಳೂರು**

ರಾಜ್ಯ ಸರ್ಕಾರ ವಿಶ್ವಬ್ಯಾಂಕ್‌ನ 150 ಕೋಟಿ ನೆರವಿನೊಂದಿಗೆ 7 ಜಿಲ್ಲೆಗಳ ಸುಮಾರು 500 ಕೆರೆಗಳ ಪುನಶ್ಚೇತನಕ್ಕೆ ಮುಂದಾಗಿದೆ. ಈ ಯೋಜನೆ ಹಲವು ಪ್ರಶ್ನೆ ಮೂಡಿಸಿದೆ. ಈ ಆರ್ಥಿಕ ನೆರವಿನಿಂದ ಸರ್ಕಾರ ಜಲಮೂಲಗಳ ಪರಿಸರ ವ್ಯವಸ್ಥೆಯನ್ನು ಪೂರಕಗೊಳಿಸಲಿದೆಯಾ ಅಥವಾ ಕೇವಲ ಅವುಗಳ ಏರಿ ಸರಿ ಮಾಡಿ, ಅದರ ಸೌಂದರ್ಯೀಕರಣಕ್ಕೆ ಮಾತ್ರ ಸೀಮಿತವಾಗಲಿದೆಯೇ ಎಂಬ ಪ್ರಶ್ನೆ ಮೂಡಿದೆ. ಈ ವಿಶ್ವಬ್ಯಾಂಕ್ ನೆರವಿನೊಂದಿಗೆ ಸಿದ್ಧವಾಗಿರುವ ಈ ಯೋಜನೆಯಲ್ಲಿ ಬೆಂಗಳೂರು ಗ್ರಾಮಾಂತರದ 68 ಮತ್ತು ಬೆಂಗಳೂರು ನಗರದ 67 ಕೆರೆ ಸೇರಿದೆ. ಇದರ ಜೊತೆಗೆ ಬೀದರ್, ಚಿಕ್ಕಬಳ್ಳಾಪುರ, ಕಲಬುರಗಿ, ತುಮಕೂರು ಮತ್ತು ಕೋಲಾರದ ಕೆರೆಗಳ ಪುನಶ್ಚೇತನವು ಸಾಗಲಿದೆ. ಇದಕ್ಕಾಗಿ ಸರ್ಕಾರ ಸಮಗ್ರ ಯೋಜನಾ ವರದಿ ತಯಾರಿಸಿದ್ದು, ಸಮರೋಪಾದಿಯಲ್ಲಿ ಕೆರೆ ಅಭಿವೃದ್ಧಿ ಮಾಡುವಂತೆ ಜಿಲ್ಲಾಡಳಿತಕ್ಕೆ ಸೂಚನೆ ನೀಡಲಾಗಿದೆ. ಇದರಲ್ಲಿ ನೀರಿನ ಶುದ್ಧೀಕರಣ, ಏರಿ ಬಲಪಡಿಸುವಿಕೆ ಮತ್ತು ಎತ್ತರಗೊಳಿಸುವಿಕೆ, ಕಾಲುವೆ ಮತ್ತು ನಾಲೆಗಳ ದುರಸ್ತಿ ಮತ್ತು ಸೌಂದರ್ಯೀಕರಣ ಸೇರಿದೆ. ಈ ಕುರಿತು ಮಾತನಾಡಿರುವ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕೆರೆ ಪುನರುಜ್ಜೀವನ ಇಲಾಖೆಯ ಕಾರ್ಯಕಾರಿ ಇಂಜಿನಿಯರ್ ನಿತ್ಯಾ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ನಿರ್ದೇಶನವನ್ನು ಪಡೆಯಲಾಗಿದೆ. ಜಿಲ್ಲಾಡಳಿತ ಮತ್ತು ಸಿಇಒಗಳಿಗೂ ಕೆಲಸ ಆರಂಭಿಸುವಂತೆ ನಿರ್ದೇಶನ ನೀಡಲಾಗಿದೆ.

## ಸರ್ಕಾರಿ, ಅರಣ್ಯ ಜಾಗದ ಆಸ್ತಿಯನ್ನು ತೆರಿಗೆಯಿಂದ ಹೊರಗಿಡುವ ಆಗಸ್ಟ್ 13ರ ಸುತ್ತೋಲೆಗೆ ತಾತ್ಕಾಲಿಕ ತಡೆ: ಸಚಿವ ಈಶ್ವರ್ ಖಂಡ್ರೆ

• **ಉದಯವಾಹಿನಿ, ಬೆಂಗಳೂರು**

ತೆರಿಗೆ ನಿರ್ಧಾರಣೆ ಹಾಗೂ ಇ-ಸ್ವತ್ತು 2.0 ತಂತ್ರಾಂಶದಿಂದ ಸರ್ಕಾರಿ ಮತ್ತು ಅರಣ್ಯ ಭೂಮಿಯಲ್ಲಿನ ಆಸ್ತಿಗಳನ್ನು ಕೈಬಿಡುವ ಬಗ್ಗೆ ಕಳೆದ ಆಗಸ್ಟ್ 13ರಂದು ಹೊರಡಿಸಲಾಗಿರುವ ಸುತ್ತೋಲೆಗೆ ತಾತ್ಕಾಲಿಕ ತಡೆ ನೀಡಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ್ ಬಿ.ಖಂಡ್ರೆ ತಿಳಿಸಿದ್ದಾರೆ.

ವಿಕಾಸಸೌಧದಲ್ಲಿ ಗುರುವಾರ ಮಾತನಾಡಿ, ವಿಧಾನಮಂಡಲದ ಉಭಯ ಸದನಗಳಲ್ಲಿ ಅನುಮೋದನೆಯಾಗಿದ್ದ ಹಾಗೂ ರಾಜ್ಯಪಾಲರ ಅಂಗೀಕಾರ ಪಡೆದಿದ್ದ ಕಾಯಿದೆಗೆ ಸಂಬಂಧಿಸಿದಂತೆ ಈ ಸುತ್ತೋಲೆಯನ್ನು ಇಲಾಖೆ ವತಿಯಿಂದ ಹೊರಡಿಸಲಾಗಿತ್ತು. ಕಸ್ತೂರಿ ರಂಗನ್ ವರದಿಯ ಮೇಲಿನ ಚರ್ಚೆಯ ವೇಳೆ ವಿಶೇಷ ಅಧಿವೇಶನದಲ್ಲಿ ಹಲವು ಜನಪ್ರತಿನಿಧಿಗಳು ಪಕ್ಷಾತೀತವಾಗಿ ಈ ಸುತ್ತೋಲೆಯ ಬಗ್ಗೆ ಆತಂಕ ವ್ಯಕ್ತಪಡಿಸಿದ್ದ ಹಿನ್ನೆಲೆಯಲ್ಲಿ, ಮುಖ್ಯಮಂತ್ರಿಗಳು ಸದನದಲ್ಲಿ ಭರವಸೆ ನೀಡಿದಂತೆ ಈಗ ಆಗಸ್ಟ್ 13ರ ಆದೇಶಕ್ಕೆ ತಡೆ ನೀಡಲಾಗಿದೆ ಎಂದು ತಿಳಿಸಿದರು. ಕಾಡಿನಂಚಿನಲ್ಲಿರುವ ಮತ್ತು ಸರ್ಕಾರಿ ಭೂಮಿಯಲ್ಲಿ ಈಗಾಗಲೇ ಮನೆ ಕಟ್ಟಿಕೊಂಡು ವಾಸಿಸುತ್ತಿರುವವರು ಆತಂಕಪಡುವ ಅಗತ್ಯವಿಲ್ಲ ಎಂದು ತಿಳಿಸಿರುವ ಈಶ್ವರ ಖಂಡ್ರೆ, ಕಂದಾಯ, ಅರಣ್ಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸೇರಿದಂತೆ ಬಹು ಇಲಾಖೆಯ ಅಧಿಕಾರಿಗಳ ಉನ್ನತಮಟ್ಟದ ಸಮಿತಿ ರಚಿಸಿ ಇದಕ್ಕೆ ಪರಿಹಾರ ಕಂಡುಕೊಳ್ಳಲಾಗುವುದು ಎಂದು ಸ್ಪಷ್ಟಪಡಿಸಿದ್ದಾರೆ.

## ಕರ್ನಾಟಕಕ್ಕೆ ಮತ್ತೆ ಶಾಕ್ 15 ದಿನ ತಮಿಳುನಾಡಿಗೆ ಹರಿಯಲಿದೆ 3 ಸಾವಿರ ಕ್ಯೂಸೆಕ್

• **ಉದಯವಾಹಿನಿ, ಬೆಂಗಳೂರು**



15 ದಿನಗಳ ಅವಧಿಗೆ ಪ್ರತಿದಿನ 3,000 ಕ್ಯೂಸೆಕ್ ನೀರನ್ನು ತಮಿಳುನಾಡಿಗೆ ಹರಿಸುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಕರ್ನಾಟಕಕ್ಕೆ ಆದೇಶಿಸಿದೆ.

ಇಂದು ಬೆಳಗ್ಗೆ ಸಭೆ ನಡೆಸಿದ್ದ ಕಾವೇರಿ ನೀರು ನಿಯಂತ್ರಣ ಸಮಿತಿ ಪ್ರತಿದಿನ 3 ಸಾವಿರ ಕ್ಯೂಸೆಕ್ ನಂತೆ ಒಟ್ಟು 15 ದಿನಗಳ ಕಾಲ 3.91 ಟಿಎಂಸಿ ನೀರನ್ನು ಹರಿಸುವಂತೆ ಶಿಫಾರಸು ಮಾಡಿತ್ತು. ಈ ಶಿಫಾರಸನ್ನು ಪಾಲಿಸುವಂತೆ ಕರ್ನಾಟಕಕ್ಕೆ ಸೂಚಿಸಿದೆ. ರಾಜ್ಯದಲ್ಲಿ ಮಳೆ ಕಡಿಮೆಯಾಗಿರುವುದರಿಂದ ಹಾಗೂ ಕೆಆರ್‌ಎಸ್, ಹೇಮಾವತಿ, ಹಾರಂಗಿ ಮತ್ತು ಕಬಿನಿ ಜಲಾಶಯಗಳಲ್ಲಿ ನೀರಿನ ಸಂಗ್ರಹ ಕುಸಿದಿರುವುದರಿಂದ ನೀರು ಬಿಡುಗಡೆ ಮಾಡಲು ಸಾಧ್ಯವಿಲ್ಲ ಎಂದು ಕರ್ನಾಟಕ ಸರ್ಕಾರ ಮನವಿ ಮಾಡಿದ ಮನವಿಯನ್ನು ಪ್ರಾಧಿಕಾರ ಒಪ್ಪಿಗೆ ನೀಡಲಿಲ್ಲ.

## ಕರ್ನಾಟಕದ ದಕ್ಷಿಣ ಒಳನಾಡಲ್ಲಿ ಇಂದು ಮಳೆ ಅಬ್ಬರ

• **ಉದಯವಾಹಿನಿ, ಬೆಂಗಳೂರು**

ಮುಂಗಾರು ಮಳೆಯ ತೀವ್ರ ಕೊರತೆಯಿಂದ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಬರ ಪರಿಸ್ಥಿತಿಯ ನಡುವೆ ಕಳೆದ ಕೆಲ ದಿನಗಳಿಂದ ಹಲವೆಡೆ ವರುಣ ಅಬ್ಬರಿಸುತ್ತಿದ್ದಾನೆ. ದಕ್ಷಿಣ ಒಳನಾಡು ಜಿಲ್ಲೆಗಳಲ್ಲಿ ಅಕ್ಟೋಬರ್ 9ರಂದು ಉತ್ತಮ ಮಳೆಯ ನಿರೀಕ್ಷೆ ಇದ್ದು, ಹೀಗಾಗಿ ಈ ಭಾಗಕ್ಕೆ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಯೆಲ್ಲೋ ಅಲರ್ಟ್ ಘೋಷಿಸಿದೆ. ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ಮೈಸೂರು, ಚಾಮರಾಜನಗರ, ಮಂಡ್ಯ, ರಾಮನಗರ, ತುಮಕೂರು, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಭಾರಿ ಮಳೆಯ ಸಾಧ್ಯತೆ ಇದ್ದು, ಒಟ್ಟು 13 ಜಿಲ್ಲೆಗಳಿಗೆ ಹವಾಮಾನ ಇಲಾಖೆ ಯೆಲ್ಲೋ ಅಲರ್ಟ್ ಘೋಷಿಸಿದೆ. ಕರಾವಳಿ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವೆಡೆ ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆ ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಬಹುತೇಕ ಒಣಹವೆ ಮುಂದುವರಿಯುವ ಸಾಧ್ಯತೆ ಇದೆ.

## ಆಡಳಿತ ಪಾರದರ್ಶಕತೆ, ಶೀಘ್ರ ಸೇವೆಗಾಗಿ 'ಭಾಷಿಣಿ' ಎಐ ತಂತ್ರಜ್ಞಾನ ಅಳವಡಿಕೆ: ಸಚಿವ ಪ್ರಿಯಾಂಕ್ ಖರ್ಗೆ

• **ಉದಯವಾಹಿನಿ, ಬೆಂಗಳೂರು**

ಜನಸಾಮಾನ್ಯರ ಸಮಸ್ಯೆಗಳಿಗೆ ಶೀಘ್ರ ಪರಿಹಾರ ಕಂಡುಕೊಳ್ಳಲು ಮತ್ತು ಸರ್ಕಾರದ ಆಡಳಿತದಲ್ಲಿ ಪಾರದರ್ಶಕತೆ ತರಲು ಕೃತಕ ಬುದ್ಧಿಮತ್ತೆ ಸೇರಿದಂತೆ ನವೀನ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಸರ್ಕಾರ ಮುಂದಾಗಿದೆ. ಸಾರ್ವಜನಿಕ ಸೇವೆಗಳನ್ನು ಸುಲಭಗೊಳಿಸುವ ಸಲುವಾಗಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ 'ಭಾಷಿಣಿ' ತಂತ್ರಜ್ಞಾನ ಸಾಧನವನ್ನು ಅಳವಡಿಸಿಕೊಳ್ಳಲಾಗುವುದು ಎಂದು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು. ಪ್ರಜಾ ಸೇವಾ ಇಲಾಖೆಯ ಇಡಿಸಿಎಸ್ ನಿರ್ದೇಶನಾಲಯವು ವಿಕಾಸಸೌಧದಲ್ಲಿ ಗುರುವಾರ ಆಯೋಜಿಸಿದ್ದ 'ಭಾಷಿಣಿ - ರಾಜ್ಯಂ'




ಎಂಬ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕರ್ನಾಟಕವು ಜಾಗತಿಕ ಮಟ್ಟದಲ್ಲಿ ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದ್ದು, ಪ್ರಸ್ತುತ ವಿಶ್ವದ 4ನೇ ಅತಿದೊಡ್ಡ ತಂತ್ರಜ್ಞಾನ ಕ್ಲಸ್ಟರ್ ಆಗಿ ಹೊರಹೊಮ್ಮಿದೆ. ಕೃತಕ ಬುದ್ಧಿಮತ್ತೆ ಕೌಶಲ್ಯದಲ್ಲಿ 5ನೇ ಸ್ಥಾನದಲ್ಲಿದ್ದು, ಅತ್ಯಂತ ದಕ್ಷ ಮಾನವ ಸಂಪನ್ಮೂಲವನ್ನು ಹೊಂದಿದೆ. ಭಾಷಿಣಿ ಯೋಜನೆಯನ್ನು ವೇಗವಾಗಿ ಮುನ್ನಡೆಸಲು ಕರ್ನಾಟಕ ಅತ್ಯಂತ ಸೂಕ್ತವಾದ ರಾಜ್ಯವಾಗಿದೆ ಎಂದು ಅಭಿಪ್ರಾಯ ಪಟ್ಟರು. ಕರ್ನಾಟಕದಲ್ಲಿ ಪ್ರತಿ 150 ಕಿಲೋಮೀಟರ್‌ಗೆ ಭಾಷಾ ಶೈಲಿ ಬದಲಾಗುತ್ತದೆ.

ಗಡಿಭಾಗಗಳಲ್ಲಿ ಮರಾಠಿ, ಉರ್ದು, ತೆಲುಗು, ತಮಿಳು, ಮಲಯಾಳಂ ಹಾಗೂ ಕರಾವಳಿಯಲ್ಲಿ ತುಳು ಮತ್ತು ಬ್ಯಾರಿ ಭಾಷೆಗಳ ಪ್ರಭಾವವಿದೆ. ಈ ಪ್ರಾದೇಶಿಕ ಭಾಷಾ ವೈವಿಧ್ಯತೆಯಿಂದಾಗಿ ಸ್ಥಳೀಯ ಮಟ್ಟದಲ್ಲಿ ನಾಗರಿಕರಿಗೆ ಸರ್ಕಾರಿ ಸೇವೆಗಳನ್ನು ತಲುಪಿಸುವುದು ಸವಾಲಿನ ಕೆಲಸವಾಗಿದೆ. ಈ ಸವಾಲನ್ನು ಭಾಷಿಣಿ ತಂತ್ರಜ್ಞಾನದ ಮೂಲಕ ಸುಲಭವಾಗಿ ಮೆಟ್ಟಿಬರಬಹುದು ಎಂದು ಹೇಳಿದರು. ಪ್ರಸ್ತುತ 700ಕ್ಕೂ ಹೆಚ್ಚು ನಾಗರಿಕ ಸೇವೆಗಳನ್ನು ಡಿಜಿಟಲ್ ರೂಪದಲ್ಲಿ ನೀಡಲಾಗುತ್ತಿದೆ.

ಸಾರ್ವಜನಿಕರು ದೊಡ್ಡ ಅರ್ಜಿಗಳನ್ನು ಭರ್ತಿ ಮಾಡುವ ಬದಲಿಗೆ ವಾಟ್ಸ್‌ಆಪ್, ಚಾಟ್‌ಬಾಟ್‌ಗಳು, ಧ್ವನಿ ಮತ್ತು ವಿಡಿಯೋ ಸಂದೇಶಗಳ ಮೂಲಕ ದೂರು ಸಲ್ಲಿಸಲು ಬಯಸುತ್ತಿದ್ದಾರೆ. ಈ ದೂರುಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಭಾಷಿಣಿ ಹಾಗೂ ಸಾಧನಗಳನ್ನು ಸಕ್ರಿಯವಾಗಿ ಬಳಸಿಕೊಳ್ಳಲು ಯೋಜನೆ ರೂಪಿಸಲಾಗುತ್ತಿದೆ ಎಂದು ವಿವರಿಸಿದರು.

**ನಮ್ಮ ರಾಜ್ಯದ ಬಾಕಿ ಅನುದಾನ ವಿಚಾರವಾಗಿ ಸಿಹಿ ಸುದ್ದಿ ಬಂದಿದೆ:** ನಮ್ಮ ರಾಜ್ಯದ ಹಳೆಯ ಬಾಕಿ ವಿಚಾರವಾಗಿ ನಾನು ವಿತ್ತ ಸಚಿವರೊಂದಿಗೆ ಚರ್ಚೆ ಮಾಡಿದ್ದು, ಕೆಲವು ಸಿಹಿ ಸುದ್ದಿ ಕೊಟ್ಟಿದ್ದಾರೆ. ನಾನು ಈಗ ಆ ಬಗ್ಗೆ ಹೇಳುವುದಿಲ್ಲ. ನಂತರ ಮಾತನಾಡುತ್ತೇನೆ ಎಂದು ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಹೇಳಿದರು. ಜಿಎಸ್ಟಿ ಸಭೆ ಬಳಿಕ ಶಿವಕುಮಾರ್ ಅವರು ಕರ್ನಾಟಕ ಭವನದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು. ಜಿಎಸ್ ಟಿ ಕೌನ್ಸಿಲ್ ಸಭೆ ಅತ್ಯುತ್ತಮವಾಗಿ ನಡೆಯಿತು. ಕರ್ನಾಟಕದ ಅಂಶಗಳನ್ನು ಎಲ್ಲರೂ ಒಪ್ಪಿದ್ದಾರೆ. ಜಿಎಸ್ ಟಿ ಪಾವತಿಸದವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ಬಂಧಿಸುವ ವಿಚಾರ ಪ್ರಸ್ತಾಪವಾಯಿತು. ಆದಾಯ ತೆರಿಗೆ ನಿಯಮ, ನಿಬಂಧನೆಗಳಂತೆ ಮಾಡಬೇಕು, ಅನಗತ್ಯವಾಗಿ ಅಧಿಕಾರಿಗಳು ವ್ಯಾಪಾರಸ್ಥರನ್ನು ಬಂಧಿಸುವುದು ಸರಿಯಲ್ಲ. ಅವರಿಂದ ಎಷ್ಟು ಕಟ್ಟಿಸಿಕೊಳ್ಳಬೇಕೋ ಅಷ್ಟು ಹಣ ಕಟ್ಟಿಸಿಕೊಳ್ಳೋಣ. ಬಂಧಿಸುವುದು ಸರಿಯಲ್ಲ ಎಂದು ಚರ್ಚೆಯಾಯಿತು. ಒಂದು ರಾಜ್ಯ ಬಿಟ್ಟರೆ ಉಳಿದ ರಾಜ್ಯಗಳು ಒಪ್ಪಿವೆ ಎಂದು ಹೇಳಿದರು.

ರಾಜ್ಯದಲ್ಲಿ ಸ್ಟಿಂಗ್ ಆಪರೇಷನ್ ಮಾಡಿಸಿ ಬ್ಲ್ಯಾಕ್‌ಮೇಲ್ ಮಾಡುವ ಪರಂಪರೆ ಯಾರದ್ದು ಎಂಬುದನ್ನು ಕಾಂಗ್ರೆಸ್‌ನ ಸಚಿವರು ಹಾಗೂ ಶಾಸಕರನ್ನೇ ಕೇಳಬೇಕು. ಮಾಜಿ ಸಚಿವ, ಶಾಸಕ ಎಚ್.ಕೆ.ಪಾಟೀಲರನ್ನು ಕೇಳಿದರೆ ಇನ್ನಷ್ಟು ವಿವರವಾಗಿ ಹೇಳಬಹುದು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವ್ಯಂಗ್ಯವಾಡಿದರು. ''ಸ್ಟಿಂಗ್ ಆಪರೇಷನ್ ಭಯದಿಂದಾಗಿ ಲಂಚ ಪಡೆಯಲೂ ಹೊಸ ಮಾರ್ಗ ಕಂಡುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ಟಿಂಗ್ ಏಜೆನ್ಸಿಗಳು ಯಾವುವು ಎಂಬುದನ್ನು ಮುಖ್ಯಮಂತ್ರಿ ಬಹಿರಂಗಪಡಿಸಬೇಕು ಎಂದು ಒತ್ತಾಯಿಸಿದರು.



ಡಿಕೆ ಹೇಳಿಕೆ

# ಸಿಎಂ ಡಿಕೆ ಮಾಜಿ ಸಿಎಂ ಎಚ್‌ಡಿಕೆ ಜಟಾಪಟಿ

ಬಿ.ವೈ.ವಿ ವ್ಯಂಗ್ಯ





## ನೈಸ್ ಅಕ್ರಮ ಮರೆಮಾಚಲು ಸಿಎಂ ಡಿಕೆ ಶಿವಕುಮಾರ್ ಟ್ರ್ಯಾಪ್ ಆರೋಪ

ಹೆಚ್‌ಡಿಕೆ ತಿರುಗೇಟು

## ಕಾಂಗ್ರೆಸಿಗರಿಗೇ ಗೊತ್ತು!

## ಸಿಎಂ ಬಳಿ ಮಾಹಿತಿ ಇರಬಹುದು ಎಂದ ಪ್ರಿಯಾಂಕ್

ಸಚಿವ ಸಂಪುಟ ಸಭೆಯಲ್ಲಿ ಸಿಎಂ ಸ್ಟಿಂಗ್ ಆಪರೇಷನ್ ಸುಳಿವು ನೀಡಿರುವ ವಿಚಾರವಾಗಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ''ಎಲ್ಲರೂ ಜಾಗರೂಕರಾಗಿ ಇರಬೇಕು ಎಂಬ ಉದ್ದೇಶದಿಂದ ಸಿಎಂ ಅವರಿಗೆ ಬಂದ ಮಾಹಿತಿ ಪ್ರಕಾರ ಎಚ್ಚರಿಕೆ ನೀಡಿದ್ದಾರೆ. ನಮ್ಮ ಇಲಾಖೆಗೆ ಮಾಹಿತಿ ಬರುತ್ತಲ್ಲ. ಯಾರು ಏನೇನು ಮಾಡ್ತಿದ್ದಾರೆ ಗೊತ್ತಿದೆ. ಈಗ ಸತೀಶ್ ಜಾರಕಿಹೊಳಿಗೆ ಅವರಿಗೆ ಕಿರುಕುಳ ನೀಡಲು ಶುರು ಮಾಡಿಲ್ವಾ? ನಾನು ಬರೆದು ಕೊಡ್ತೀನಿ, ಕೆಲ ದಿನಗಳಲ್ಲಿ ನನ್ನ ವಿರುದ್ಧನೂ ಶುರು ಮಾಡುತ್ತಾರೆ'' ಎಂದರು.

15 ದಿನದಲ್ಲಿ ನಾನು ಜೈಲ್‌ಗೆ ಹೋಗಬೇಕಿತ್ತಲ್ವಾ ಏನಾಯ್ತು? ಕುಮಾರಸ್ವಾಮಿ ಅವರೇ ಹೇಳಿದ್ದಾರಲ್ವಾ? ಅವರದ್ದು ಹಿಟ್ ವಿಕೆಟ್. ಬಿಜೆಪಿ ಅವರು ಎಷ್ಟು ಕೆಪಿಎಸ್‌ಸಿ ಬಗ್ಗೆ ಮಾತನಾಡ್ತಾರೆ? ಎಂದು ಪ್ರಶ್ನಿಸಿದರು.

ಸಿದ್ದರಾಮಯ್ಯ ಮೇಲೆ ಸ್ಟಿಂಗ್ ನಡೆದಿದೆ ಎಂದು ಕುಮಾರಸ್ವಾಮಿ ಹೇಳಿಕೆ ವಿಚಾರವಾಗಿ ಇದೇ ಸಂದರ್ಭದಲ್ಲಿ ಮಾತನಾಡಿದ ಅವರು, ''ನಾನು ಮಾಜಿ ಸಿಎಂ ಹಾಗೂ ಹಾಲಿ ಕೇಂದ್ರ ಸಚಿವರಿಗೆ ಮನವಿ ಮಾಡುತ್ತೇನೆ. ನೀವು ನಿಮ್ಮ ಕುರ್ಚಿಗೆ ನೀವೇ ಗೌರವ ಕೊಟ್ಟಿಲ್ಲ ಅಂದ್ರೆ, ಬೇರೆ ಯಾರೂ ಕೊಡೋದಿಲ್ಲ. ದಯವಿಟ್ಟು ಗೌರವಯುತವಾಗಿ ಮಾತನಾಡಿ ಸಾಕ್ಷ್ಯಾಧಾರಗಳೊಂದಿಗೆ ಮಾತನಾಡಿ.



ನೀವು ಆ ಭಾಷೆ ಪ್ರಯೋಗ ಮಾಡಿದ್ರೆ, ಬೇರೆ ಎಲ್ಲರೂ ಕೂಡ ಅದೇ ಭಾಷೆಯಲ್ಲಿ ಉತ್ತರ ಕೊಡಬೇಕಾಗುತ್ತದೆ. ನಿಮ್ಮ ಮರ್ಯಾದೆಗೆ ಅಲ್ಲ, ಕುರ್ಚಿ ಮರ್ಯಾದೆಗೆ ತಕ್ಕಂಗೆ ಮಾತಾಡಿ'' ಎಂದು ತಿರುಗೇಟು ನೀಡಿದರು.

• **ಉದಯವಾಹಿನಿ, ಬೆಂಗಳೂರು**

ನೈಸ್ ಅಕ್ರಮಗಳ ದಾಖಲೆ ಬಿಡುಗಡೆಯಿಂದ ಸಿಎಂಗೆ ಮುಜುಗರ ಆಗಿದೆ. ಅದಕ್ಕಾಗಿ ಟ್ರ್ಯಾಪ್ ಆರೋಪದಂತಹ ಸುದ್ದಿಗಳನ್ನ ಹರಡುತ್ತಿದ್ದಾರೆ ಎಂದು ಕೇಂದ್ರ ಸಚಿವ ಹೆಚ್.ಡಿ ಕುಮಾರಸ್ವಾಮಿ ತಿರುಗೇಟು ನೀಡಿದರು. ದೆಹಲಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಕೇಂದ್ರ ಸಚಿವರು ನನ್ನ ವಿರುದ್ಧವೇ ಸ್ಟಿಂಗ್ ಆಪರೇಷನ್ ಮಾಡಲು ಯತ್ನಿಸಿದ್ದರು? ಎನ್ನುವ ಡಿಕೆ ಶಿವಕುಮಾರ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದರು. ಮುಖ್ಯಮಂತ್ರಿ ಹೇಳಿಕೆ ನೋಡಿ ಎಂತಾ ಮುಖ್ಯಮಂತ್ರಿ ಬಂದರೂ ಅಂತಾ ಚರ್ಚೆ ಆಗ್ತಿದೆ. ಕ್ಯಾಬಿನೆಟ್‌ನಲ್ಲಿ ಚರ್ಚೆ ಆಗಿದ್ದು ಮಾಧ್ಯಮದಲ್ಲಿ ಬರಲು ಕಾರಣ ಏನು? ನೈಸ್ ಸುದ್ದಿ ಮುನ್ನಲೆಗೆ ಬರಬಾರದು ಎನ್ನುವುದು ಅವರ ಉದ್ದೇಶ. ನೈಸ್ ಅಕ್ರಮಗಳ ದಾಖಲೆ ಬಿಡುಗಡೆಯಿಂದ ಸಿಎಂಗೆ ಮುಜುಗರವಾಗಿದೆ. ಅದಕ್ಕಾಗಿ ಈ ರೀತಿಯ ಸುದ್ದಿಗಳನ್ನ ಹರಡುತ್ತಿದ್ದಾರೆ ಎಂದು ಕುಟುಂಬದವರು. ನನ್ನನ್ನ ಟ್ರ್ಯಾಪ್ ಮಾಡುತ್ತಿದ್ದಾರೆ, ಫೋಟೋ ಇದ್ದಾವೆ ಅಂತಾರೆ. ಪಿತಾಮಹ ಯಾರು ಅಂತಾ ಗೊತ್ತಿದೆ ಎಂದಿದ್ದಾರೆ. ಯಾರು ಆ ಪಿತಾಮಹ ಜನರ ಮುಂದೆ ಇಡಿ. ಸಿದ್ದರಾಮಯ್ಯ ಅವರನ್ನ ಟ್ರ್ಯಾಪ್ ಮಾಡಲು ಯತ್ನಿಸಿದ್ರು ಅನ್ನೊ ಸುದ್ದಿ ಇದೆ. ಯಾಕೆ ಇದನ್ನೆಲ್ಲ ಮುಚ್ಚಿಡುತ್ತಿದ್ದೀರಿ. ನನಗೂ ಟ್ರ್ಯಾಪ್ ಮಾಡುವ ಪ್ರಯತ್ನ ನಡೆದಿದೆ ಅನ್ನೋದಾದ್ರೆ ಯಾಕೆ ಅವರನ್ನ ಹಿಡಿಲಿಲ್ಲ, ಕಂಡು ಕಂಡು ಯಾಕೆ ಬಿಟ್ಟಿರಿ. ನೈಸ್ ಕಂಪನಿ ಮಾಲೀಕ ನಿಮ್ಮನ್ನ ಭೇಟಿ ಮಾಡಲು ಬಂದಿದ್ದ ದೃಶ್ಯ ನೋಡಿದೆ. ಅವರೂ ನಿಮ್ಮನ್ನ ಟ್ರ್ಯಾಪ್ ಮಾಡಲು ಬಂದಿದ್ದಾರಾ? ಕುಂಬಳಕಾಯಿ ಕಳ್ಳರಂತೆ ಅವರೇ ವರ್ತಿಸುತ್ತಿದ್ದಾರೆ. ಅವರ ಬಳಿ ಇದು ತನಿಖೆಯಾಗಬೇಕು, ಯಾರು ಪಿತಾಮಹಾ ರಾಜ್ಯಪಾಲರ ಭೇಟಿ ಮಾಡಿದ ನಿಯೋಗದಲ್ಲಿ ಒಬ್ಬರು ಇದರ ಪಿತಾಮಹ ಎಂದಿದ್ದಾರೆ. ಅವರು ಯಾರು ಬಹಿರಂಗಪಡಿಸಬೇಕು ಎಂದು ಆಗ್ರಹಿಸಿದರು. **ಟ್ರ್ಯಾಪ್ ಮಾಡಲು ಬಂದವರನ್ನ ಯಾಕೆ ಬಿಟ್ಟರು?:** ಸಿಎಂ ಭೇಟಿಗೆ ಬಂದ್ರೆ ಫೋನ್ ಹೊರಗಿಟ್ಟು ಹೋಗಬೇಕು. ಟ್ರ್ಯಾಪ್ ಮಾಡಲು ಬಂದವರನ್ನ ಯಾಕೆ ಬಿಟ್ಟರು ಕಾಲ ಬಂದಾಗ ದಾಖಲೆ ಬಿಡ್ತಾರಂತೆ. ಕೆಲಸ ಮಾಡಲು ಆಗದೇ, ಅಕ್ರಮ ಬಯಲಿಗೆ ಎಳೆದಾಗ ಇಂತಹ ಸುದ್ದಿ ಬಿಡ್ತಾರೆ. ಇದು ಅವರಿಗೆ ಸುತ್ತಿಕೊಳ್ಳುತ್ತದೆ, ಕುಂಬಳಕಾಯಿ ಕಳ್ಳತನ ಕಥೆ ಸಿಎಂ ಹೆಗಲ ಮೇಲೆ ಕೂತಿದೆ. ರಮೇಶ್ ಜಾರಕಿಹೊಳಿ ಟ್ರ್ಯಾಪ್ ಮಾಡಿದ್ದವರು ಯಾರು? ಸತೀಶ್, ರಾಜಣ್ಣ ಅವರನ್ನ ಸೈಲೆಂಟ್ ಮಾಡಿದ್ದರು ಯಾರು? 134 ಮಂದಿ ಶಾಸಕರು ಇದ್ದಾರೆ ಸರ್ಕಾರ ಅಸ್ಥಿರ ಯಾಕೆ ಆಗುತ್ತೆ. ಬಿಜೆಪಿ ಜೆಡಿಎಸ್ ನಲ್ಲಿ ಬೆಂಬಲ ಕೊಡೋರು ಇದಾರೆ ಅಂತಾರೆ. ನಮ್ಮಗೆ ಈಗ ಸರ್ಕಾರ ಅಸ್ಥಿರ ಮಾಡುವ ಶಕ್ತಿ ಇದಿಯಾ? ಸುಳ್ಳು ಹೇಳಿಕೊಂಡು ಎಷ್ಟು ದಿನ ರಾಜಕೀಯ ಮಾಡ್ತೀರಿ? ರಾಜಕೀಯ ವಾತಾವರಣ ಹಾಳು ಮಾಡುವ ಕೆಲಸ ನಡೆಯುತ್ತಿದೆ ವಾಗ್ದಾಳಿ ನಡೆಸಿದರು.

ದೇವೇಗೌಡರ ಕುಟುಂಬವನ್ನು ಮುಗಿಸಲು ಸಿಎಂ ಇಂಥದ್ದೇ ಸಂಚು ರೂಪಿಸಿದ್ದಲ್ಲವೇ? ಎಲ್ಲಾ ಸಚಿವರ ಮೇಲೆ ತಮ್ಮ ಪೂರ್ಣ ಹಿಡಿತ ಸಾಧಿಸಲು ಇಂತಹ ಕುತಂತ್ರ ಹೆಣೆದಿದ್ದಾರೆ. ರಮೇಶ್ ಜಾರಕಿಹೊಳಿ , ಕೆ.ಎನ್.ರಾಜಣ್ಣ ಕತೆ ಮುಗಿಸಿದ್ದು ಇವರೇ ಅಲ್ಲವೇ? ಸ್ಟಿಂಗ್, ಸಿ.ಡಿ ವಿಚಾರದಲ್ಲಿ ಅವರು (ಸಿಎಂ) ದೊಡ್ಡ ಅನುಭವಸ್ಥರು. ಎಲ್ಲವನ್ನೂ ತಾವೇ ಮಾಡಿ ಪ್ರತಿಪಕ್ಷದವರ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷದ ಕೆಲವು ನಾಯಕರೇ ಸ್ಟಿಂಗ್ ಬಗ್ಗೆ ನನ್ನೊಟ್ಟಿಗೆ ಹಂಚಿಕೊಂಡಿದ್ದಾರೆ ಎಂದು ವಾಗ್ದಾಳಿ ನಡೆಸಿದರು. 'ಸಂಪುಟ ಸಭೆಯಲ್ಲಿ ಅಭಿವೃದ್ಧಿ ವಿಷಯಗಳ ಬಗ್ಗೆ ಚರ್ಚೆ ನಡೆಯುತ್ತಿತ್ತು. ಆದರೆ ಈಗ ಡಿ.ಕೆ.ಶಿವಕುಮಾರ್ ಕಾಲದಲ್ಲಿ ಹನಿ ಟ್ರ್ಯಾಪ್ , ಸ್ಟಿಂಗ್ ಆಪರೇಷನ್ ಬಗ್ಗೆ ಚರ್ಚೆ ಆಗುತ್ತಿದೆ. ಇದು ಈ ರಾಜ್ಯಕ್ಕೆ ಬಂದು ಒದಗಿಸಿರುವ ದುಸ್ಥಿತಿ. ಬೆಳಗ್ಗೆಯಿಂದ ಸಂಜೆವರೆಗೂ ಸ್ಟಿಂಗ್ ಆಪರೇಷನ್ ಮಾಡಿಸುವ ವಿಚಾರದಲ್ಲೇ ತಲೆಕೆಡಿಸಿಕೊಂಡು ಕೂತಿರುತ್ತಾರೆ. ಕಾಂಗ್ರೆಸ್ ಪಕ್ಷದ ಶಾಸಕರೇ ಈ ವಿಚಾರ ಹೇಳುತ್ತಿದ್ದಾರೆ,'' ಎಂದು ಕುಮಾರಸ್ವಾಮಿ ಆರೋಪಿಸಿದರು. ''ಸಚಿವರ ವಿರುದ್ಧ ಸ್ಟಿಂಗ್ ನಡೆಯುತ್ತಿದೆ ಎಂದಾದರೆ ಸಿಎಂ ಬಳಿ ಎಸ್‌ಐಟಿ ಇದೆಯಲ್ಲವೇ? ಈ ತಂಡಕ್ಕೆ 35 ಲಕ್ಷ ಬಹುಮಾನವನ್ನೂ ಕೊಟ್ಟಿದ್ದಾರೆ. ತನಿಖೆ ಮಾಡಿಸಲಿ. ನನ್ನನ್ನೂ ಒಳಗೊಂಡು 40 ಜನರ ಸ್ಟಿಂಗ್ ಸಿ.ಡಿ ಮಾಡಿದ್ದಾರೆ ಎಂದು ವಿಧಾನಸಭೆಯಲ್ಲೇ ಕೆ.ಎನ್.ರಾಜಣ್ಣ ಹೇಳಿದ್ದರು. ಈ ವಿಚಾರ ಏನಾಯಿತು? ಅವರ ಬಾಯಿಯನ್ನು ಹೇಗೆ ಮುಚ್ಚಿಸಿದರು ಗೊತ್ತಿಲ್ಲವೇ?,'' ಎಂದರು.

## ರಾಜ್ಯ ಕಾಂಗ್ರೆಸ್‌ನಿಂದ ಪ್ರಜಾಪ್ರಭುತ್ವ ಕರಾಳ ದಿನ ಪ್ರತಿಭಟನೆ: ಅ.10-20ರವರೆಗೆ ಮತ ಉಳಿಸಿ ದೇಶ ಉಳಿಸಿ ಪಾದಯಾತ್ರೆ

### ದಸರಾ ಸಂದರ್ಭದಲ್ಲಿ ಮತಗಳ್ಳತನದಿಂದ ಆಗುತ್ತಿರುವ ಅನಾಹುತದ ಬಗ್ಗೆ ಜನರಲ್ಲಿ ಜಾಗೃತಿ ಮಾಡಲಾಗುವುದು. ಅ.25ರಿಂದ ನ.25ರವರೆಗೆ ಹಲವು ಕಾರ್ಯಕ್ರಮ ಹಮ್ಮಿಕೊಂಡಿದ್ದು, ಸಾರ್ವಜನಿಕ ಸಭೆ ಹಾಗೂ ಮಾಧ್ಯಮಗೋಷ್ಠಿ

• **ಉದಯವಾಹಿನಿ, ಬೆಂಗಳೂರು**

ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಹಾಗೂ ಚುನಾಯಿತ ಜನಪ್ರತಿನಿಧಿಗಳ ಮೇಲಿನ ದೆಹಲಿ ಪೊಲೀಸರ ದಬ್ಬಾಳಿಕೆ ಖಂಡಿಸಿ ಇಂದು ಬೆಂಗಳೂರಿನ ಕೆಪಿಸಿಸಿ ಕಚೇರಿ ಎದುರು 'ಪ್ರಜಾಪ್ರಭುತ್ವದ ಕರಾಳ ದಿನ' ಪ್ರತಿಭಟನೆ ಹಮ್ಮಿಕೊಳ್ಳಲಾಯಿತು. ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಕೈ ಕಾರ್ಯಕರ್ತರು ಕೇಂದ್ರ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು. ಪ್ರಜಾಪ್ರಭುತ್ವದ ಧ್ವನಿಯನ್ನು ಹತ್ತಿಕ್ಕುವ ಪ್ರಯತ್ನಗಳ ವಿರುದ್ಧ ನಮ್ಮ ಹೋರಾಟ ನಿರಂತರ. ಚುನಾವಣಾ ಆಯೋಗದ ಮುಖ್ಯಸ್ಥ ಜ್ಞಾನೇಶ್ ಕುಮಾರ್ ಅವರನ್ನು ಪದಚ್ಯುತಗೊಳಿಸುವವರೆಗೆ ಹಾಗೂ ಚುನಾವಣಾ ವ್ಯವಸ್ಥೆಯಲ್ಲಿ ಪಾರದರ್ಶಕತೆ ಮತ್ತು ವಿಶ್ವಾಸಾರ್ಹತೆ ಮರುಸ್ಥಾಪನೆ ಆಗುವವರೆಗೆ ಕಾಂಗ್ರೆಸ್ ಪಕ್ಷದ ಹೋರಾಟ ನಿಲ್ಲುವುದಿಲ್ಲ ಎಂದು ಬಿ.ಕೆ.ಹರಿಪ್ರಸಾದ್ ತಿಳಿಸಿದರು. ಬಳಿಕ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಕೆಪಿಸಿಸಿ ಅಧ್ಯಕ್ಷರು, ನಿನ್ನೆ ದೆಹಲಿಯಲ್ಲಿ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಅವರು ಸುಮಾರು 300 ಜನ ಲೋಕಸಭೆ ಹಾಗೂ ರಾಜ್ಯಸಭೆ ಸದಸ್ಯರ ಇಂಡಿಯಾ ಮೈತ್ರಿಕೂಟದ ಪ್ರತಿಭಟನೆ ಮಾಡುವಾಗ ದೆಹಲಿ ಪೊಲೀಸರಿಂದ ಗೂಂಡಾಗಿರಿ ನಡೆದಿದೆ. ನಮಗೆ ಬಂದಿರುವ ಅನೇಕ ಮಾಹಿತಿಗಳ ಪ್ರಕಾರ ಕೆಲವು ಗೂಂಡಾಗಳನ್ನು ಪೊಲೀಸರ ಸಮವಸ್ತ್ರದಲ್ಲಿ ಕಳುಹಿಸಿ ಪ್ರತಿಭಟನಾಕಾರರ ವಿರುದ್ಧ ಹಲ್ಲೆ ಮಾಡಲಾಗಿದೆ ಎಂದು ಟೀಕಿಸಿದರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರಿಗೆ ಕೇಂದ್ರ ಸರ್ಕಾರ ಹಾಗೂ




ಸಂವಿಧಾನಿಕ ಸಂಸ್ಥೆಗಳ ವಿರುದ್ಧ ಪ್ರತಿಭಟನೆ ಮಾಡುವ ಸಂಪೂರ್ಣ ಅಧಿಕಾರವಿದೆ. ರಾಹುಲ್ ಗಾಂಧಿ ಅವರು ದೇಶದ ಧ್ವನಿಯಾಗಿ ಪ್ರತಿಭಟನೆ ಮಾಡುವಾಗ ಅವರ ಮೇಲೆ ಆಗಿರುವ ದಾಳಿಯನ್ನು ತೀವ್ರವಾಗಿ ಖಂಡಿಸುತ್ತೇವೆ. ಚುನಾವಣಾ ಆಯೋಗ ನಡೆದುಕೊಳ್ಳುತ್ತಿರುವ ರೀತಿ ಸರಿಯಾಗಿಲ್ಲ ಎಂದು ದೂರಿದರು. ನಿನ್ನೆ ವಿಜಯಪುರ ಜಿಲ್ಲೆಯಲ್ಲಿ ಜೀವಂತವಾಗಿರುವ ಮಹಿಳೆಯರನ್ನು ಮರಣ ಪಟ್ಟಿಯಲ್ಲಿ ಸೇರಿಸಿದ್ದು, ಅವರ ಮರಣ ಪ್ರಮಾಣಪತ್ರ ಕೂಡ ಸಲ್ಲಿಕೆ ಮಾಡಲಾಗಿದೆ. ಇದನ್ನು ನೋಡಿದರೆ ಚುನಾವಣಾ ಆಯೋಗದ ಅಧಿಕಾರಿಗಳು ಬಿಜೆಪಿ ಏಜೆಂಟರಂತೆ ಕೆಲಸ ಮಾಡುತ್ತಿರುವುದು ಸಾಬೀತಾಗುತ್ತದೆ. ಇನ್ನು ಮಲ್ಲೇಶ್ವರ ಕ್ಷೇತ್ರದಲ್ಲಿ 1,211 ಮತಗಳನ್ನು ನಾವು ಗುರುತಿಸಿದ್ದು, ಕ್ಷೇತ್ರದ ವಿವಿಧ ಮತಗಟ್ಟೆಗಳಲ್ಲಿ ಒಂದೇ ದಿನ 1,108 ಅರ್ಜಿಗಳು ಸಲ್ಲಿಕೆಯಾಗಿವೆ ಎಂದರು.

## ಉತ್ತರ ಭಾರತದವರು ಬಂದು ಸ್ಟಿಂಗ್‌ಗೆ ಯತ್ನ

ಇದೇ ವೇಳೆ ಮಾತನಾಡಿದ ಸಚಿವ ಸತೀಶ್ ಜಾರಕಿಹೊಳಿ, ಸ್ಟಿಂಗ್ ಆಪರೇಷನ್ ಬಗ್ಗೆ ಪ್ರತಿಕ್ರಿಯಿಸುತ್ತಾ, ಸಿಎಂ ಹೇಳಿದ ಮೇಲೆ ಮತ್ತೇನು ಹೇಳೋದು. ಈಗಾಗಲೇ ಕ್ಯಾಬಿನೆಟ್‌ನಲ್ಲಿ ಚರ್ಚೆ ಆಗಿದೆ. ಕೆಲವು ಸಚಿವರು ಈ ಬಗ್ಗೆ ಮಾತನಾಡಿದ್ದಾರೆ. ನಮ್ಮ ಕೋರ್ಟ್‌ನಲ್ಲಿ ಅದಿಲ್ಲ. ಸಿಎಂ ನಮ್ಮ ಜೊತೆ ಮಾಹಿತಿ ಹಂಚಿಕೊಂಡಿದ್ರು. ಉತ್ತರ ಭಾರತದವರು ಬಂದಿದ್ರು. ನನ್ನನ್ನೇ ಟ್ರ್ಯಾಪ್ ಮಾಡಲು ಯತ್ನಿಸಿದ್ರು ಅಂತ ಹೇಳಿದ್ರು. ನಿಮ್ಮನ್ನು ಬಿಡ್ತಾರ ಎಂದು ನಮಗೆ ಸಲಹೆ ಕೊಟ್ಟಿದ್ದಾರೆ ಎಂದು ತಿಳಿಸಿದರು. ಸಚಿವರನ್ನು ಟ್ರ್ಯಾಪ್ ಮಾಡಬಹುದು ಎಂದು ಎಚ್ಚರಿಸಿದ್ದಾರೆ. ಮುಂಜಾಗ್ರತಾ ಕ್ರಮ ಎಂದು ಎಚ್ಚರಿಸಿದ್ದಾರೆ. ಖಾಸಗಿ ಏಜೆನ್ಸಿಯಿಂದ ಆಗುತ್ತಿದೆ ಅನ್ನೋದಿದೆ. ಏನಾದರೂ ಆಮಿಷ ಒಡ್ಡುತ್ತಾರೆ ಎಂದು ವಿವರಿಸಿದರು.

**ಮತ ಉಳಿಸಿ ದೇಶ ಉಳಿಸಿ ಪಾದಯಾತ್ರೆ:** ಮತಕಳ್ಳತನ ಆಗುತ್ತಿರುವ ಸಂದರ್ಭದಲ್ಲಿ ಕಾಂಗ್ರೆಸ್ ಹೋರಾಟದ ಭಾಗವಾಗಿ ಅ.10ರಿಂದ ಅ.20ರವರೆಗೆ ಪ್ರತಿ ಬ್ಲಾಕ್‌ನಲ್ಲಿ 'ಮತ ಉಳಿಸಿ ದೇಶ ಉಳಿಸಿ' ಎಂಬ ಪಾದಯಾತ್ರೆ ಮಾಡುತ್ತೇವೆ. ಅಂಬೇಡ್ಕರ್ ಅಥವಾ ಗಾಂಧೀಜಿ ಅವರ ಪ್ರತಿಮೆಯಿಂದ ಡಿಸಿ ಕಚೇರಿವರೆಗೆ ಪಾದಯಾತ್ರೆ ಸಾಗುವುದು. ಈ ಪಾದಯಾತ್ರೆ 5 ಕಿ.ಮೀ ಗಿಂತ ಹೆಚ್ಚು ಇರುವುದಿಲ್ಲ.

ಬ್ಲಾಕ್‌ನ ಹಿರಿಯ ನಾಯಕರು ಭಾಗವಹಿಸಲಿದ್ದು, ಡಿಸಿ ಭೇಟಿ ಬಳಿಕ ರಾಷ್ಟ್ರಗೀತೆ ಹಾಡುವುದು ಹಾಗೂ ಜ್ಞಾನೇಶ್ ಕುಮಾರ್ ಪ್ರತಿಕೃತಿ ದಹನ ಮಾಡಲಾಗುವುದು ಎಂದರು. ದಸರಾ ಸಂದರ್ಭದಲ್ಲಿ ಮತಗಳ್ಳತನದಿಂದ ಆಗುತ್ತಿರುವ ಅನಾಹುತದ ಬಗ್ಗೆ ಜನರಲ್ಲಿ ಜಾಗೃತಿ ಮಾಡಲಾಗುವುದು. ನಂತರ ಅ.25ರಿಂದ ನ.25ರವರೆಗೆ ಹಲವು ಕಾರ್ಯಕ್ರಮ ಹಮ್ಮಿಕೊಂಡಿದ್ದು, ಸಾರ್ವಜನಿಕ ಸಭೆ ಹಾಗೂ ಮಾಧ್ಯಮಗೋಷ್ಠಿ ನಡೆಸಿ ಜನರಲ್ಲಿ ಜಾಗೃತಿ ಮೂಡಿಸಲಾಗುವುದು. ರಾಜ್ಯದ ನಾಯಕರು ಆವರವರ ಜಿಲ್ಲೆಗಳ ಹೋರಾಟದಲ್ಲಿ ಭಾಗಿಯಾಗಲಿದ್ದಾರೆ. ಬ್ಲಾಕ್ ಅಧ್ಯಕ್ಷರು ಹಾಗೂ ಬಿಎಲ್‌ಎಗಳಿಗೆ ಈ ಅಕ್ರಮದಿಂದ ಆಗುವ ಅನಾಹುತ ತಡೆಗಟ್ಟಲು ಮಾರ್ಗದರ್ಶನ ನೀಡಲಾಗುವುದು. ಇನ್ನು ಫಾರಂ-7 ಹಾಗೂ ಇತರ ಮೂಲಕ ಯಾರ ಹೆಸರನ್ನು ಮತಪಟ್ಟಿಯಿಂದ ಬಿಡಲಾಗಿದೆ ಅವರನ್ನು ಸೇರಿಸಿ ಸಭೆ ಮಾಡಲಾಗುವುದು ಎಂದರು.

**ಈ ದಿನದ ದರ** ಪೆಟ್ರೋಲ್: 111.68₹/L ಡೀಸೆಲ್ : 99.56₹/L ಬಂಗಾರ: ₹ 14,957/Gram 24ct ₹ 13,710 /Gram 22ct ಬೆಳ್ಳಿ: ₹235.00/

# ಪೆಟ್ರೋಲ್ ಪಂಪ್‌ಗೆ ಡಿಕ್ಕಿ ಹೊಡೆದು ಹೊತ್ತಿ ಉರಿದ ಜಾಗ್ವಾರ್

• ಉದಯವಾಹಿನಿ, ಬೆಂಗಳೂರು

ಸಿಲಿಕಾನ್ ಸಿಟಿಯ ಹೊರವಲಯದಲ್ಲಿ ತಡರಾತ್ರಿ ಭೀಕರ ಅಗ್ನಿ ಅವಘಡವೊಂದು ಸಂಭವಿಸಿದೆ. ಇಂಧನ ತುಂಬಿಸಲು ಬಂದ ಐಷಾರಾಮಿ ಜಾಗ್ವಾರ್ ಕಾರೊಂದು ಪೆಟ್ರೋಲ್ ಬಂಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಭಾರಿ ಬೆಂಕಿ ಕಾಣಿಸಿಕೊಂಡಿದ್ದು, ಕಾರು ಸೇರಿದಂತೆ ಇಡೀ ಬಂಕ್ ಹೊತ್ತಿ ಉರಿದ ಘಟನೆ ಅತ್ತಿಬೆಲೆ ಸಮೀಪದ ಪೆಟ್ರೋಲ್ ಬಂಕ್‌ನಲ್ಲಿ ಘಟನೆ ನಡೆದಿದೆ.

ಕರ್ನಾಟಕ–ತಮಿಳುನಾಡು ಗಡಿಯ ಸಮೀಪ ಬುಧವಾರ ರಾತ್ರಿ ಈ ಘಟನೆ ನಡೆದಿದ್ದು, ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಎಂದು ತಿಳಿದುಬಂದಿದೆ. ಕುಡ್ಲು ಗ್ರಾಮದ ನಿವಾಸಿ ಸಂಜಯ್ ಅವರು ಬುಧವಾರ ರಾತ್ರಿ ಕಾರಿಗೆ ಇಂಧನ ತುಂಬಿಸಿಕೊಳ್ಳಲು ಅತ್ತಿಬೆಲೆ ಸಮೀಪದ ಪೆಟ್ರೋಲ್ ಬಂಕ್‌ಗೆ ತೆರಳಿದ್ದರು. ಈ ವೇಳೆ ಬಂಕ್ ಸಿಬ್ಬಂದಿ ಇಂಧನ ತುಂಬಿಸುವ ವೇಳೆ ಕಾರನ್ನು ಸ್ವಲ್ಪ ಮುಂದಕ್ಕೆ ಚಲಿಸುವಂತೆ ಸಂಜಯ್ ಅವರಿಗೆ ಸೂಚಿಸಿದ್ದಾರೆ. ಈ ವೇಳೆ ಅವರು ಕಾರನ್ನು ರಿವರ್ಸ್‌ಗೆ ಹಾಕಿದ್ದು, ಬ್ರೇಕ್ ಬದಲು ಆಕ್ಸಿಲರೇಟರ್ ಒತ್ತಿದ್ದಾರೆ. ಇದರಿಂದ ನಿಯಂತ್ರಣ ತಪ್ಪಿದ ಕಾರು ಪೆಟ್ರೋಲ್ ಪಂಪ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆಯುತ್ತಿದ್ದಂತೆ ತಕ್ಷಣವೇ ಕಿಡಿ ಹೊತ್ತಿಕೊಂಡು ಇಡೀ ಜಾಗ್ವಾರ್ ಕಾರನ್ನು ಬೆಂಕಿ ಆವರಿಸಿದೆ. ಬೆಂಕಿ ತೀವ್ರಗೊಳ್ಳುತ್ತಿದ್ದಂತೆ ಕಾರಿನಲ್ಲಿದ್ದ ಚಾಲಕ ಸಂಜಯ್ ಹಾಗೂ ಆತನ ಜೊತೆಯಲ್ಲಿದ್ದ ಮಹಿಳಾ ಸಹಪ್ರಯಾಣಿಕ ತಕ್ಷಣವೇ ಕಾರಿನಿಂದ ಹೊರಗೆ ಜಿಗಿದು ಸಿನಿಮೀಯ ಶೈಲಿಯಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಆದರೆ, ಕಾರು ಡಿಕ್ಕಿ ಹೊಡೆದ ರಭಸಕ್ಕೆ ಬಂಕ್ ಉದ್ಯೋಗಿ ಗುಡ್ಡು ಕುಮಾರ್ ಎಂಬುವವರ ಕಾಲುಗಳಿಗೆ ತೀವ್ರ ಸುಟ್ಟ ಗಾಯಗಳಾಗಿದ್ದು, ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ.


ಉದಯವಾಹಿನಿ ಚಿತ್ರ

# CJP ಪ್ರತಿಭಟನೆ CEC ರಾಜೀನಾಮೆಗೆ ಬಿಗಿಪಟ್ಟು..!

• ಉದಯವಾಹಿನಿ, ಬೆಂಗಳೂರು

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸಿ ಕಾಕ್ರೋಚ್ ಜನತಾ ಪಾರ್ಟಿ ನೇತೃತ್ವದಲ್ಲಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಗುರುವಾರ ಭಾರಿ ಪ್ರತಿಭಟನೆ ನಡೆಯಿತು. ನಟ–ಸಾಮಾಜಿಕ ಕಾರ್ಯಕರ್ತ ಪ್ರಕಾಶ್ ರಾಜ್, ಯೂಟ್ಯೂಬರ್ ಧ್ರುವ್ ರಾಠೀ ಹಾಗೂ ಎಐಕೆ ಸಂಸ್ಥಾಪಕ ಅಭಿಜೀತ್ ದೀಪ್ಕೆ ಪ್ರತಿಭಟನೆಯಲ್ಲಿ ಭಾಗವಹಿಸಿ, ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆ ವಿರುದ್ಧ ಆಕ್ಷೇಪ ವ್ಯಕ್ತಪಡಿಸಿದರು.

ತೊಂದರೆಗೊಳಗಾದವರ ಸಮಸ್ಯೆಗಳನ್ನು ಆಲಿಸುವ ಉದ್ದೇಶದಿಂದ 'ಜನತಾ ನ್ಯಾಯಮಂಡಳಿ' ರೂಪದಲ್ಲಿ ಪ್ರತಿಭಟನೆ ಆಯೋಜಿಸಲಾಗಿದ್ದು, ಪ್ರಕ್ರಿಯೆ ರದ್ದುಗೊಳಿಸುವಂತೆ ಪ್ರತಿಭಟನಾಕಾರರು ಆಗ್ರಹಿಸಿದರು. ಪ್ರತಿಭಟನಾ ಸ್ಥಳದಲ್ಲಿ ಮಹಿಳೆಯರು ಹಾಗೂ ವಿದ್ಯಾರ್ಥಿಗಳು ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭಟನಾಕಾರರು ಸೇರಿದ್ದರು.

ಪ್ರಕ್ರಿಯೆ ವಿರುದ್ಧ ಘೋಷಣೆಗಳನ್ನು ಕೂಗಿದ ಅವರು, ಈ ಪ್ರಕ್ರಿಯೆಯನ್ನು ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು. ಜ್ಞಾನೇಶ್ ಕುಮಾರ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ರಾಜ್ಯಾದ್ಯಂತ ಪ್ರಕ್ರಿಯೆಯಿಂದ ತೊಂದರೆಗೊಳಗಾದವರ ಸಮಸ್ಯೆಗಳನ್ನು ಆಲಿಸುವ ಉದ್ದೇಶದಿಂದ ಪ್ರತಿಭಟನೆಯನ್ನು 'ಜನತಾ ನ್ಯಾಯಮಂಡಳಿ' ರೂಪದಲ್ಲಿ ಆಯೋಜಿಸಲಾಗಿದೆ ಎಂದು ಸಂಘಟಕರು ತಿಳಿಸಿದ್ದಾರೆ.

## ಮಾಜಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ್, ಸದಸ್ಯೆ ಗೀತಾ 13 ದಿನ ED ಕಸ್ಟಡಿಗೆ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ರಾಜ್ಯದಲ್ಲಿ ತೀವ್ರ ಸಂಚಲನ ಸೃಷ್ಟಿಸಿರುವ ಕರ್ನಾಟಕ ಲೋಕಸೇವಾ ಆಯೋಗ(ಕೆಪಿಎಸ್ ಸಿ) ನಡೆಸಿದ್ದ ಪಶುವೈದ್ಯಾಧಿಕಾರಿ ಹುದ್ದೆಗಳ ನೇಮಕಾತಿ ಹಗರಣದಲ್ಲಿ ಜೈಲು ಪಾಲಾಗಿರುವ ಕೆಪಿಎಸ್ ಸಿ ಮಾಜಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ್ ಹಾಗೂ ಸದಸ್ಯೆ ಬಿವಿ ಗೀತಾ ಅವರನ್ನು ಹೆಚ್ಚಿನ ವಿಚಾರಣೆಗಾಗಿ ಕೋರ್ಟ್ ಜಾರಿ ನಿರ್ದೇಶನಾಲಯ(ಇಡಿ)ದ ವಶಕ್ಕೆ ನೀಡಿ ಆದೇಶಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಗಳವಾರ ಎರಡನೇ ಬಾರಿ ಬೆಂಗಳೂರಿನ ಡಾಲರ್ಸ್ ಕಾಲೋನಿಯಲ್ಲಿರುವ ಶಿವಶಂಕರಪ್ಪ ಸಾಹುಕಾರ್ ಅವರ ನಿವಾಸದ ಮೇಲೆ ದಾಳಿ ನಡೆಸಿದ್ದ ಇಡಿ, ಮನೆಯಲ್ಲೇ ಇದ್ದ ಶಿವಶಂಕರಪ್ಪ ಅವರನ್ನು ಬಂಧಿಸಿತ್ತು. ಇನ್ನೊಂದೆಡೆ ಇದೇ ಪ್ರಕರಣದಲ್ಲಿ ಕೆಪಿಎಸ್‌ಸಿ ಸದಸ್ಯೆ ಬಿ.ವಿ.ಗೀತಾ ಅವರನ್ನು ಬೆಂಗಳೂರಿನ ಅವರ ಮನೆಯಲ್ಲಿ ಬಂಧಿಸಿದ್ದ ಇಡಿ ಅಧಿಕಾರಿಗಳು ಇಬ್ಬರೂ ಆರೋಪಿಗಳನ್ನು ಬೆಂಗಳೂರಿನ 4ನೇ ಸಿಸಿಎಚ್ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ಹೆಚ್ಚಿನ ವಿಚಾರಣೆಗಾಗಿ ಇಬ್ಬರು ಆರೋಪಿಗಳನ್ನು ನಮ್ಮ ವಶಕ್ಕೆ ನೀಡುವಂತೆ ಇಡಿ ಅಧಿಕಾರಿಗಳು ಕೋರ್ಟ್ ಗೆ ಮನವಿ ಮಾಡಿದರು. ಆದರೆ ಇದಕ್ಕೆ ವಿರೋಧ ವ್ಯಕ್ತಪಡಿಸಿದ ಶಿವಶಂಕರಪ್ಪ ಪರ ವಕೀಲರು, ನಮ್ಮ ಕಕ್ಷಿದಾರರು ಎಲ್ಲೂ ಹೋಗಲ್ಲ, ಇಲ್ಲೇ ಇರ್ತಾರೆ. ತನಿಖೆಗೆ ಸಹಕಾರ ನೀಡುತ್ತಾರೆ ಕಸ್ಟಡಿಗೆ ಬೇಡ ಎಂದು ವಾದಿಸಿದರು. ವಾದ, ಪ್ರತಿವಾದ ಆಲಿಸಿದ 4ನೇ ಸಿಸಿಹೆಚ್ ನ್ಯಾಯಾಲಯ, ಅಂತಿಮವಾಗಿ ಶಿವಶಂಕರಪ್ಪ ಸಾಹುಕಾರ್ ಮತ್ತು ಬಿ.ವಿ.ಗೀತಾ ಅವರನ್ನು 13 ದಿನಗಳ ಕಾಲ ಇಡಿ ಕಸ್ಟಡಿಗೆ ನೀಡಿ ಆದೇಶ ಹೊರಡಿಸಿದೆ.

## VVIP ಸಂಸ್ಕೃತಿ ವಿರುದ್ಧ ಪ್ರಯಾಣಿಕರ ಆಕ್ರೋಶ..!


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗಾಗಿ ಬೆಂಗಳೂರಿನಿಂದ ದೆಹಲಿಗೆ ಹೊರಡಬೇಕಿದ್ದ ಇಂಡಿಗೋ ವಿಮಾನವನ್ನು ತಡವಾಗಿ ಹೊರಟಿತ್ತು ಎಂಬ ಆರೋಪ ಕೇಳಿಬಂದಿದ್ದು, ಈ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಗಳು ಜೋರಾಗಿವೆ. ಇಂಡಿಗೋ ವಿಮಾನ 6ಇ 870, ಕರ್ನಾಟಕ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಆಗಮನಕ್ಕಾಗಿ ವಿಮಾನ ನಿಲ್ದಾಣದ ರನ್‌ವೇಯಲ್ಲಿ ಸುಮಾರು ಒಂದು ಗಂಟೆ ಕಾಯಬೇಕಾಯಿತು ಎಂದು ಪ್ರಯಾಣಿಕರೊಬ್ಬರು ಆರೋಪಿಸಿದ್ದಾರೆ. ಆದರೆ, ವಿಮಾನ ವಿಳಂಬಕ್ಕೆ ಕಾರ್ಯಾಚರಣೆಗೆ ಸಂಬಂಧಿಸಿದ ಕಾರಣಗಳಿದ್ದವು ಎಂದು ಇಂಡಿಗೋ ತಿಳಿಸಿದೆ. ಪ್ರಯಾಣಿಕರಾದ ಸುಪರ್ಣಾ ಸಿಂಗ್ ಅವರು ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದು, ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ (ಕೆಐಎ) ನವದೆಹಲಿಯ ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳಬೇಕಿದ್ದ ವಿಮಾನದಲ್ಲಿದ್ದ ಪ್ರಯಾಣಿಕರು ಅನಿವಾರ್ಯವಾಗಿ ಕಾಯಬೇಕಾಯಿತು. ವಿಮಾನಯಾನ ಸಂಸ್ಥೆಯಿಂದಲೂ ವಿಳಂಬದ ಬಗ್ಗೆ ಸಮರ್ಪಕ ಮಾಹಿತಿ ನೀಡಲಾಗಲಿಲ್ಲ ಎಂದು ಆರೋಪಿಸಿದ್ದಾರೆ. ಪೈಲಟ್ ಯಾವುದೇ ಕಾರಣವನ್ನು ತಿಳಿಸಲಿಲ್ಲ. ಪ್ರಯಾಣಿಕರಾದ ನಾವು ಕಾಯುವುದನ್ನು ಬಿಟ್ಟರೆ ಬೇರೆ ದಾರಿ ಇರಲಿಲ್ಲ ಎಂದು ಹೇಳಿದ್ದಾರೆ. ವಿಮಾನ ಸಂಚಾರ ಟ್ರ್ಯಾಕಿಂಗ್ ವೆಬ್‌ಸೈಟ್‌ನ ಮಾಹಿತಿಯ ಪ್ರಕಾರ, ವಿಮಾನವು ರಾತ್ರಿ 7.30ಕ್ಕೆ ಹೊರಡಬೇಕಿದ್ದರೂ ರಾತ್ರಿ 8.06ಕ್ಕೆ ಅಂದರೆ ನಿಗದಿತ ಸಮಯಕ್ಕಿಂತ ಸುಮಾರು 36 ನಿಮಿಷ ತಡವಾಗಿ ಹೊರಟಿದೆ ಎಂದು ತಿಳಿದುಬಂದಿದೆ. ಬೆಂಗಳೂರಿನಿಂದ ದೆಹಲಿಗೆ ತೆರಳಬೇಕಿದ್ದ ಇಂಡಿಗೋ 70 ವಿಮಾನವು ಮುಖ್ಯಮಂತ್ರಿ ಆಗಮಿಸುವವರೆಗೆ ನಿನ್ನೆ ರಾತ್ರಿ ರನ್‌ವೇಯಲ್ಲಿ ಒಂದು ಗಂಟೆ ಕಾಯಬೇಕಾಯಿತು.

## ರಾಬಿನ್ ಖಾಂಡೇಲ್‌ವಾಲ್, ಶ್ರೀಕಿಗೆ ಹೈಕೋರ್ಟ್ ಜಾಮೀನು

• ಉದಯವಾಹಿನಿ, ಬೆಂಗಳೂರು

ಕ್ರಿಪ್ಟೋಕರೆನ್ಸಿಗೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ ಹೂಡಿರುವ ವಿಚಾರಣೆಗೆ ಸಂಬಂಧಿಸಿದಂತೆ ರಾಬಿನ್ ಖಾಂಡೇಲ್‌ವಾಲ್ ಶ್ರೀಕೃಷ್ಣ ರಮೇಶ್ ಅಲಿಯಾಸ್ ಶ್ರೀಕಿಗೆ ಹೈಕೋರ್ಟ್ ಜಾಮೀನು ಮಂಜೂರು ಮಾಡಿದೆ. ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಅಡಿ ದಾಖಲಾದ ಪ್ರಕರಣದ ತನಿಖೆಯಲ್ಲಿ ಇದುವರೆಗೆ ಮೂವರು ಆರೋಪಿಗಳು ಒಟ್ಟು 294.93 ಕೋಟಿ ರೂಪಾಯಿ ಆದಾಯ ಗಳಿಸಿದ್ದಾರೆ ಎಂಬುದು ಬೆಳಕಿಗೆ ಬಂದಿದೆ ಎಂದು ತನಿಖಾ ಸಂಸ್ಥೆ ಆರೋಪಿಸಿದೆ. ನ್ಯಾಯಮೂರ್ತಿ ಎಸ್. ವಿಶ್ವಜಿತ್ ಶೆಟ್ಟಿ ಕೆಲವು ಷರತ್ತುಗಳೊಂದಿಗೆ ಜಾಮೀನು ಮಂಜೂರು ಮಾಡಿ ಆದೇಶ ಹೊರಡಿಸಿದ್ದಾರೆ.

ಆರೋಪಿಗಳು ತಲಾ 1 ಲಕ್ಷ ಮೊತ್ತದ ವೈಯಕ್ತಿಕ ಬಾಂಡ್ ಹಾಗೂ ಅದೇ ಮೊತ್ತಕ್ಕೆ ಇಬ್ಬರು ಜಾಮೀನುದಾರರನ್ನು ಒದಗಿಸಬೇಕು. ಅಲ್ಲದೆ, ವಿಚಾರಣಾ ನ್ಯಾಯಾಲಯದಲ್ಲಿ ನಡೆಯುವ ಎಲ್ಲಾ ವಿಚಾರಣೆಗಳ ದಿನಾಂಕದಂದು ನಿಯಮಿತವಾಗಿ ಹಾಜರಾಗಬೇಕು ಎಂದು ನ್ಯಾಯಾಲಯ ಷರತ್ತು ವಿಧಿಸಿದೆ.

## ಸಾವಿನಲ್ಲೂ ಸಾರ್ಥಕತೆ ಮೆರೆದ 19ರ ಯುವತಿ..!

• ಉದಯವಾಹಿನಿ, ಬೆಂಗಳೂರು

ಬದುಕುಳಿಯುವ ಹೋರಾಟದಲ್ಲಿ ಸೋತರೂ, ಸಾವಿನಲ್ಲೂ ಸಾರ್ಥಕತೆ ಮೆರೆದ 19 ವರ್ಷದ ಇಂಜಿನಿಯರಿಂಗ್ ವಿದ್ಯಾರ್ಥಿನಿ ಮಹಿಮಾ ಎನ್.ಕೆ. ಅವರ ಅಂಗಾಂಗ ದಾನದಿಂದ ಐವರ ಬದುಕಿಗೆ ಬೆಳಕು ನೀಡಿದ್ದಾರೆ. ಮೆದುಳಿನ ಗಡ್ಡೆಯಿಂದ ಬಳಲುತ್ತಿದ್ದ 19 ವರ್ಷದ ಮಹಿಮಾ ಅವರ ಮೆದುಳು ನಿಷ್ಕ್ರಿಯಗೊಂಡಿದೆ ಎಂದು ವೈದ್ಯರು ಘೋಷಿಸಿದ್ದರು. ಬಳಿಕ ಅವರ ಪೋಷಕರು ಅಂಗಾಂಗ ದಾನಕ್ಕೆ ಸಮ್ಮತಿಸಿದ್ದು, ಮೂತ್ರಪಿಂಡಗಳು, ಯಕೃತ್ತು, ಹೃದಯ ಹಾಗೂ ಶ್ವಾಸಕೋಶಗಳನ್ನು ದಾನ ಮಾಡಿದ್ದಾರೆ.

ಜೆ.ಸಿ. ರಸ್ತೆಯ ಟ್ರಸ್ಟ್‌ವೆಲ್ ಆಸ್ಪತ್ರೆಯಲ್ಲಿ ಮಹಿಮಾ ಅವರಿಗೆ ಚಿಕಿತ್ಸೆ ನೀಡಲಾಗುತ್ತಿತ್ತು. ವೈದ್ಯಕೀಯ ತಂಡದ ಸತತ ಪ್ರಯತ್ನಗಳ ನಡುವೆಯೂ ಅವರ ಆರೋಗ್ಯ ಸ್ಥಿತಿ ಹದಗೆಟ್ಟಿದ್ದು, ಬಳಿಕ ಅವರ ಮೆದುಳು ನಿಷ್ಕ್ರಿಯಗೊಂಡಿದೆ ಎಂದು ವೈದ್ಯರು ಘೋಷಿಸಿದರು. ಮಹಿಮಾ ಅವರ ನಿಧನದ ಬಳಿಕ ಅಂಗಾಂಗ ದಾನಕ್ಕೆ ಅವರ ಪೋಷಕರು ಒಪ್ಪಿಗೆ ನೀಡಿದರು. ಇದರ ಹಿನ್ನೆಲೆಯಲ್ಲಿ ವೈದ್ಯರು ಕಸಿ ಚಿಕಿತ್ಸೆಗೆ ಸೂಕ್ತವಾಗಿದ್ದ ಪ್ರಮುಖ ಅಂಗಾಂಗಗಳನ್ನು ಹೊರತೆಗೆದರು. ಈ ದಾನದಿಂದ ಅಂಗಾಂಗ ಕಸಿಗಾಗಿ ಕಾಯುತ್ತಿದ್ದ ಗಂಭೀರ ಸ್ಥಿತಿಯಲ್ಲಿರುವ ಐವರು ರೋಗಿಗಳಿಗೆ ಪ್ರಯೋಜನವಾಗುವ ನಿರೀಕ್ಷೆಯಿದೆ. ಅಂಗಾಂಗ ದಾನ ಪ್ರಕ್ರಿಯೆಯ ಭಾಗವಾಗಿ ಮಹಿಮಾ ಅವರ ಮೂತ್ರಪಿಂಡಗಳು, ಯಕೃತ್ತು, ಹೃದಯ ಹಾಗೂ ಶ್ವಾಸಕೋಶಗಳನ್ನು ಪಡೆಯಲಾಯಿತು. ಕುಟುಂಬದ ಈ ನಿರ್ಧಾರದಿಂದ ಹಲವು ರೋಗಿಗಳಿಗೆ ಜೀವ ಉಳಿಸಿಕೊಳ್ಳುವ ಅವಕಾಶ ದೊರೆತಿದೆ.

# ಮಧ್ಯಮ ವರ್ಗದವರಿಗೆ ಆರ್ಥಿಕ ಹೊಡೆತ, ಅಕ್ಕಿ ದರ ಗಗನಕ್ಕೆ..!

**: ಈ ಬಾರಿ ಎರಡೂ ಜಲಾನಯನ ಪ್ರದೇಶಗಳಲ್ಲಿ ತೀವ್ರ ಬರ ಆವರಿಸಿರುವುದರಿಂದ ಭತ್ತದ ಬಿತ್ತನೆ ಪ್ರದೇಶ 4 ಲಕ್ಷ ಹೆಕ್ಟೇರ್‌ಗೂ ಅಧಿಕ ಪ್ರಮಾಣದಲ್ಲಿ ಕಡಿಮೆಯಾಗಿದೆ.**

• ಉದಯವಾಹಿನಿ, ಬೆಂಗಳೂರು

**1** ರೂ.50ರಿಂದ ರೂ.75-80ಕ್ಕೆ ಏರಿಕೆಯಾಗಿದೆ

**2** 13 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆ

**3** ರೈತರಿಗೆ ನೀರು ಸಿಗದ ಪರಿಸ್ಥಿತಿ ಎದುರಾಗಲಿದೆ

ರಾಜ್ಯದಲ್ಲಿ ತೀವ್ರಗೊಳ್ಳುತ್ತಿರುವ ಬರಗಾಲದ ಬಿಸಿ ಇದೀಗ ನೇರವಾಗಿ ಜನರಿಗೆ ತಟ್ಟುತ್ತಿದೆ. ಮುಂಗಾರು ಮಳೆಯ ತೀವ್ರ ಕೊರತೆ ಮತ್ತು ಜಲಾಶಯಗಳು ಬತ್ತಿ ಹೋಗಿರುವುದರಿಂದ ರಾಜ್ಯದಲ್ಲಿ ಅಕ್ಕಿ ಉತ್ಪಾದನೆ ಕುಸಿದಿದ್ದು, ಕಳೆದ ಮೂರು ತಿಂಗಳುಗಳಲ್ಲಿ ಪ್ರಮುಖ ಅಕ್ಕಿ ತಳಿಗಳ ಬೆಲೆ ಪ್ರತಿ ಕೆಜಿಗೆ ರೂ.25 ರಿಂದ ರೂ.30 ರಷ್ಟು ಭಾರಿ ಏರಿಕೆ ಕಂಡಿದೆ.

ದೇಶದ ಪ್ರಮುಖ ಭತ್ತ ಉತ್ಪಾದಕ ರಾಜ್ಯಗಳಲ್ಲೊಂದಾದ ಕರ್ನಾಟಕದಲ್ಲಿ ಈ ಬಾರಿ ಉತ್ಪಾದನೆ ಕುಸಿಯುವ ನಿರೀಕ್ಷೆಯಿದೆ. ಜೂನ್‌ನಲ್ಲಿ ಭತ್ತದ ಬಿತ್ತನೆ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದ್ದು, ನವೆಂಬರ್‌ನಲ್ಲಿ ಕೊಯ್ಲು ಆರಂಭವಾಗಲಿದೆ. ಹೀಗಾಗಿ ಮುಂಬರುವ ತಿಂಗಳಲ್ಲಿ ಅಕ್ಕಿಯ ಪೂರೈಕೆ ಮತ್ತಷ್ಟು ಬಿಗಿಯಾಗುವ ಸಾಧ್ಯತೆ ಇದೆ ಎಂದು ವ್ಯಾಪಾರಿಗಳು ಹಾಗೂ ಉದ್ಯಮ ತಜ್ಞರು ಅಂದಾಜಿಸಿದ್ದಾರೆ. ತುಂಗಭದ್ರಾ, ಮತ್ತು ಕಾವೇರಿ ನದಿ ಜಲಾನಯನ ಪ್ರದೇಶಗಳಲ್ಲಿ ಭತ್ತವನ್ನು ಪ್ರಮುಖವಾಗಿ ಬೆಳೆಯಲಾಗುತ್ತದೆ. ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯನಗರ, ಮೈಸೂರು, ಮಂಡ್ಯ ಸೇರಿದಂತೆ ಮಲೆನಾಡಿನ ಕೆಲವು ಭಾಗಗಳಲ್ಲಿ ಭತ್ತದ ಕೃಷಿ ಹೆಚ್ಚಾಗಿದೆ.

ಕರ್ನಾಟಕದಲ್ಲಿ ಸಾಮಾನ್ಯವಾಗಿ ವಾರ್ಷಿಕ ಸುಮಾರು 13 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯಲಾಗುತ್ತದೆ. ಆದರೆ, ಈ ಬಾರಿ ಎರಡೂ ಜಲಾನಯನ ಪ್ರದೇಶಗಳಲ್ಲಿ ತೀವ್ರ ಬರ ಆವರಿಸಿರುವುದರಿಂದ ಭತ್ತದ ಬಿತ್ತನೆ ಪ್ರದೇಶ 4 ಲಕ್ಷ ಹೆಕ್ಟೇರ್‌ಗೂ ಅಧಿಕ ಪ್ರಮಾಣದಲ್ಲಿ ಕಡಿಮೆಯಾಗಿದೆ.

ಸಗಟು ಮಾರುಕಟ್ಟೆಯಲ್ಲಿ ಸೋನಾ ಮಸೂರಿ ಅಕ್ಕಿಯ ಬೆಲೆ ಕೆಜಿಗೆ ರೂ.50ರಿಂದ ರೂ.75–80ಕ್ಕೆ ಏರಿಕೆಯಾಗಿದೆ. ಇದೇ ರೀತಿ ಕೆಜಿಗೆ ಸುಮಾರು ರೂ.75ರಷ್ಟಿದ್ದ ಕೋಲಂ ಅಕ್ಕಿಯ ಬೆಲೆ ಇದೀಗ ರೂ.100ರ ಸಮೀಪಕ್ಕೆ ತಲುಪಿದೆ. ಇಂತಹ ಸಂದರ್ಭದಲ್ಲಿ ರೈತರು ಭತ್ತದ ಬದಲು ಬೇಳೆಕಾಳು, ಎಣ್ಣೆಕಾಳು ಅಥವಾ ರಾಗಿ ಬೆಳೆಗಳನ್ನು ಬೆಳೆಯುವುದು ಉತ್ತಮ ಎಂದು ಸಲಹೆ ನೀಡಿದರು. ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳ ರೈತರು ಸಾಮಾನ್ಯ ವರ್ಷಗಳಲ್ಲಿ ಎರಡು ಬೆಳೆಗಳನ್ನು ಬೆಳೆಯುತ್ತಾರೆ. ಆದರೆ, ಈ ಬಾರಿ ಪರಿಸ್ಥಿತಿ ಅತ್ಯಂತ ಹದಗೆಟ್ಟಿರುವುದರಿಂದ ಒಂದೇ ಒಂದು ಬೆಳೆಯನ್ನೂ ಕೈಗೊಳ್ಳಲು ಸಾಧ್ಯವಾಗಿಲ್ಲ ಎಂದು ತಿಳಿಸಿದ್ದಾರೆ. ಈ ಹಿಂದೆ ಅವರು ವ್ಯಾಪಾರಿಗಳಿಗೆ ಕ್ವಿಂಟಲ್‌ಗೆ ರೂ.4,600ರಿಂದ ರೂ.5,300ಕ್ಕೆ ಅಕ್ಕಿ ಮಾರಾಟ ಮಾಡುತ್ತಿದ್ದರು. ಇದೀಗ ಅದೇ ಅಕ್ಕಿಯನ್ನು ರೂ.7,500ಕ್ಕೆ ಮಾರಾಟ ಮಾಡಬೇಕಾಗಿದೆ. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಸಲಹೆಗಾರ ರಮೇಶ್ ಚಂದ್ರ ಲಹೋಟಿ ಮಾತನಾಡಿ, ಅಕ್ಕಿಯ ಬೆಲೆ ಸರಾಸರಿ ಕೆಜಿಗೆ ರೂ.25ರಿಂದ ರೂ.30ರಷ್ಟು ಹೆಚ್ಚಾಗಿದೆ ಎಂದು ತಿಳಿಸಿದ್ದಾರೆ. ಮುಂದಿನ ಒಂದು ತಿಂಗಳಿಂದ ಆರು ವಾರಗಳ ಅವಧಿಯಲ್ಲಿ ಬೆಲೆ ಮತ್ತಷ್ಟು ರೂ.10ರಷ್ಟು ಏರಿಕೆಯಾಗುವ ಸಾಧ್ಯತೆಯಿದೆ ಎಂದು ಅವರು ಎಚ್ಚರಿಸಿದ್ದಾರೆ.


ಉದಯವಾಹಿನಿ ಚಿತ್ರ

> ಕರ್ನಾಟಕದಲ್ಲಿ ಸಾಮಾನ್ಯವಾಗಿ ಜೂನ್–ಜುಲೈನಲ್ಲಿ ಭತ್ತದ ಬಿತ್ತನೆ ನಡೆಯುತ್ತದೆ. ಅಕ್ಟೋಬರ್‌ನಿಂದ ನವೆಂಬರ್‌ವರೆಗೆ, ಕೆಲವೊಮ್ಮೆ ಡಿಸೆಂಬರ್‌ವರೆಗೂ ಕೊಯ್ಲು ನಡೆಯುತ್ತದೆ. ಆದರೆ ಈ ಬಾರಿ ಬಿತ್ತನೆ ಪ್ರಮಾಣ ತೀವ್ರವಾಗಿ ಕುಸಿದಿದೆ ಎಂದು ತಿಳಿಸಿದರು.– **ಪ್ರೊ. ಎಂ.ಬಿ. ರಾಜೇಗೌಡ**

> ಮಳೆ ನಿರೀಕ್ಷಿತ ಪ್ರಮಾಣದಲ್ಲಿ ಆಗದ ಕಾರಣ ಅಣೆಕಟ್ಟುಗಳು ಬರಿದಾಗುತ್ತಿವೆ. ಕೃಷ್ಣರಾಜ ಸಾಗರ ಜಲಾಶಯದ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ಸರ್ಕಾರ ಆದ್ಯತೆ ನೀಡಿರುವುದರಿಂದ ನೀರಾವರಿ ಕಾಲುವೆಗಳಿಗೆ ನೀರು ಹರಿಸುವ ಸಾಧ್ಯತೆ ಇಲ್ಲ. ಹೀಗಾಗಿ ರೈತರು ಭತ್ತದ ಬಿತ್ತನೆ ಕೈಗೊಂಡಿಲ್ಲ ಎಂದು ಹೇಳಿದರು.– **ಉದ್ಯಮ ತಜ್ಞರು**

> ಭತ್ತವು ಅತಿ ಹೆಚ್ಚು ನೀರು ಬಳಕೆಯಾಗುವ ಬೆಳೆಗಳಲ್ಲಿ ಒಂದಾಗಿದೆ. ಒಂದು ಕೆಜಿ ಭತ್ತ ಉತ್ಪಾದಿಸಲು 3,500ರಿಂದ 4,000 ಲೀಟರ್‌ವರೆಗೆ ನೀರು ಬೇಕಾಗುತ್ತದೆ. ಅಣೆಕಟ್ಟುಗಳಲ್ಲಿ ನೀರು ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಕಾಲುವೆಗಳ ಕೊನೆಯ ಭಾಗದಲ್ಲಿರುವ ರೈತರಿಗೆ ನೀರು ಸಿಗದ ಪರಿಸ್ಥಿತಿ ಎದುರಾಗಲಿದೆ ಎಂದು ಹೇಳಿದರು.–**ಕೃಷಿ ಸಲಹೆಗಾರ ಎ.ಬಿ. ಪಾಟೀಲ್**



## ಬಂಗಾರಪ್ಪ ರವರ ಸಹಕಾರದೊಂದಿಗೆ ಆರೋಗ್ಯ ಶಿಕ್ಷಣ ನೀಡಲಾಯಿತು.


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಪೂರ್ವ ನಗರ ಪಾಲಿಕೆ ಕೃಷ್ಣರಾಜಪುರ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯ ಬಿಎಂಟಿಸಿ ಡಿಪೋ ಸಂಖ್ಯೆ 24 ಐಟಿಐ ಘಟಕಸ ವ್ಯವಸ್ಥಾಪಕರಾದ ಸಂಜೀವ್‌ಕುಮಾರ್ ಬಾಲ್ಕೆ ರವರ ಕೋರಿಕೆಯ ಮೇರೆಗೆ ಬಿಎಂಟಿಸಿ ಘಟಕದ ಕಾರ್ಮಿಕ ಸಿಬ್ಬಂದಿಗಳಿಗೆ ಕಾರ್ಯಕ್ಷೇತ್ರಗಳಲ್ಲಿ ಸಂಭವಿಸಬಹುದಾದ ಅವಗಡಗಳಿಗೆ ಪ್ರಥಮ ಚಿಕಿತ್ಸೆ ಬಗ್ಗೆ ಕೃಷ್ಣರಾಜಪುರ ಸಾರ್ವಜನಿಕ ಆಸ್ಪತ್ರೆಯ ತಜ್ಞ ವೈದ್ಯಾಧಿಕಾರಿಗಳಾದ ಡಾ. ನಕುಲ್, ಅರೆ ವೈದ್ಯಕೀಯ ಸಿಬ್ಬಂದಿಗಳಾದ ಫಿಜಿಯೋಥೆರಪಿಸ್ಟ್ ಭಾಗ್ಯಶ್ರೀ, ಸ್ಟಾಫ್ ನರ್ಸಿಂಗ್ ಆಫೀಸರ್ ಲೆವಿನ ಪಿಂಟು ,ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಗುರುರಾಜ್ , ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಶಶಿಕಲಾ , ಎಚ್‌ಐಓ ಕಿರಣ್ ಮತ್ತು ಬಂಗಾರಪ್ಪ ರವರ ಸಹಕಾರದೊಂದಿಗೆ ಆರೋಗ್ಯ ಶಿಕ್ಷಣವನ್ನು ನೀಡಲಾಯಿತು.

## ಶ್ರೀ ಮಹೇಶ್ವರಿ ದೇವಸ್ಥಾನದಲ್ಲಿ 115ನೇ ದಸರಾ ಮಹೋತ್ಸವ

• ಉದಯವಾಹಿನಿ, ಬೆಂಗಳೂರು

ಮಲ್ಲೇಶ್ವರದ ಸಂಪಿಗೆ ರಸ್ತೆಯ 8ನೇ ತಿರುವಿನಲ್ಲಿರುವ ಶ್ರೀ ಮಹೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ 115ನೇ ದಸರಾ ಮಹೋತ್ಸವದ ಅಂಗವಾಗಿ ಮಹಾಗಣಪತಿಗೆ ಹಾಗೂ ಅಮ್ಮನವರಿಗೆ ಅಕ್ಟೋಬರ್ 11 ರಿಂದ 20ರ ವರೆಗೆ ಒಂದೊಂದು ದಿನ ಒಂದೊಂದು ಅಲಂಕಾರ ಮಾಡಲಿದ್ದಾರೆ. ಸಾಂಸ್ಕೃತಿಕ ಕಾರ್ಯಕ್ರಮ ಪ್ರತಿದಿನ ಸಂಜೆ 6–30ಕ್ಕೆ : **ಅಕ್ಟೋಬರ್ 11** : ಡಾ।। ದರ್ಶಿನಿ ಮಂಜುನಾಥ್ ನಿರ್ದೇಶನದಲ್ಲಿ ನೃತ್ಯ ದಿಶಾ ಟ್ರಸ್ಟಿನ ವಿದ್ಯಾರ್ಥಿಗಳಿಂದ ಭರತನಾಟ್ಯ ಪ್ರದರ್ಶನ, **ಅಕ್ಟೋಬರ್ 12** : ಡಾ।। ಮಾಲಿನಿ ರವಿಶಂಕರ್ ನಿರ್ದೇಶನದಲ್ಲಿ ಲಾಸ್ಯ ವರ್ಧನ ಟ್ರಸ್ಟಿನ ವಿದ್ಯಾರ್ಥಿಗಳಿಂದ ಭರತನಾಟ್ಯ ಪ್ರದರ್ಶನ, **ಅಕ್ಟೋಬರ್ 13** : ವಿದ್ವಾನ್ ಶ್ರೀಧರ್ ಸಾಗರ್ ಮತ್ತು ಸಂಗಡಿಗರಿಂದ ಸ್ಯಾಕ್ಸೋಫೋನ್ ವಾದನ, **ಅಕ್ಟೋಬರ್ 14** : ಕು।। ಚಿರಂತನ ಮತ್ತು ತಂಡದವರಿಂದ ನೃತ್ಯ ಪ್ರದರ್ಶನ, **ಅಕ್ಟೋಬರ್ 15** : ಪುಷ್ಪಲತಾ ಕಲಾ ಶಾಲೆಯ ವಿದ್ಯಾರ್ಥಿಗಳಿಂದ ನೃತ್ಯ ಪ್ರದರ್ಶನ, **ಅಕ್ಟೋಬರ್ 16** : ನಾಟ್ಯ ಗುರುಕುಲ ಶಾಲೆಯ ಪದ್ಮಿನಿ, ಕಾವ್ಯ ಮತ್ತು ಪ್ರಜ್ವಲ ಇವರುಗಳಿಂದ ನೃತ್ಯ ಪ್ರದರ್ಶನ, **ಅಕ್ಟೋಬರ್ 17** : ವಿದುಷಿ ಗಾಯಿತ್ರಿ ಮಯ್ಯ ನಿರ್ದೇಶನದಲ್ಲಿ ತಮೋಹ ಆರ್ಟ್ಸ್ ಫೌಂಡೇಶನ್ ವಿದ್ಯಾರ್ಥಿಗಳಿಂದ ಭರತನಾಟ್ಯ ಪ್ರದರ್ಶನ, **ಅಕ್ಟೋಬರ್ 18** : ಶೃಂಗಾರ ಲಹರಿ ಶ್ರೀಮತಿ ಶ್ರೀವಾಣಿ ಸುಂದರೇಶ್ ಶಿಷ್ಯ ವೃಂದದವರಿಂದ ಸಂಗೀತ ಮತ್ತು ನೃತ್ಯ, **ಅಕ್ಟೋಬರ್ 20** : ಕು।। ನಿರೀಕ್ಷಾ ಎಂ. ರಾವ್ ಮತ್ತು ಸಂಗಡಿಗರಿಂದ ಜನಪದ ಮತ್ತು ಭಕ್ತಿ ಗೀತೆಗಳ ಗಾಯನ ನಂತರ ನಟರಾಜ ಕಲಾ ನಿಕೇತನ ಇವರಿಂದ ನೃತ್ಯ ಪ್ರದರ್ಶನ ಕಾರ್ಯಕ್ರಮಗಳು ಜರುಗಲಿವೆ ಎಂದು ದೇವಸ್ಥಾನದ ಪದಾಧಿಕಾರಿಗಳು ತಿಳಿಸಿದ್ದಾರೆ.



ಉದಯವಾಹಿನಿ ಚಿತ್ರ

## EPFO ವೇತನ ಮಿತಿ 15 ಸಾವಿರದಿಂದ 25 ಸಾವಿರಕ್ಕೆ ಏರಿಕೆ

• ಉದಯವಾಹಿನಿ, ಬೆಂಗಳೂರು

ಉದ್ಯೋಗಿಗಳ ಭವಿಷ್ಯನಿಧಿ ಸಂಘಟನೆಯ ವ್ಯಾಪ್ತಿಗೆ ನೌಕರರನ್ನು ಕಡ್ಡಾಯವಾಗಿ ತರುವುದಕ್ಕೆ ಇದ್ದ ವೇತನ ಮಿತಿಯನ್ನು 15 ಸಾವಿರದಿಂದ 25 ಸಾವಿರಕ್ಕೆ ಹೆಚ್ಚಿಸಿರುವುದು, ಹೆಚ್ಚಿನ ನೌಕರರನ್ನು ಇಪಿಎಫ್‌ಒ ವ್ಯಾಪ್ತಿಗೆ ತರುವ ಹಾಗೂ ನೌಕರರ ನಿವೃತ್ತಿ ಉಳಿತಾಯಕ್ಕೆ ಪಾವತಿಸುವ ಮೊತ್ತವನ್ನು ಹೆಚ್ಚಿಸುವ ನಿರೀಕ್ಷೆಯಿದೆ. ಬೆಂಗಳೂರಿನ (ಮಲ್ಲೇಶ್ವರಂ) ಆರ್ ಒ ದ ಪ್ರಾದೇಶಿಕ ಪಿಎಫ್ ಆಯುಕ್ತ–ಅನಿಕೇತ್ ಅನಿಲ್ ಅಂಬೇಕರ್, ಪಿಎಫ್ ಕೊಡುಗೆಯಲ್ಲಿನ ಹೆಚ್ಚಳವು ಉದ್ಯೋಗಿಯ ಒಟ್ಟಾರೆ ಆರ್ಥಿಕ ಸ್ಥಿತಿಯ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತದೆ ಎಂಬುದನ್ನು ಉದ್ಯೋಗಿಗಳು ಅರ್ಥಮಾಡಿಕೊಳ್ಳಬೇಕು. ಏಕೆಂದರೆ, ಇಪಿಎಫ್‌ಗೆ ಮಾಡುವ ಇಂತಹ ಕಡಿತವು ಉದ್ಯೋಗದಾತರಿಂದಲೂ ಸಮಾನ ಮೊತ್ತದ ಕೊಡುಗೆಯನ್ನು ಉದ್ಯೋಗಿಯ ಪಿಎಫ್ ಖಾತೆಗೆ ಸೇರಿಸಲು ಕಾರಣವಾಗುತ್ತದೆ. ಇದರ ಪರಿಣಾಮವಾಗಿ ಅತ್ಯುತ್ತಮ ಬಡ್ಡಿ ದರ (2025–26ರ ಆರ್ಥಿಕ ವರ್ಷದಲ್ಲಿ ವಾರ್ಷಿಕ 8.25%, ಮಾಸಿಕ ಬಾಕಿ ಮೊತ್ತದ ಆಧಾರದ ಮೇಲೆ ಚಕ್ರಬಡ್ಡಿ ಲೆಕ್ಕಾಚಾರ), ತೆರಿಗೆ–ಮುಕ್ತ ಉಳಿತಾಯ, ಮಾಸಿಕ ಪಿಂಚಣಿ ಮತ್ತು ಪ್ರೀಮಿಯಂ–ರಹಿತ ವಿಮಾ ಸೌಲಭ್ಯಗಳು ಲಭ್ಯವಾಗುತ್ತವೆ ಎಂದು ಹೇಳಿದರು. ಇದರಿಂದ ದೊರೆಯುವ ಪ್ರಯೋಜನಗಳು ಖಂಡಿತವಾಗಿಯೂ ಇಂತಹ ಹೆಚ್ಚುವರಿ ಕಡಿತಕ್ಕಿಂತ ಹೆಚ್ಚಿನ ಮೌಲ್ಯವನ್ನು ಹೊಂದಿವೆ. ಇದನ್ನು ಮಾಸಿಕ ಕೈಗೆ ಸಿಗುವ ವೇತನದಲ್ಲಿನ ಕಡಿತ ಎಂದು ನೋಡುವ ಬದಲು, ಉದ್ಯೋಗಿಗಳು ಉಳಿತಾಯ ಮಾಡುವ ವಿಧಾನದಲ್ಲಿನ ಒಂದು ಬದಲಾವಣೆ ಎಂದು ಪರಿಗಣಿಸಬೇಕು' ಎಂದು ಅಂಬೇಕರ್ ಹೇಳಿದರು.

## ಶ್ರೀ ಶಂಕರ ಕ್ಯಾನ್ಸರ್ ಫೌಂಡೇಶನ್‌ಗೆ ವೈದ್ಯಕೀಯ ಉಪಕರಣಗಳ ಹಸ್ತಾಂತರ

• ಉದಯವಾಹಿನಿ, ಬೆಂಗಳೂರು

ಶ್ರೀ ಶಂಕರ ಕ್ಯಾನ್ಸರ್ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರು ವೈದ್ಯಕೀಯ ಉಪಕರಣಗಳನ್ನು ಶ್ರೀ ಶಂಕರ ಕ್ಯಾನ್ಸರ್ ಫೌಂಡೇಶನ್‌ಗೆ ಹಸ್ತಾಂತರಿಸಿದರು. ಸಂಸದರ ಎಂಪಿ ಲಾಡ್ಸ್ ಅನುದಾನದ ಮೂಲಕ ಒದಗಿಸಲಾಗಿರುವ ಈ ವೈದ್ಯಕೀಯ ಉಪಕರಣಗಳಲ್ಲಿ ಅತ್ಯಾಧುನಿಕ ಮಲ್ಟಿಪ್ಯಾರಾಮೀಟರ್ ಪೇಷಂಟ್ ಮಾನಿಟರ್‌ಗಳು ಹಾಗೂ 16 ಸಿರಿಂಜ್ ಇನ್ಫ್ಯೂಷನ್ ಪಂಪ್‌ಗಳು ಸೇರಿವೆ. ಇವು ಶ್ರೀ ಶಂಕರ ಕ್ಯಾನ್ಸರ್ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದಲ್ಲಿ ಚಿಕಿತ್ಸೆ ಪಡೆಯುತ್ತಿರುವ ತೀವ್ರ ಅಸ್ವಸ್ಥ ಕ್ಯಾನ್ಸರ್ ರೋಗಿಗಳ ಆರೋಗ್ಯ ಮೇಲ್ವಿಚಾರಣೆ ಹಾಗೂ ನಿಖರವಾದ ಔಷಧ ವಿತರಣೆಯನ್ನು ಮತ್ತಷ್ಟು ಬಲಪಡಿಸಲು ಸಹಾಯ ಮಾಡಲಿವೆ.

ಉಪಕರಣಗಳ ಹಸ್ತಾಂತರದ ಬಳಿಕ ಸಂಸದ ತೇಜಸ್ವಿ ಸೂರ್ಯ ಅವರು ಮಾತಾಡಿ ಶ್ರೀ ಶಂಕರ ಕ್ಯಾನ್ಸರ್ ಆಸ್ಪತ್ರೆ, ಛಲ, ಬದ್ಧತೆ ಮತ್ತು ದೂರದೃಷ್ಟಿ ಇಂದಿನ ಯುವಜನತೆಗೆ ದೊಡ್ಡ ಮಾದರಿಯಾಗಿದೆ. ಅಪಾರ ಮಾನವೀಯತೆ, ಪ್ರೀತಿ ಹಾಗೂ ಸಾಮಾಜಿಕ ಬದ್ಧತೆಯಿಂದ ರೋಗಿಗಳಿಗೆ ಅತ್ಯುನ್ನತ ಚಿಕಿತ್ಸೆ ನೀಡುತ್ತಿರುವ ಕೆಲವು ಆಸ್ಪತ್ರೆಗಳಲ್ಲಿ ಶಂಕರ ಆಸ್ಪತ್ರೆ ಪ್ರಮುಖವಾದದ್ದು. ಕಳೆದ 15 ವರ್ಷಗಳಿಂದ ಎಷ್ಟೇ ಸವಾಲುಗಳು ಎದುರಾದರೂ, ಸಂಸ್ಥೆಯು ತೋರಿದ ಛಲ, ಬದ್ಧತೆ ಮತ್ತು ದೂರದೃಷ್ಟಿ ಇಂದಿನ ಯುವಜನತೆಗೆ ದೊಡ್ಡ ಮಾದರಿಯಾಗಿದೆ ಎಂದರು. ಇಂತಹ ಸಂಸ್ಥೆಗಳಿಗೆ ಕೊಟ್ಟಾಗ ಅದರ ಉಪಯೋಗ ಇನ್ನು ಜಾಸ್ತಿ ಆಗುತ್ತೆ ಅನ್ನುವಂತ ಒಂದು ಸಾರ್ಥಕ್ಯ ಭಾವ ನಮ್ಮೆಲ್ಲರಿಗೂ ಕೂಡ ಬರುತ್ತೆ ಎಂದು ಹೇಳಿದರು.


ಉದಯವಾಹಿನಿ ಚಿತ್ರ

**ತೇಜಸ್ವಿ ಸೂರ್ಯ ಅವರಿಗೆ ಧನ್ಯವಾದ**

**ಶ್ರೀ ಶಂಕರ ಕ್ಯಾನ್ಸರ್ ಫೌಂಡೇಶನ್‌ನ ಸ್ಥಾಪಕ ಮತ್ತು ಅಧ್ಯಕ್ಷರಾದ ಡಾ. ಬಿ. ಎಸ್. ಶ್ರೀನಾಥ್ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ಈ ಉಪಕರಣಗಳು ಪ್ರತಿ ಐದು ವರ್ಷಕ್ಕೊಮ್ಮೆ ಬದಲಾಗುತ್ತವೆ. ಅದಕ್ಕೆ ನಮಗೆ ಸಹಾಯ ಮಾಡಿದ ಶ್ರೀ ತೇಜಸ್ವಿ ಸೂರ್ಯ ಅವರಿಗೆ ಧನ್ಯವಾದಗಳು ಎಂದರು.**

## ನಿಗಮ ವ್ಯಾಪ್ತಿಯ ಶೇ.82ರಷ್ಟು ರಸ್ತೆಗಳು ಉತ್ತಮ ಸ್ಥಿತಿಯಲ್ಲಿ: ಸಮೀಕ್ಷೆ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಉತ್ತರ ನಗರ ನಿಗಮ ವ್ಯಾಪ್ತಿಯ 7 ವಿಭಾಗಗಳು ಹಾಗೂ 72 ವಾರ್ಡ್‌ಗಳಲ್ಲಿನ ಒಟ್ಟು 2,493.5 ಕಿ.ಮೀ ರಸ್ತೆಗಳ ಸ್ಥಿತಿಗತಿಯನ್ನು ಕೃತಕ ಬುದ್ಧಿಮತ್ತೆ ಆಧಾರಿತ ತಂತ್ರಜ್ಞಾನ ಬಳಸಿ ಸಮೀಕ್ಷೆ ನಡೆಸಲಾಗಿದೆ. ಈ ವೇಳೆ ಸಮೀಕ್ಷೆಗೊಳಪಡಿಸಿದ 2,493.5 ಕಿ.ಮೀ ರಸ್ತೆಗಳಲ್ಲಿ ಒಟ್ಟು 14,393 ರಸ್ತೆ ಗುಂಡಿಗಳು ಪತ್ತೆಯಾಗಿವೆ. ಅಂದರೆ, ನಿಗಮದ ವ್ಯಾಪ್ತಿಯಲ್ಲಿ ಪ್ರತಿ ಕಿಲೋ ಮೀಟರ್‌ಗೆ ಸರಾಸರಿ 5.8 ಗುಂಡಿಗಳಿವೆ. ವಿವಿಧ ಇಲಾಖೆಗಳು ಕೈಗೊಂಡಿರುವ ಉಪಯುಕ್ತ ಕಾಮಗಾರಿಗಳಿಂದ ರಸ್ತೆಗಳ ಮೇಲ್ಮೈಗೆ ಉಂಟಾಗಿರುವ ಹಾನಿಯನ್ನೂ ಸಮೀಕ್ಷೆಯಲ್ಲಿ ಕಂಡುಹಿಡಿಯಲಾಗಿದೆ. ಡ್ಯಾಶ್‌ಕ್ಯಾಮ್‌ಗಳ ಮೂಲಕ ನೈಜ ಸಮಯದಲ್ಲಿ ಸೆರೆಹಿಡಿದ ರಸ್ತೆ ಚಿತ್ರಗಳ ಆಧಾರದ ಮೇಲೆ ರಸ್ತೆ ಮೇಲ್ಮೈಯ ಸ್ಥಿತಿ, ಗುಂಡಿಗಳಿರುವ ಸ್ಥಳಗಳು, ದುರಸ್ತಿ ಅಗತ್ಯವಿರುವ ಪ್ರದೇಶಗಳು ಹಾಗೂ ವಿವಿಧ ಇಲಾಖೆಗಳ ಉಪಯುಕ್ತತಾ ಕಾಮಗಾರಿಗಳಿಂದ ಉಂಟಾದ ರಸ್ತೆ ಹಾನಿಯ ಕುರಿತು ಸಮಗ್ರ ಮಾಹಿತಿ ಸಂಗ್ರಹಿಸಲಾಗಿದೆ. ಒಟ್ಟು 2,493.5 ಕಿ.ಮೀ ರಸ್ತೆಗಳಲ್ಲಿ 1,426.8 ಕಿ.ಮೀ ರಸ್ತೆಗಳು ಉತ್ತಮ ಸ್ಥಿತಿಯಲ್ಲಿವೆ. 607.1 ಕಿ.ಮೀ ರಸ್ತೆಗಳ ಮೇಲ್ಮೈಯಲ್ಲಿ ಸಣ್ಣ ಪ್ರಮಾಣದ ದೋಷಗಳು ಕಂಡುಬಂದಿವೆ. ಈ ಎರಡೂ ವಿಭಾಗಗಳನ್ನು ಒಟ್ಟುಗೂಡಿಸಿದರೆ, ಸಮೀಕ್ಷೆ ನಡೆಸಿದ ಒಟ್ಟು ರಸ್ತೆ ಉದ್ದದ ಶೇ.82.1ರಷ್ಟು ರಸ್ತೆಗಳು ಉತ್ತಮದಿಂದ ಸಮರ್ಪಕ ಸ್ಥಿತಿಯಲ್ಲಿವೆ.

ಉಳಿದ ಶೇ.17.9ರಷ್ಟು ರಸ್ತೆಗಳಲ್ಲಿ ಸ್ಥಳೀಯವಾಗಿ ರಸ್ತೆ ಹಾನಿ, ವಿವಿಧ ಉಪಯುಕ್ತತಾ ಕಾಮಗಾರಿಗಳಿಂದ ಉಂಟಾದ ಹಾನಿ ಹಾಗೂ ಡಾಂಬರೀಕರಣಗೊಳ್ಳದ (ಕಚ್ಚಾ) ರಸ್ತೆಗಳ ಸಮಸ್ಯೆಗಳು ಕಂಡುಬಂದಿವೆ. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಬೆಸ್ಕಾಂ ಸೇರಿದಂತೆ ವಿವಿಧ ಇಲಾಖೆಗಳ ಉಪಯುಕ್ತತಾ ಕಾಮಗಾರಿಗಳ ವೇಳೆ ರಸ್ತೆಗಳನ್ನು ಅಗೆದು, ರಸ್ತೆ ಮೇಲ್ಮೈಗೆ ಉಂಟುಮಾಡಿರುವ ಹಾನಿಯನ್ನೂ ಸಮೀಕ್ಷೆಯಲ್ಲಿ ದಾಖಲಿಸಲಾಗಿದೆ.

# ಗೊಂದಲದ ಗೂಡಾಗುತ್ತಾ ನಗರದ ಕಾನೂನು ಸುವ್ಯವಸ್ಥೆ..?

**ಐದು ಆಯುಕ್ತರಿಗೆ ಒಟ್ಟು 6,550 ಹೆಚ್ಚುವರಿ ಹುದ್ದೆಗಳನ್ನು ಕೋರಲಾಗಿದ್ದು, ಈವರೆಗೆ ಹಣಕಾಸು ಇಲಾಖೆ ಕೇವಲ 1,022 ಹುದ್ದೆಗಳಿಗೆ ಮಾತ್ರ ಅನುಮೋದನೆ ನೀಡಿದೆ.**

• ಉದಯವಾಹಿನಿ, ಬೆಂಗಳೂರು

**1** ಇಲಾಖೆ ಅನುಮೋದನೆಯನ್ನೇ ನೀಡಿಲ್ಲ

**2** ಕೊರತೆಯೇ ಬಹುದೊಡ್ಡ ಸಮಸ್ಯೆಯಾಗಿದೆ

**3** ಸುಮಾರು 3,000 ಸಿಬ್ಬಂದಿ ಕೊರತೆಯಿದೆ

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಹೊಸ ಗಡಿರೇಖೆಗೆ ಅನುಗುಣವಾಗಿ, ಬೆಂಗಳೂರು ನಗರ ಪೊಲೀಸ್ ಕಮಿಷನರೇಟ್ ಅನ್ನು ಐದು ಪ್ರತ್ಯೇಕ ಪೊಲೀಸ್ ಕಮಿಷನರೇಟ್‌ಗಳಾಗಿ ವಿಭಜಿಸಲು ರಾಜ್ಯ ಸಚಿವ ಸಂಪುಟ ಅಧಿಕೃತ ಅನುಮೋದನೆ ನೀಡಿದೆ. ಆದರೆ, ಈ ಮಹತ್ವಾಕಾಂಕ್ಷೆಯ ಯೋಜನೆಗೆ ಈಗ ಸಿಬ್ಬಂದಿ ಕೊರತೆಯೇ ಬಹುದೊಡ್ಡ ಸಮಸ್ಯೆಯಾಗಿದೆ.

ಹೊಸ ವ್ಯವಸ್ಥೆಗೆ ಅಗತ್ಯವಿರುವ 6,550 ಹೆಚ್ಚುವರಿ ಹುದ್ದೆಗಳ ಪೈಕಿ 5,000ಕ್ಕೂ ಹೆಚ್ಚು ಹುದ್ದೆಗಳಿಗೆ ಇನ್ನೂ ಹಣಕಾಸು ಇಲಾಖೆ ಅನುಮೋದನೆಯನ್ನೇ ನೀಡಿಲ್ಲ.

ನಗರದಲ್ಲಿ ಕಾನೂನು ಸುವ್ಯವಸ್ಥೆ ಬಲಪಡಿಸುವುದು, ಅಪರಾಧ ನಿಯಂತ್ರಣ, ಸಂಚಾರ ನಿರ್ವಹಣೆ ಹಾಗೂ ಸಾರ್ವಜನಿಕ ಸುರಕ್ಷತೆಯನ್ನು ಸುಧಾರಿಸುವ ಉದ್ದೇಶದಿಂದ ಆಡಳಿತ ವಿಕೇಂದ್ರೀಕರಣ ಕೈಗೊಳ್ಳಲಾಗುತ್ತಿದೆ ಎಂದು ಸರ್ಕಾರ ಹೇಳಿದೆ. ಆದರೆ, ಅಗತ್ಯ ಪ್ರಮಾಣದ ಸಿಬ್ಬಂದಿ ಇಲ್ಲದಿದ್ದರೆ ಹೊಸ ವ್ಯವಸ್ಥೆಯ ಪರಿಣಾಮಕಾರಿತ್ವವೇ ಕುಂಠಿತವಾಗಬಹುದು ಎಂದು ಪೊಲೀಸ್ ಅಧಿಕಾರಿಗಳು ಆತಂಕ ವ್ಯಕ್ತಪಡಿಸಿದ್ದಾರೆ. ರಾಜ್ಯ ಸಚಿವ ಸಂಪುಟವು ಬೆಂಗಳೂರಿನಲ್ಲಿ ಐದು ಪೊಲೀಸ್ ಆಯುಕ್ತರೇಟುಗಳನ್ನು ರಚಿಸುವ ಪ್ರಸ್ತಾವನೆಗೆ ಅನುಮೋದನೆ ನೀಡಿದೆ. ಐದು ಆಯುಕ್ತರಿಗೆ ಒಟ್ಟು 6,550 ಹೆಚ್ಚುವರಿ ಹುದ್ದೆಗಳನ್ನು ಕೋರಲಾಗಿದ್ದು, ಈವರೆಗೆ ಹಣಕಾಸು ಇಲಾಖೆ ಕೇವಲ 1,022 ಹುದ್ದೆಗಳಿಗೆ ಮಾತ್ರ ಅನುಮೋದನೆ ನೀಡಿದೆ. ನಗರ ಪೊಲೀಸ್ ಇಲಾಖೆಯಲ್ಲೇ ಈಗಾಗಲೇ ಸುಮಾರು 3,000 ಸಿಬ್ಬಂದಿ ಕೊರತೆಯಿದೆ. ಸೇವೆಯಲ್ಲಿರುವ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಾತನಾಡಿ, ಆಡಳಿತ ವಿಕೇಂದ್ರೀಕರಣದಿಂದ ಮೇಲ್ವಿಚಾರಣೆ ಸುಧಾರಿಸುವುದರ ಜೊತೆಗೆ ಸಾರ್ವಜನಿಕರು ಹಿರಿಯ ಅಧಿಕಾರಿಗಳನ್ನು ಸುಲಭವಾಗಿ ಸಂಪರ್ಕಿಸಲು ಸಾಧ್ಯವಾಗಬಹುದು ಎಂದು ಹೇಳಿದ್ದಾರೆ. ಆದರೆ, ಹೊಸ ವ್ಯವಸ್ಥೆ ಜಾರಿಗೆ ಬಂದ ನಂತರವಷ್ಟೇ ಅದರ ಪರಿಣಾಮಕಾರಿತ್ವ ಸ್ಪಷ್ಟವಾಗಲಿದೆ ಎಂದು ಎಚ್ಚರಿಸಿದ್ದಾರೆ. ಪೊಲೀಸಿಂಗ್ ಮತ್ತು ಸಂಚಾರ ನಿರ್ವಹಣೆಯನ್ನು ಸುಧಾರಿಸುವ ಉದ್ದೇಶದಿಂದ ಸರ್ಕಾರ ಹಲವು ಪೊಲೀಸ್ ಸುಧಾರಣಾ ಕ್ರಮಗಳು ಹಾಗೂ ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದೆ. ಆದರೆ, ಇಂತಹ ಕ್ರಮಗಳಿಗೆ ಅಗತ್ಯ ಪ್ರಮಾಣದ ಸಿಬ್ಬಂದಿ ಬೆಂಬಲ ಇಲ್ಲದಿದ್ದರೆ ಅವುಗಳ ಪರಿಣಾಮ ಸೀಮಿತವಾಗಿರಲಿದೆ ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ. ಹೆಸರು ಬಹಿರಂಗಪಡಿಸದ ಷರತ್ತಿನ ಮೇಲೆ ಮಾತನಾಡಿದ ನಿವೃತ್ತ ಐಪಿಎಸ್ ಅಧಿಕಾರಿಯೊಬ್ಬರು, ಮುಖ್ಯವಾಗಿ ಆಡಳಿತಾತ್ಮಕ ಮತ್ತು ನಾಗರಿಕ ಆಡಳಿತ ವ್ಯವಸ್ಥೆಯಾಗಿದೆ. ಆದರೆ ಪೊಲೀಸ್ ವ್ಯವಸ್ಥೆಯು ಕಾನೂನು ಸುವ್ಯವಸ್ಥೆ, ಅಪರಾಧ ತನಿಖೆ, ಸಂಚಾರ ನಿರ್ವಹಣೆ ಹಾಗೂ ಸಾರ್ವಜನಿಕ ಸುರಕ್ಷತೆಯನ್ನು ಒಳಗೊಂಡ ವಿಶೇಷ ಕಾರ್ಯವ್ಯಾಪ್ತಿಯಾಗಿದೆ. ಹೀಗಾಗಿ ಎರಡೂ ವ್ಯವಸ್ಥೆಗಳನ್ನು ನೇರವಾಗಿ ಹೋಲಿಕೆ ಮಾಡಲು ಸಾಧ್ಯವಿಲ್ಲ. ಪೊಲೀಸ್ ಇಲಾಖೆಯ ಪುನರ್‌ರಚನೆ ಮಾದರಿಗೆ ಹೊಂದಿಸುವುದಕ್ಕಿಂತ ಪೊಲೀಸ್ ವ್ಯವಸ್ಥೆಯ ನೈಜ ಅಗತ್ಯಗಳನ್ನು ಆಧರಿಸಿರಬೇಕು ಎಂದು ಹೇಳಿದರು.


ಉದಯವಾಹಿನಿ ಚಿತ್ರ

> ಗ್ರೇಟರ್ ಬೆಂಗಳೂರು ಪ್ರಾಧಿಕಾರ (ವ್ಯವಸ್ಥೆಗೆ ಅನುಗುಣವಾಗಿ ನಗರ ಪೊಲೀಸ್ ವ್ಯವಸ್ಥೆಯನ್ನು ಪುನರ್‌ರಚಿಸಲು ಸರ್ಕಾರ ಮುಂದಾಗಿದೆ. ಆದರೆ, ಆಡಳಿತಾತ್ಮಕ ಪುನರ್‌ರಚನೆ ಮಾತ್ರ ನೆಲಮಟ್ಟದಲ್ಲಿ ಪೊಲೀಸರು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ನೀಡುವುದಿಲ್ಲ ಎಂದು ಹೇಳಿದ್ದಾರೆ.–**ತಜ್ಞರು**

> ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್‌ಗಳು ಹಾಗೂ ಸಿಎಆರ್ ಕಾನ್ಸ್‌ಟೇಬಲ್‌ಗಳ ನೇಮಕಾತಿ ಪ್ರಸ್ತುತ ನಡೆಯುತ್ತಿದೆ. ಆದರೆ, ಈಗ ನಡೆಯುತ್ತಿರುವ ನೇಮಕಾತಿಯಿಂದ ಪ್ರಸ್ತಾವಿತ ಐದು ಆಯುಕ್ತರೇಟುಗಳಿಗೆ ಅಗತ್ಯವಿರುವ ಸಿಬ್ಬಂದಿ ಕೊರತೆಯನ್ನು ತಕ್ಷಣವೇ ನೀಗಿಸಲು ಸಾಧ್ಯವಾಗುವುದಿಲ್ಲ ಎಂದು ಹೇಳಿದ್ದಾರೆ.– **ಹಿರಿಯ ಪೊಲೀಸ್ ಅಧಿಕಾರಿ**

23 ತಾಲ್ಲೂಕುಗಳಲ್ಲಿ ವಾಸ್ತವ ಸ್ಥಿತಿಯ ಪರಿಶೀಲನೆ ನಡೆಯುತ್ತಿದ್ದು, ಅವುಗಳಲ್ಲಿ 10 ರಿಂದ 15 ತಾಲ್ಲೂಕುಗಳು ಬರಪೀಡಿತ ಪಟ್ಟಿಗೆ ಸೇರ್ಪಡೆ

# ರಾಜ್ಯದಲ್ಲಿ ಶೇ. 90ರಷ್ಟು ಬೆಳೆ ಹಾನಿ; ಪರಿಸ್ಥಿತಿ ಗಂಭೀರ:DCM

**ಉದಯವಾಹಿನಿ, ಬಳ್ಳಾರಿ**

ಕರ್ನಾಟಕವು ಕಳೆದ ಸುಮಾರು 75 ವರ್ಷಗಳಲ್ಲಿಯೇ ಅತ್ಯಂತ ಭೀಕರ ಬರಗಾಲದ ಪರಿಸ್ಥಿತಿಯನ್ನು ಎದುರಿಸುತ್ತಿದೆ. ರಾಜ್ಯದಲ್ಲಿ ಸುಮಾರು ಶೇ. 90ರಷ್ಟು ಬೆಳೆಗಳು ಹಾನಿಗೀಡಾಗಿದ್ದು, ಈ ಸಂಕಷ್ಟದಿಂದ ರೈತರನ್ನು ರಕ್ಷಿಸುವುದು ರಾಜ್ಯ ಸರ್ಕಾರದ ಆದ್ಯತೆಯಾಗಿದೆ ಎಂದು ಉಪಮುಖ್ಯಮಂತ್ರಿ ಜಿ. ಪರಮೇಶ್ವರ ತಿಳಿಸಿದರು.

1. 217 ತಾಲ್ಲೂಕುಗಳನ್ನು ಈಗಾಗಲೇ ಬರಪೀಡಿತ
2. ಮಳೆಯ ಕೊರತೆಯಿಂದಾಗಿ ಹಾನಿಗೀಡಾಯಿತು
3. ಪರ್ಯಾಯ ಬೆಳೆಗಳನ್ನು ಬೆಳೆಯಲು ಮುಂದಾದರು

ರಾಜ್ಯದ ಒಟ್ಟು 240 ತಾಲ್ಲೂಕುಗಳ ಪೈಕಿ 217 ತಾಲ್ಲೂಕುಗಳನ್ನು ಈಗಾಗಲೇ ಬರಪೀಡಿತ ಎಂದು ಘೋಷಿಸಲಾಗಿದೆ. ಉಳಿದ 23 ತಾಲ್ಲೂಕುಗಳಲ್ಲಿ ವಾಸ್ತವ ಸ್ಥಿತಿಯ ಪರಿಶೀಲನೆ (ಗ್ರೌಂಡ್–ಟ್ರುಥಿಂಗ್) ನಡೆಯುತ್ತಿದ್ದು, ಅವುಗಳಲ್ಲಿ 10 ರಿಂದ 15 ತಾಲ್ಲೂಕುಗಳು ಬರಪೀಡಿತ ಪಟ್ಟಿಗೆ ಸೇರ್ಪಡೆಯಾಗುವ ಸಾಧ್ಯತೆಯಿದೆ ಎಂದು ಅವರು ಹೇಳಿದರು.

"ಸರ್ಕಾರ ರೈತರು ಮತ್ತು ಜನರ ನೆರವಿಗೆ ಧಾವಿಸಬೇಕಿದೆ. ಸಾಧ್ಯವಾದಷ್ಟು ಹೆಚ್ಚಿನ ನೆರವು ನೀಡಲು ನಾವು ಈಗಾಗಲೇ ಹಲವಾರು ಕ್ರಮಗಳನ್ನು ಕೈಗೊಂಡಿದ್ದೇವೆ," ಎಂದು ಕಂದಾಯ ಖಾತೆಯನ್ನು ಹೊಂದಿರುವ ಪರಮೇಶ್ವರ ಅವರು ಬಳ್ಳಾರಿಯ ಹಾಲಕುಂದಿ ಗ್ರಾಮದಲ್ಲಿ ಬರಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ ನಂತರ ಸುದ್ದಿಗಾರರಿಗೆ ತಿಳಿಸಿದರು.

"ಹಲವು ಪ್ರದೇಶಗಳಲ್ಲಿ ರೈತರು ಮೊದಲು ತೊಗರಿ ಬಿತ್ತನೆ ಮಾಡಿದ್ದರು,


ಉದಯವಾಹಿನಿ ಚಿತ್ರ

**11,000 ಕೋಟಿ ರೂ. ಕೋರಿದ್ದೇವೆ**

ನಷ್ಟದ ಮೊತ್ತ 46,000 ಕೋಟಿ ರೂ. ಎಂದು ನಾವು ಹೇಳಿದ್ದೇವೆ. ಆದರೆ ಕೇಂದ್ರದ ಮಾರ್ಗಸೂಚಿಗಳ ಪ್ರಕಾರ, ನಮಗೆ ಎಷ್ಟು ಪಡೆಯಲು ಅರ್ಹತೆ ಇದೆಯೋ ಅಷ್ಟನ್ನು ಮಾತ್ರ ಕೋರಲು ಸಾಧ್ಯ. ಅದಕ್ಕಾಗಿಯೇ ನಾವು ಪರಿಹಾರವಾಗಿ ಸುಮಾರು 11,000 ಕೋಟಿ ರೂ.ಗಳನ್ನು ಕೋರಿದ್ದೇವೆ," ಎಂದು ಜಿ. ಪರಮೇಶ್ವರ ಹೇಳಿದರು.

ಆದರೆ ಮಳೆಯ ಕೊರತೆಯಿಂದಾಗಿ ಬೆಳೆ ಹಾನಿಗೀಡಾಯಿತು. ನಂತರ ಸ್ವಲ್ಪ ಮಳೆಯಾದಾಗ ಜೋಳದಂತಹ ಪರ್ಯಾಯ ಬೆಳೆಗಳನ್ನು ಬೆಳೆಯಲು ಮುಂದಾದರು, ಆದರೆ ಅವು ಕೂಡ ವಿಫಲವಾದವು," ಎಂದು ಉಪಮುಖ್ಯಮಂತ್ರಿ ಹೇಳಿದರು.

ಕೇಂದ್ರದ ನೆರವಿಗಾಗಿ ಕಾಯದೆ, ರಾಜ್ಯ ಸರ್ಕಾರ ತನ್ನದೇ ಆದ ಸಂಪನ್ಮೂಲಗಳಿಂದ ರೈತರಿಗೆ ಪರಿಹಾರದ ಮೊದಲ ಕಂತಾಗಿ 2,500 ರೂಪಾಯಿಗಳನ್ನು ಬಿಡುಗಡೆ ಮಾಡಲು ನಿರ್ಧರಿಸಿದೆ.

ಕೇಂದ್ರದ ಮಾರ್ಗಸೂಚಿಗಳ ಪ್ರಕಾರ ಪ್ರತಿ ಹೆಕ್ಟೇರ್‌ಗೆ 8,500 ರೂಪಾಯಿ ಪರಿಹಾರ ನಿಗದಿಯಾಗಿದೆ, ಆದರೆ ಕೇಂದ್ರದಿಂದ ಇಲ್ಲಿಯವರೆಗೆ ಯಾವುದೇ ಹಣ ಬಿಡುಗಡೆಯಾಗಿಲ್ಲ ಎಂದು ಪರಮೇಶ್ವರ ತಿಳಿಸಿದರು.

> ಡಿಸಿಎಂ ಮಾಹಿತಿಯ ಪ್ರಕಾರ, ನೀರಾವರಿ ಪ್ರದೇಶಗಳು ಸೇರಿದಂತೆ ರಾಜ್ಯಾದ್ಯಂತ ಸುಮಾರು ಶೇ. 90ರಷ್ಟು ಬೆಳೆಗಳು ಹಾನಿಗೀಡಾಗಿವೆ. ಬಳ್ಳಾರಿ, ವಿಜಯನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬರ ಪರಿಸ್ಥಿತಿ ವಿಶೇಷವಾಗಿ ತೀವ್ರವಾಗಿದೆ.
> – ಜಿ. ಪರಮೇಶ್ವರ, ಡಿಸಿಎಂ

ಕೇಂದ್ರದ ಮೂರು ತಂಡಗಳು ಕರ್ನಾಟಕಕ್ಕೆ ಭೇಟಿ ನೀಡಿ ಬರಪೀಡಿತ ಪ್ರದೇಶಗಳನ್ನು ಪರಿಶೀಲಿಸಿವೆ ಎಂದು ಅವರು ಹೇಳಿದರು. ಈ ತಂಡಗಳು ಮಾದರಿ ಪರಿಶೀಲನೆ ನಡೆಸಿರುವುದರಿಂದ ಮತ್ತು ಉಪಗ್ರಹ ಆಧಾರಿತ ದತ್ತಾಂಶದ ಲಭ್ಯತೆ ಇರುವುದರಿಂದ, ಪ್ರತಿ ಹಳ್ಳಿಗೂ ಭೇಟಿ ನೀಡುವ ಅಗತ್ಯವಿರಲಿಲ್ಲ ಎಂದು ಅವರು ವಿವರಿಸಿದರು.

ರೈತರ ಸಾಲ ವಸೂಲಾತಿಯನ್ನು ಮುಂದೂಡುವಂತೆ ಹಾಗೂ ಸಾಲ ಪುನರ್‌ರಚನೆ ಮತ್ತು ಮರುಹಣಕಾಸು ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ಸರ್ಕಾರವು ಬ್ಯಾಂಕುಗಳಿಗೆ ಸೂಚನೆ ನೀಡಿದೆ ಎಂದು ಪರಮೇಶ್ವರ ತಿಳಿಸಿದರು.

ಬರ ಪರಿಹಾರ ಸಾಕಾಗದು, ಪ್ರತಿ ಎಕರೆಗೆ 50 ಸಾವಿರ ರೂ ನೀಡಿ: ಸರ್ಕಾರಕ್ಕೆ ಬಿ.ವೈ ವಿಜಯೇಂದ್ರ ಆಗ್ರಹ

ಬ್ಯಾಂಕುಗಳು ನೀಡುವ ನೋಟಿಸ್‌ಗಳ ಬಗ್ಗೆ ರೈತರು ಆತಂಕಪಡುವ ಅಗತ್ಯವಿಲ್ಲ ಎಂದು ಹೇಳಿದ ಅವರು, ಖಾಸಗಿ ಹಣಕಾಸು ಸಂಸ್ಥೆಗಳು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಿಗೂ ಇದೇ ರೀತಿಯ ಸೂಚನೆಗಳನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು.

## ಹಿಸ್ಟರಿ ಕಾಂಗ್ರೆಸ್ ನಾಯಕರಿಗೇ ಚೆನ್ನಾಗಿ ಗೊತ್ತು

**ಉದಯವಾಹಿನಿ, ಗದಗ**

ರಾಜ್ಯ ಸಚಿವರಿಗೆ ಸ್ಟಿಂಗ್ ಆಪರೇಷನ್‌ಗಳ ಬಗ್ಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೀಡಿರುವ ಎಚ್ಚರಿಕೆ ಇದೀಗ ರಾಜಕೀಯ ವಾಕ್ಸಮರಕ್ಕೆ ಕಾರಣವಾಗಿದೆ.


ಉದಯವಾಹಿನಿ ಚಿತ್ರ

ಈ ವಿಚಾರವಾಗಿ ಪ್ರತಿಕ್ರಿಯಿಸಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಸ್ಟಿಂಗ್ ಆಪರೇಷನ್ ಮತ್ತು ಬ್ಲ್ಯಾಕ್‌ಮೇಲ್‌ಗಳ ಬಗ್ಗೆ ಕಾಂಗ್ರೆಸ್ ನಾಯಕರಿಗೇ ಹೆಚ್ಚು ಗೊತ್ತಿದೆ ಎಂದು ವ್ಯಂಗ್ಯವಾಡಿದ್ದಾರೆ. ಲಂಚ ಪಡೆಯುವಾಗ ಸಚಿವರು ಬಾಗಿಲು ಮುಚ್ಚಿಕೊಂಡು, ಮೊಬೈಲ್‌ಗಳನ್ನು ಸ್ವಿಚ್ ಆಫ್ ಮಾಡಿಕೊಳ್ಳುವಂತೆ ಶಿವಕುಮಾರ್ ಸೂಚಿಸಿದ್ದಾರೆ. ಇಂತಹ ಕಾರ್ಯಾಚರಣೆ ನಡೆಸುತ್ತಿರುವ ಎರಡು ಏಜೆನ್ಸಿಗಳ ಹೆಸರುಗಳನ್ನು ಹಾಗೂ ಸ್ಟಿಂಗ್ ಆಪರೇಷನ್‌ಗಳ ಇತಿಹಾಸವನ್ನು ಅವರು ಬಹಿರಂಗಪಡಿಸಲಿ. ಈ ಬಗ್ಗೆ ನಾನು ಮಾತನಾಡುವುದಿಲ್ಲ, ಯಾರ ಹೆಸರನ್ನೂ ಹೇಳುವುದಿಲ್ಲ. ಯಾರು ಸ್ಟಿಂಗ್ ಆಪರೇಷನ್ ನಡೆಸುತ್ತಿದ್ದಾರೆ, ಯಾರು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ ಎಂಬುದು ಕಾಂಗ್ರೆಸ್ ಶಾಸಕರಿಗೆ ಹಾಗೂ ಗದಗ ಶಾಸಕ ಎಚ್.ಕೆ. ಪಾಟೀಲ್ ಅವರಿಗೆ ಗೊತ್ತಿದೆ. ಕೆಲ ದಿನಗಳ ಹಿಂದೆ ಸರ್ಕಾರದ ಭಾಗವಾಗಿರುವ ಹಿರಿಯ ಕಾಂಗ್ರೆಸ್ ನಾಯಕರೊಬ್ಬರು ರಿಯಲ್ ಎಸ್ಟೇಟ್ ಮಾಲೀಕರನ್ನು ಕರೆಸಿಕೊಂಡು, ತಮ್ಮ ಕೊಠಡಿಗೆ ಪ್ರವೇಶಿಸುವ ಮುನ್ನ ಅವರ ಗನ್‌ಮನ್‌ಗಳಿಗೆ ಮೊಬೈಲ್‌ಗಳನ್ನು ಸ್ವಿಚ್ ಆಫ್ ಮಾಡುವಂತೆ ಸೂಚಿಸಿದ್ದರು. ಬಳಿಕ ಮಾಲೀಕರ ಬಳಿ ಹೆಚ್ಚಿನ ಹಣ ನೀಡುವಂತೆ ಕೇಳಿದ್ದರು. ಆದರೆ ಅವರು ನಿರಾಕರಿಸಿದಾಗ ಕರ್ನಾಟಕವನ್ನೇ ತೊರೆಯುವಂತೆ ರಿಯಲ್ ಎಸ್ಟೇಟ್ ಉದ್ಯಮಿಗೆ ಸೂಚಿಸಿದ್ದರು. ಈ ಪ್ರಕರಣದಲ್ಲಿ ಭಾಗಿಯಾಗಿರುವವರ ಹೆಸರುಗಳನ್ನು ಮುಖ್ಯಮಂತ್ರಿ ಬಹಿರಂಗಪಡಿಸಲಿ ಎಂದು ಆಗ್ರಹಿಸಿದರು. ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಕೂಡ ಶಿವಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದ್ದು, ಮುಖ್ಯಮಂತ್ರಿ ತಮ್ಮದೇ ಮನಸ್ಥಿತಿ ಹಾಗೂ ಅನುಭವಗಳ ಆಧಾರದ ಮೇಲೆ ಸಹೋದ್ಯೋಗಿಗಳಿಗೆ ಎಚ್ಚರಿಕೆ ನೀಡುತ್ತಿದ್ದಾರೆ ಎಂದು ಹೇಳಿದ್ದಾರೆ.

## ಪರಿಸರ, ವನ್ಯಜೀವಿ ಸಂರಕ್ಷಣೆಯ ಜವಾಬ್ದಾರಿ ಎಲ್ಲರ ಮೇಲಿದೆ


ಉದಯವಾಹಿನಿ ಚಿತ್ರ

**ಉದಯವಾಹಿನಿ, ಚಿಂಚೋಳಿ**

ಅರಣ್ಯ ಪ್ರದೇಶದ ಪರಿಸರ ಮತ್ತು ವನ್ಯಜೀವಿಗಳ ಪ್ರಾಣಿಪಕ್ಷಿಗಳ ಸಂರಕ್ಷಣೆ ಮಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಜಿಲ್ಲಾ ಅರಣ್ಯ ಉಪ ಸಂರಕ್ಷಣಾಧಿಕಾರಿ ಅಶೀಶ್ ರೆಡ್ಡಿ ಹೇಳಿದರು.

ಪಟ್ಟಣದ ಚಂದಾಪೂರದ ಸರ್ಕಾರಿ ಪದವಿಪೂರ್ವ ಕಾಲೇಜು ಆವರಣದಲ್ಲಿ ತಾಲ್ಲೂಕಾ ವನ್ಯಜೀವಿ ವಲಯ ಅರಣ್ಯ ಇಲಾಖೆ ವತಿಯಿಂದ ಗುರುವಾರ ವನ್ಯಜೀವಿ ಸಂರಕ್ಷಣಾ ಸಪ್ತಾಹ 2026 ವಾಕಥಾನ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು,ಅರಣ್ಯ ಇಲಾಖೆಯಿಂದ ಪ್ರತಿವರ್ಷ ಅ.02ರಿಂದ 08ರವರಿಗೆ ವನ್ಯಜೀವಿ ಸಂರಕ್ಷಣೆ ಸಪ್ತಾಹ ನಡೆಸಿಕೊಂಡು ಬರಲಾಗುತ್ತಿದೆ ಪ್ರತಿಯೊಬ್ಬರು ವನ್ಯಜೀವಿ ಸಂರಕ್ಷಣೆ ಮತ್ತು ಪರಿಸರವನ್ನು ಸಂರಕ್ಷಣೆ ಮಾಡುವ ಕುರಿತು ಪ್ರತಿಯೊಬ್ಬರಿಗೂ ಜಾಗೃತಿ ಮೂಡಿಸಲಾಗುತ್ತಿದೆ.

ಇದರಲ್ಲಿ ಇಲಾಖೆಯೊಂದಿಗೆ ಸಾರ್ವಜನಿಕರ ಸಹಕಾರ ಬಹಳಷ್ಟು ಮುಖ್ಯವಾಗಿದೆ,ಕಲ್ಯಾಣ ಕರ್ನಾಟಕ ಪ್ರದೇಶದ ಕಲಬುರ್ಗಿ ಜಿಲ್ಲೆಯ ಅತಿಹೆಚ್ಚು ಚಿಂಚೋಳಿ ತಾಲ್ಲೂಕಿನಲ್ಲಿ 13ಸಾವಿರ ಹೇಕ್ಟರ್ ಅರಣ್ಯ ಪ್ರದೇಶವಿದೆ ಈ ಭಾಗದಲ್ಲಿ

> **ಜನರಲ್ಲಿ ಜಾಗೃತಿ**
> ಸರ್ಕಾರಿ ಬಾಲಕರ ಪದವಿಪೂರ್ವ ಕಾಲೇಜಿನಿಂದ ಚಂದ್ರಂಪಳ್ಳಿವರೆಗೆ 12ಕಿಮೀ ಕಾಲ್ನಡಿಗೆ ಮೂಲಕ ತೆರಳುತ್ತಾ ಅರಣ್ಯ ಪರಿಸರ ಮತ್ತು ವನ್ಯಜೀವಿಗಳ ಸಂರಕ್ಷಣೆ ಕುರಿತು ಬ್ಯಾನರ್,ಭೀತಿಪತ್ರಗಳು ಅಧಿಕಾರಿಗಳು ಸಾರ್ವಜನಿಕರು ಕೈಯಲ್ಲಿ ಹಿಡಿದುಕೊಂಡು ಜನರಲ್ಲಿ ಜಾಗೃತಿ ಮೂಡಿಸಿದರು.

ವನ್ಯಜೀವಿಧಾಮ ಪರಿಸರ ಮತ್ತು ಕಾಡಿನ ಸಂಪತ್ತು ಜನರಿಗೆ ಗೋತ್ತಾಗಬೇಕಾಗಿದೆ,ಈಭಾಗದ ಅಮೂಲ್ಯ ಸಂಪತ್ತು ಮತ್ತು ಕಾಡುಪ್ರಾಣಿಗಳ ಬಗ್ಗೆ ಮುಂದಿನ ಪೀಳಿಗೆಗೆ ಗೋತ್ತಾಗಬೇಕಾಗಿದೆ ಎಂದರು. ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು ಚಂದ್ರಂಪಳ್ಳಿ ಪ್ರವಾಸಿ ತಾಣ ಅತ್ಯುತ್ತಮವಾಗಿದೆ,ಈಕೋ ಸಿಸ್ಟಂನಲ್ಲಿ ಏನಾದರೂ ತೊಂದರೆಯಾದರೆ ಎಲ್ಲರಿಗೂ ಸಮಸ್ಯೆಯಾಗಲಿದೆ,ಅರಣ್ಯ ಇಲಾಖೆ ಭಾಗವನ್ನು ಅಭಿವೃದ್ಧಿಪಡಿಸಿ ಈ ಭಾಗದ ಜನರ ಅಭಿವೃದ್ಧಿಗಾಗಿ ಅರಣ್ಯ ಇಲಾಖೆ ಕೆಲಸ ಮಾಡುತ್ತಿದೆ,ಈ ಪ್ರದೇಶವನ್ನು ಅಭಿವೃದ್ಧಿಯಾದರೆ ಜಿಲ್ಲೆ ಮತ್ತು ತಾಲ್ಲೂಕಾ ಅರ್ಥಿಕವಾಗಿ ಅಭಿವೃದ್ಧಿಯಾಗುತ್ತದೆ.

## ಸುಳ್ಳು ಸುದ್ದಿ ಹರಡಿದವರ ವಿರುದ್ಧ ಮಾನನಷ್ಟ ಮೊಕದ್ದಮೆ

**ಉದಯವಾಹಿನಿ, ಬೆಳಗಾವಿ**

ತಮ್ಮ ವಿರುದ್ಧ ಸುಳ್ಳು ಸುದ್ದಿ ಹರಡುತ್ತಿರುವವರ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದು, ಆರೋಪಗಳನ್ನು ಎದುರಿಸಲು ನ್ಯಾಯಾಲಯಕ್ಕೆ ಬರಲಿ ಎಂದು ಸಚಿವ ಸತೀಶ್ ಜಾರಕಿಹೊಳಿ ಸವಾಲು ಹಾಕಿದ್ದಾರೆ. 'ಕಮಿಷನ್ ಹಣದಿಂದ ಹೆಲಿಕಾಪ್ಟರ್ ಖರೀದಿಸಿದ್ದಾರೆ' ಎಂಬ ಆರೋಪಗಳ ವರದಿಗಳಿಗೆ ಪ್ರತಿಕ್ರಿಯಿಸಿದ ಅವರು, ತಮ್ಮ ಹೆಸರಿಗೆ ಕಳಂಕ ತರುವ ಪ್ರಯತ್ನಗಳ ವಿರುದ್ಧ ಕಾನೂನು ಹೋರಾಟ ನಡೆಸುವುದಾಗಿ ಹೇಳಿದರು. ಸುಳ್ಳು ಸುದ್ದಿ ಹರಡುತ್ತಿರುವವರ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದೇವೆ. ಅವರು ನ್ಯಾಯಾಲಯಕ್ಕೆ ಬಂದು ಉತ್ತರಿಸಲಿ" ಎಂದು ಹೇಳಿದರು. ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಕುರಿತು ನಡೆಯುತ್ತಿರುವ ವಿವಾದದ ಬಗ್ಗೆ ಮಾತನಾಡಿ, ಕಾಂಗ್ರೆಸ್‌ಗೆ SIR ಬಗ್ಗೆ ಯಾವುದೇ ಭಯವಿಲ್ಲ. ಈ ಪ್ರಕ್ರಿಯೆ ಬಗ್ಗೆ ಬಿಜೆಪಿಯವರೇ ಆತಂಕಗೊಂಡಿದ್ದಾರೆ. "ನಾವು ಯಾವುದೇ ಮತಗಳನ್ನು ಅಳಿಸಿಲ್ಲ, ಹೊಸ ಮತಗಳನ್ನು ಸೇರಿಸಿಲ್ಲ. ಬಿಜೆಪಿ ನಾಯಕರಲ್ಲಿ ಗೊಂದಲವಿದೆ ಎಂದು ಹೇಳಿದರು. ಇದೇ ವೇಳೆ ಸಾವಿರಾರು ಫಾರ್ಮ್–7 ಅರ್ಜಿಗಳನ್ನು ಸಲ್ಲಿಸಲು ಬಿಜೆಪಿಗೆ ಯಾವ ಅಧಿಕಾರವಿದೆ ಎಂದು ಪ್ರಶ್ನಿಸಿದ ಅವರು, ಒಂದು ಸಂಸ್ಥೆ ಫಾರ್ಮ್‌ಗಳನ್ನು ಮುದ್ರಿಸುತ್ತಿದ್ದು, ಬಿಜೆಪಿ ಕಾರ್ಯಕರ್ತರು ಅವುಗಳಿಗೆ ಸಹಿ ಹಾಕುತ್ತಿದ್ದಾರೆ ಎಂದು ಆರೋಪಿಸಿದರು. ಯಾರ ಹೆಸರುಗಳನ್ನು ಅಳಿಸಬೇಕು ಎಂಬುದನ್ನು ಬಿಜೆಪಿ ಈಗಾಗಲೇ ನಿರ್ಧರಿಸಿಕೊಂಡಿರುವಂತೆ ಕಾಣುತ್ತಿದೆ" ಎಂದು ದೂರಿದರು. ಫಾರ್ಮ್‌ಗಳನ್ನು ಯಾವ ಸಂಸ್ಥೆ ಮುದ್ರಿಸಿದೆ ಎಂಬುದು ತನಿಖೆಯಿಂದ ಬಹಿರಂಗವಾಗಲಿದೆ ಎಂದು ಹೇಳಿದರು. ಕೊಪ್ಪಳದ ಮತದಾರರಿಗೆ ಸಂಬಂಧಿಸಿದ ಫಾರ್ಮ್–7 ಬೆಂಗಳೂರಿನಲ್ಲಿ ಹೇಗೆ ಮುದ್ರಣವಾಗಲು ಸಾಧ್ಯ?" ಎಂದು ಪ್ರಶ್ನಿಸಿದ ಅವರು, ಈ ಪ್ರಕ್ರಿಯೆ ಪೂರ್ವನಿಯೋಜಿತವಾಗಿರುವಂತೆ ಕಾಣುತ್ತಿದೆ ಎಂದು ಆರೋಪಿಸಿದರು.



## ಹಗಲಿನಲ್ಲಿ ನಿರಂತರ ವಿದ್ಯುತ್ ಪೂರೈಸದಿದ್ದರೆ ಜೆಸ್ಕಾಂ ಕಚೇರಿಗೆ ಮುತ್ತಿಗೆ

**ಉದಯವಾಹಿನಿ, ಯಲಬುರ್ಗಾ**

ತಾಲ್ಲೂಕಿನ ಬೇವೂರು ಗ್ರಾಮದ 110 ಕೆ ವಿ ಸ್ಟೇಷನ್ ವಿದ್ಯುತ್ ವಿತರಣಾ ಕೇಂದ್ರದ ಮುಂದೆ ಬೇವೂರು ಹಾಗೂ ಸುತ್ತಮುತ್ತಲಿನ ಗ್ರಾಮದ ರೈತರು ಹಗಲಿನಲ್ಲಿ ನಿರಂತರ ವಿದ್ಯುತ್ತು ಪೂರೈಸಬೇಕೆಂದು ಆಗ್ರಹಿಸಿ ಮುತ್ತಿಗೆ ಹಾಕಿ ಮಾತನಾಡಿದ ಜೆಡಿಎಸ್ ಜಿಲ್ಲಾ ವಕ್ತಾರ ಮಲ್ಲನಗೌಡ ಎಸ್ ಕೋನನಗೌಡ್ರು ಈ ಹಿಂದೆ ಹಗಲಿನಲ್ಲಿ ನಿರಂತರವಾಗಿ ಏಳು ತಾಸು ವಿದ್ಯುತ್ ಪೂರೈಸಲಾಗುತ್ತಿತ್ತು ಆದರೆ ಸರ್ಕಾರ ಏಕಾಏಕಿ ತೀವ್ರ ಬರಗಾಲದ ನಡುವೆಯೂ ಕೂಡ ವಿದ್ಯುತ್ ಪೂರೈಕೆಯಲ್ಲಿ ವ್ಯಥೆಯಉಂಟು ಮಾಡಿ ರೈತರೊಂದಿಗೆ ಕಣ್ಣಾಮುಚ್ಚಾಲೆ ಆಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ನಮ್ಮ ಭಾಗದಲ್ಲಿ ಕರಡಿಗಳ ಹಾವಳಿ ಹೆಚ್ಚಾಗಿದ್ದು ರಾತ್ರಿ ವೇಳೆಯಲ್ಲಿ ವಿದ್ಯುತ್ ಪೂರೈಸುವುದರಿಂದ ರೈತರಿಗೆ ಜೀವಕ್ಕೆ ಅಪಾಯವಿದೆ ಶೀಘ್ರವೇ ಹಗಲಿನಲ್ಲಿ ವಿದ್ಯುತ್ ಪೂರೈಸಿ ಇಲ್ಲವೇ ರೈತರಿಗೆ ವಿಷ ಕೊಡಿ ಎಂದು ಆಕ್ರೋಶ ವ್ಯಕ್ತಪಡಿಸಿದರು. ನಮ್ಮ ಭಾಗದಲ್ಲಿ ಅತಿ ಹೆಚ್ಚು ಪವನ ವಿದ್ಯುತ್ ಸ್ಥಾವರಗಳಿದ್ದು ನಮಗೆ ಸರಿಯಾಗಿ ವಿದ್ಯುತ್ ಪೂರೈಸದಿದ್ದರೆ ಹೇಗೆ ಎಂದು ಸರ್ಕಾರವನ್ನು ಪ್ರಶ್ನಿಸಿದರು.

ಧರಣಿ ಸ್ಥಳಕ್ಕೆ ಕೊಪ್ಪಳದ ಜೆಸ್ಕಾಂ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರಾದ ಮೊಟ್ಲಾ ನಾಯಕ್ ರವರು ಆಗಮಿಸಿ ರೈತರ ಬೇಡಿಕೆ ಹಗಲಿನಲ್ಲಿ ವಿದ್ಯುತ್ ಪೂರೈಸಲು ಎರಡು ದಿವಸ ಸಮಯಾವಕಾಶ ಕೇಳಿದ್ದು ಖಂಡಿತವಾಗಿಯೂ ರೈತರ ಸಮಸ್ಯೆ ನಮಗೆ ಅರ್ಥವಾಗುತ್ತಿದ್ದು ಸರ್ಕಾರ ಅತಿ ಶೀಘ್ರದಲ್ಲೇ ವಿದ್ಯುತ್ ಖರೀದಿ ಒಡಂಬಡಿಕೆಯನ್ನು ಮಾಡಿಕೊಂಡು


ಉದಯವಾಹಿನಿ ಚಿತ್ರ

ಹಗಲಿನಲ್ಲಿ ವಿದ್ಯುತ್ ಪೂರೈಕೆ ಮಾಡಲು ಒಪ್ಪಿಕೊಂಡರು. ಅಧಿಕಾರಿಗಳ ಮನವಿಗೆ ಒಪ್ಪಿದ ರೈತರು ಎರಡು ಮೂರು ದಿನದಲ್ಲಿ ಹಗಲಿನಲ್ಲಿ ನಿರಂತರ ವಿದ್ಯುತ್ ಪೂರೈಸಲು ವಿಫಲವಾದರೆ ಶನಿವಾರ ಇದೇ ಬೇವೂರು ಗ್ರಾಮದ 110 ಕೆ ವಿ ಸ್ಟೇಷನ್ ಮುಂದೆ ಅನಿರ್ದಿಷ್ಟಾವಧಿ ಆಹೋರಾತ್ರಿ ಧರಣಿ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು. ಈ ಸಂದರ್ಭದಲ್ಲಿ ಡಿವೈಎಸ್ಪಿ ಸಿದ್ದಲಿಂಗನಗೌಡ ಪಾಟೀಲ್, ಸಹಾಯಕ ಕಾರ್ಯನಿರ್ವಹಕ ಅಭಿಯಂತರರು ಜೆಸ್ಕಾಂ ಕಲಿಂ ಅಹಮದ್,ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕೆಪಿಟಿಸಿಎಲ್ ಮಹಾಂತೇಶ್, ಬೇವೂರು ಠಾಣೆಯ ಪಿಎಸ್ಐ ಕಾಳಿಂಗ ಎ, ಪ್ರೊಬೆಷನರಿ ಪಿಎಸ್ಐ ಸಂಗನಗೌಡ ಪಾಟೀಲ್, AE ನೂರ್ ಫಾತಿಮಾ ಮುಖಂಡರಾದ ಅಯ್ಯನಗೌಡ ಕೆಂಚಮ್ಮನವರ್, ಮಾನಪ್ಪ ವಾಲ್ಮೀಕಿ, ಸೋಮಲಿಂಗಪ್ಪ ಕೊಳಜಿ, ಬಸವರಾಜ ಜೆಲ್ಲಿ, ಸಿದ್ದಪ್ಪ ಮಣ್ಣಿನವರ್, ಕನಕಪ್ಪ ತಳವಾರ್, ಯಮನಪ್ಪ ವಾಲ್ಮೀಕಿ, ಬಸವಣ್ಣಪ್ಪ ಕೊಳಜಿ, ನಾಗರಾಜ ಹಾಲಳ್ಳಿ, ಯಂಕಪ್ಪ ಅಳ್ಳಳ್ಳಿ, ಯಮನಪ್ಪ ಕಂಬಳಿ, ಹನುಮೇಶ ಕೋನನಗೌಡ್ರು, ಯಮನೂರಪ್ಪ ಕಾರೇಹನಮಗೌಡ್ರು, ಶರಣಪ್ಪ ಮಕ್ಕಳ್ಳಿ ಹಾಗೂ ಮುರುಡಿ ವಣಗೇರಿ ಹುಣಸಿಹಾಳ ಕೋಳಿಹಾಳ್ ಬೇವೂರು ಹಾಗೂ ಸುತ್ತಮುತ್ತಲಿನ ಗ್ರಾಮದ ರೈತರು ಪಾಲ್ಗೊಂಡಿದ್ದರು.

ಈಗಾಗಲೇ 217 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಉಳಿದ 23 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿಯ ಸ್ಥಳ ಪರಿಶೀಲನೆ ನಡೆಯುತ್ತಿದೆ.

# ಬರ ಎಫೆಕ್ಟ್: ರೈತರ ನೆರವಿಗೆ ಧಾವಿಸಿದ ಸರ್ಕಾರ

**ಉದಯವಾಹಿನಿ, ಹೊಸಪೇಟೆ**

ರಾಜ್ಯದಲ್ಲಿ ಬರ ಪರಿಸ್ಥಿತಿಯಿಂದ ಸಂಕಷ್ಟಕ್ಕೆ ಸಿಲುಕಿರುವ ರೈತರಿಗೆ ನೆರವು ನೀಡುವ ಉದ್ದೇಶದಿಂದ ರಾಜ್ಯ ಸರ್ಕಾರ 1,250 ಕೋಟಿ ರೂ. ಬರ ಪರಿಹಾರದ ಮೊದಲ ಕಂತನ್ನು ಬಿಡುಗಡೆ ಮಾಡಿದೆ ಎಂದು ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಅವರು ಹೇಳಿದ್ದಾರೆ.

ಹೊಸಪೇಟೆ ತಾಲ್ಲೂಕಿನ ಪೊತಲಕಟ್ಟೆ ಗ್ರಾಮದಲ್ಲಿ ಬರಪೀಡಿತ ಮೆಕ್ಕೆಜೋಳದ ಜಮೀನುಗಳಿಗೆ ಭೇಟಿ ನೀಡಿ ಪರಿಶೀಲಿಸಿದ ಡಿಸಿಎಂ, ರೈತರೊಂದಿಗೆ ಸಂವಾದ ನಡೆಸಿದರು.

ಮೊದಲ ಕಂತಿನಡಿ ಅರ್ಹ ರೈತರಿಗೆ ತಲಾ 2,500 ರೂ. ಪರಿಹಾರವನ್ನು ನಿಗದಿತ ಮಾನದಂಡಗಳ ಪ್ರಕಾರ ಮುಂದಿನ 2–3 ದಿನಗಳಲ್ಲಿ ನೇರವಾಗಿ ಅವರ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಲಾಗುವುದು ಎಂದು ತಿಳಿಸಿದರು.

ಕುಡಿಯುವ ನೀರು ಪೂರೈಕೆಗಾಗಿ ರಾಜ್ಯ ಸರ್ಕಾರ ಈಗಾಗಲೇ 306 ಕೋಟಿ ರೂ. ವೆಚ್ಚ ಮಾಡಿದೆ. ತುರ್ತು ಕ್ರಮಗಳಿಗಾಗಿ ಜಿಲ್ಲಾಧಿಕಾರಿಗಳ ವೈಯಕ್ತಿಕ ಠೇವಣಿ ಖಾತೆಗಳಲ್ಲಿ 329 ಕೋಟಿ ರೂ. ಇರಿಸಲಾಗಿದೆ. ಮೇವು ನಿರ್ವಹಣೆಗೆ ಮತ್ತೊಂದು 25 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಅಗತ್ಯವಿರುವ ಕಡೆಗಳಲ್ಲಿ ಗೋಶಾಲೆ ಹಾಗೂ ಮೇವು ಬ್ಯಾಂಕ್‌ಗಳನ್ನು ತೆರೆಯಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ ಎಂದು ಹೇಳಿದರು.

ರಾಜ್ಯದಲ್ಲಿ ಬೆಳೆ ಹಾಗೂ ಆಸ್ತಿ ನಷ್ಟದ ಪ್ರಾಥಮಿಕ ಅಂದಾಜು ರೂ.50,000 ಕೋಟಿಯಿಂದ ರೂ.60,000 ಕೋಟಿಯಷ್ಟಿದೆ ಎಂದು ತಿಳಿಸಿದರು. ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿ (ಎನ್‌ಡಿಆರ್‌ಎಫ್)


ಉದಯವಾಹಿನಿ ಚಿತ್ರ

ನಿಯಮಗಳಡಿ ಕೇಂದ್ರ ಸರ್ಕಾರದಿಂದ ಸುಮಾರು ರೂ.10,000 ಕೋಟಿಯಿಂದ ರೂ.11,000 ಕೋಟಿ ನೆರವು ಕೋರಲಾಗಿದೆ. ಕೇಂದ್ರದ ಬರ ಪರಿಸ್ಥಿತಿ ಅಧ್ಯಯನ ತಂಡಗಳು ಈಗಾಗಲೇ ರಾಜ್ಯದ ವಿವಿಧ ಭಾಗಗಳಿಗೆ ಭೇಟಿ ನೀಡಿದ್ದು, ಶೀಘ್ರದಲ್ಲೇ ತಮ್ಮ ವರದಿಯನ್ನು ಸಲ್ಲಿಸುವ ನಿರೀಕ್ಷೆಯಿದೆ ಎಂದು ಹೇಳಿದರು.

ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಯಾವುದೇ ಕಾರಣಕ್ಕೂ ಸ್ಥಗಿತಗೊಳಿಸುವುದಿಲ್ಲ. ಅವುಗಳ ಅನುಷ್ಠಾನ ಮುಂದುವರಿಯಲಿದೆ. ಮೈಸೂರು ಹಾಗೂ ತುಮಕೂರು ದಸರಾ ಮಾದರಿಯಲ್ಲಿ ಐತಿಹಾಸಿಕ ಹಂಪಿ ಉತ್ಸವವನ್ನೂ ಅದ್ದೂರಿಯಾಗಿ ಆಚರಿಸಲಾಗುವುದು ಎಂದು ಹೇಳಿದರು.

ಈ ನಡುವೆ ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿಗೆ ಮಧ್ಯಂತರ ಪರಿಹಾರ ನೀಡುವಂತೆ ಕೋರಿ ಕೃಷಿ ಸಚಿವ ಪಿ.ಎಂ. ನರೇಂದ್ರಸ್ವಾಮಿ ಅವರು, ಸೋಮವಾರ ನವದೆಹಲಿಯಲ್ಲಿ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಮನವಿ ಸಲ್ಲಿಸುವ ಸಾಧ್ಯತೆ ಇದೆ.

ಕೇಂದ್ರದಿಂದ ಸುಮಾರು ರೂ.10,000 ಕೋಟಿ ಆರ್ಥಿಕ ನೆರವು ಕೋರಿದೆ. 177 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಉಂಟಾಗಿರುವುದನ್ನು ಉಲ್ಲೇಖಿಸಿ ಸರ್ಕಾರ ಮನವಿ ಸಲ್ಲಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೃಷಿ ಸಚಿವರು ಮುಂದಿನ ವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನೂ ಭೇಟಿ ಮಾಡುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ.

> ಈಗಾಗಲೇ 217 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಉಳಿದ 23 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿಯ ಸ್ಥಳ ಪರಿಶೀಲನೆ ನಡೆಯುತ್ತಿದೆ. ಶೀಘ್ರದಲ್ಲೇ ಮತ್ತಷ್ಟು 10ರಿಂದ 15 ತಾಲ್ಲೂಕುಗಳನ್ನು ಬರಪೀಡಿತ ಪಟ್ಟಿಗೆ ಸೇರಿಸುವ ಸಾಧ್ಯತೆ ಇದೆ.
> –ಡಾ. ಜಿ. ಪರಮೇಶ್ವರ್, ಉಪಮುಖ್ಯಮಂತ್ರಿ

> **ಪ್ರತಿಪಕ್ಷಗಳ ನಾಯಕರಿಗೂ ಆಹ್ವಾನ**
> ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಸರ್ವಪಕ್ಷ ನಿಯೋಗವೊಂದು ನವದೆಹಲಿಗೆ ತೆರಳಿ ಪ್ರಧಾನಿ, ಕೇಂದ್ರ ಗೃಹ ಸಚಿವ ಹಾಗೂ ಕೃಷಿ ಸಚಿವರನ್ನು ಭೇಟಿ ಮಾಡಿ ರಾಜ್ಯದ ಬರ ಪರಿಸ್ಥಿತಿಯ ಗಂಭೀರತೆಯನ್ನು ವಿವರಿಸಲಿದೆ. ಈ ನಿಯೋಗದಲ್ಲಿ ಪ್ರತಿಪಕ್ಷಗಳ ನಾಯಕರನ್ನೂ ಸೇರಲು ಆಹ್ವಾನಿಸಲಾಗುವುದು ಎಂದರು.

## ಮಿನಿ ನ್ಯೂಸ್

### ತಲೆಮರೆಸಿಕೊಂಡಿದ್ದ ವಂಚನೆ ಪ್ರಕರಣದ ಆರೋಪಿ ಬಂಧನ

**ಉದಯವಾಹಿನಿ, ಬಂಟ್ವಾಳ**

ಬ್ಯಾಂಕ್ ಉದ್ಯೋಗ ಕೊಡಿಸುವುದಾಗಿ ನಂಬಿಸಿ ಇಬ್ಬರಿಗೆ ವಂಚಿಸಿದ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಹಾಜರಾಗದೆ ಸುಮಾರು 15 ವರ್ಷಗಳಿಂದ ತಲೆಮರೆಸಿಕೊಂಡಿದ್ದ ವ್ಯಕ್ತಿಯನ್ನು ವಿಟ್ಲ ಪೊಲೀಸರು ಬಂಧಿಸಿದ್ದಾರೆ. ಬಂಧಿತ ಆರೋಪಿಯನ್ನು ಬಲ್ನಾಡು ನಿವಾಸಿ ಹಿಬ್ಬಾತುಲ್ಲ (52) ಎಂದು ಗುರುತಿಸಲಾಗಿದೆ. ಬ್ಯಾಂಕ್ನಲ್ಲಿ ಕೆಲಸ ಕೊಡಿಸುವುದಾಗಿ ಭರವಸೆ ನೀಡಿ ಇಬ್ಬರಿಂದ ಹಣ ಪಡೆದು, ಕೆಲಸವನ್ನೂ ಕೊಡಿಸದೆ, ಹಣವನ್ನೂ ಹಿಂತಿರುಗಿಸದೆ ವಂಚಿಸಿದ ಆರೋಪದ ಮೇಲೆ 2011ರಲ್ಲಿ ವಿಟ್ಲ ಪೊಲೀಸ್ ಠಾಣೆಯಲ್ಲಿ ಹಿಬ್ಬಾತುಲ್ಲ ವಿರುದ್ಧ ಪ್ರಕರಣ ದಾಖಲಾಗಿತ್ತು. ಕಾರ್ಯಾಚರಣೆಯ ಭಾಗವಾಗಿ ವಿಟ್ಲ ಪೊಲೀಸರು ಅಕ್ಟೋಬರ್ 5 ರಂದು ಆರೋಪಿಯನ್ನು ವಶಕ್ಕೆ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ನ್ಯಾಯಾಲಯವು ಆರೋಪಿಗೆ ನ್ಯಾಯಾಂಗ ಬಂಧನ ವಿಧಿಸಿದೆ.

### ಪತ್ನಿ, ಪ್ರಿಯಕರ ಸೇರಿ ನಾಲ್ವರಿಗೆ ಜೀವಾವಧಿ ಶಿಕ್ಷೆ

**ಉದಯವಾಹಿನಿ, ಕಲಬುರಗಿ**

ವಿವಾಹೇತರ ಸಂಬಂಧಕ್ಕೆ ಅಡ್ಡಿಯಾಗಿದ್ದ ಪತಿಯನ್ನು ಕೊಂದ ಪ್ರಕರಣದಲ್ಲಿ ಪತ್ನಿ, ಪ್ರಿಯಕರ ಸೇರಿದಂತೆ ನಾಲ್ವರು ಅಪರಾಧಿಗಳಿಗೆ ಇಲ್ಲಿನ ಜಿಲ್ಲಾ ನ್ಯಾಯಾಲಯವು ಜೀವಾವಧಿ ಶಿಕ್ಷೆ ಹಾಗೂ ರೂ.2.39 ಲಕ್ಷ ದಂಡ ವಿಧಿಸಿ ಆದೇಶಿಸಿದೆ.

ಚಿಂಚೋಳಿ ತಾಲ್ಲೂಕಿನ ಕುಡ್ಡಳ್ಳಿ ಗ್ರಾಮದಲ್ಲಿ 2022ರ ಆಗಸ್ಟ್ 5ರಂದು ಕೊಲೆಯಾಗಿದ್ದ ರಾಮಣ್ಣ ಗೋಟೂರ ಅವರ ಪತ್ನಿ ಸುನೀತಾ ಗೋಟೂರ,ಪ್ರಿಯಕರ ಮಲ್ಲಪ್ಪ ಪೂಜಾರಿ, ಅವರಿಗೆ ನೆರವು ನೀಡಿದ್ದ ಸಾಬಣ್ಣ ಪೂಜಾರಿ ಹಾಗೂ ಬಸಪ್ಪ ಗೋಟೂರ ಶಿಕ್ಷೆಗೆ ಒಳಗಾದವರು. ರಾಮಣ್ಣ ಹಾಗೂ ಮಲ್ಲಪ್ಪ ಪರಸ್ಪರ ಸ್ನೇಹಿತರು. ರಾಮಣ್ಣನ ಮನೆಗೆ ಹೋಗುತ್ತಿದ್ದ ಮಲ್ಲಪ್ಪ ಕ್ರಮೇಣ ರಾಮಣ್ಣನ ಪತ್ನಿ ಜೊತೆಗೆ ವಿವಾಹೇತರ ಸಂಬಂಧ ಹೊಂದಿದ್ದ. ಈ ವಿಷಯ ರಾಮಣ್ಣನಿಗೆ ತಿಳಿದಾಗ ರಾಜಿ ಪಂಚಾಯಿತಿಯೂ ನಡೆದಿತ್ತು. ಈ ನಡುವೆ ತಮ್ಮ ಸಂಬಂಧಕ್ಕೆ ಅಡ್ಡಿಯಾಗಿದ್ದ ರಾಮಣ್ಣನ ಕೊಲೆಗೆ ಮಲ್ಲಪ್ಪ ಹಾಗೂ ಸುನೀತಾ ನಿರ್ಧರಿಸಿದ್ದರು. ಅದರಂತೆ ಒಂದು ದಿವಸ ತಡರಾತ್ರಿ ರಾಮಣ್ಣ ಮಲಗಿದ್ದಾಗ ಸುನೀತಾ ಅವರೇ ಎದ್ದು ಬಾಗಿಲು ತೆಗೆದು ಮಲ್ಲಪ್ಪ, ಸಾಬಣ್ಣ ಹಾಗೂ ಬಸಪ್ಪ ಅವರನ್ನು ಮನೆಯೊಳಗೆ ಬಿಟ್ಟುಕೊಂಡಿದ್ದರು. ಬಳಿಕ ಆ ಮೂವರು ಸೇರಿ ಕೊಲೆ ಮಾಡಿದ್ದರು. ಈ ನಡುವೆ ರಾಮಣ್ಣನ ಮಕ್ಕಳು ಎಚ್ಚರಗೊಂಡಿದ್ದರು. ಅವರನ್ನು ತಾಯಿ ಸುನೀತಾ ಅವರೇ ಬೇರೊಂದು ಕೊಠಡಿಯಲ್ಲಿ ಕೂಡಿಹಾಕಿದ್ದರು. ಕೊಲೆ ಬಳಿಕ ಶವ ಸಾಗಿಸುವಾಗ ರಾಮಣ್ಣನ ಮಕ್ಕಳಲ್ಲಿ ಒಬ್ಬ ತಪ್ಪಿಸಿಕೊಂಡು ಅವರ ದೊಡ್ಡಪ್ಪನಿಗೆ ವಿಷಯ ಮುಟ್ಟಿಸಿದಾಗ ವಿಷಯ ಬೆಳಕಿಗೆ ಬಂದಿತ್ತು. ಈ ಕುರಿತು ಚಿಂಚೋಳಿ ತಾಲ್ಲೂಕಿನ ಸುಲೇಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

### ಪ್ರಜ್ಞೆ ತಪ್ಪಿದ ಮಹಿಳೆ; ಆಸ್ಪತ್ರೆಗೆ ಬಸ್ ಚಲಾಯಿಸಿ ಮಾನವೀಯತೆ ಮೆರೆದ ಚಾಲಕ

**ಉದಯವಾಹಿನಿ, ಬೆಳ್ತಂಗಡಿ**

ಚಲಿಸುತ್ತಿದ್ದ ಕೆಎಸ್‌ಆರ್ಟಿಸಿ ಬಸ್ಸಿನಲ್ಲಿ ಮಹಿಳಾ ಪ್ರಯಾಣಿಕರೊಬ್ಬರು ದಿಢೀರ್ ಪ್ರಜ್ಞೆತಪ್ಪಿ ಅಸ್ವಸ್ಥರಾಗಿದ್ದು, ಬಸ್ ಚಾಲಕ ಮತ್ತು ನಿರ್ವಾಹಕ ಬಸ್ಸನ್ನೇ ನೇರವಾಗಿ ಆಸ್ಪತ್ರೆಗೆ ಚಲಾಯಿಸಿ ಜೀವ ಉಳಿಸಿ ಸಮಯಪ್ರಜ್ಞೆ ಹಾಗೂ ಮಾನವೀಯತೆ ಮೆರೆದ ಘಟನೆ ನಡೆದಿದೆ. ದಾವಣಗೆರೆಯಿಂದ ಮಂಗಳೂರಿಗೆ ಸಂಚರಿಸುತ್ತಿದ್ದ ಕೆಎಸ್‌ಆರ್ಟಿಸಿ ಬಸ್ಸಿನಲ್ಲಿ ಅ.6ರ ಸಂಜೆ ಸುಮಾರು 4 ಗಂಟೆಗೆ ಈ ಘಟನೆ ಸಂಭವಿಸಿದೆ. ಬಸ್ಸಿನಲ್ಲಿದ್ದ ಮಹಿಳೆಯೊಬ್ಬರು ಏಕಾಏಕಿ ಪ್ರಜ್ಞೆ ತಪ್ಪಿ ಬಿದ್ದಿದ್ದು, ಮಾತನಾಡಲು ಅಥವಾ ದೇಹವನ್ನು ಚಲಿಸಲು ಸಾಧ್ಯವಾಗದ ಸ್ಥಿತಿಯಲ್ಲಿದ್ದರು. ಇದನ್ನು ಗಮನಿಸಿದ ಸಹಪ್ರಯಾಣಿಕರು ತಕ್ಷಣವೇ ಬಸ್ ಸಿಬ್ಬಂದಿಗೆ ಮಾಹಿತಿ ನೀಡಿದ್ದಾರೆ. ಪರಿಸ್ಥಿತಿಯ ಗಂಭೀರತೆಯನ್ನು ಅರಿತ ಚಾಲಕ ಕಿರಣ್ ಹಾಗೂ ನಿರ್ವಾಹಕ ಸಂತೋಷ್ ಸಂಗಪ್ಪ ಗೌಡ ಅವರು ತಕ್ಷಣವೇ ಕಾರ್ಯಪ್ರವೃತ್ತರಾದರು. ಬಸ್ಸು ಬೆಳ್ತಂಗಡಿ ತಾಲ್ಲೂಕಿನ ಕಕ್ಕಿಂಜೆ ತಲುಪುತ್ತಿದ್ದಂತೆಯೇ, ಮಾರ್ಗ ಬದಲಾಯಿಸಿ ಸಮೀಪದಲ್ಲೇ ಇದ್ದ ಶ್ರೀ ಕೃಷ್ಣ ಆಸ್ಪತ್ರೆಗೆ ಬಸ್ಸನ್ನು ನೇರವಾಗಿ ಕೊಂಡೊಯ್ದರು. ಮಹಿಳೆಗೆ ತಕ್ಷಣವೇ ತುರ್ತು ವೈದ್ಯಕೀಯ ಚಿಕಿತ್ಸೆ ಸಿಗುವಂತೆ ನೋಡಿಕೊಂಡರು. ಈ ತುರ್ತು ಸಂದರ್ಭದಲ್ಲಿ ಸ್ಥಳೀಯರಾದ ಅಶ್ರಫ್ ಚಾರ್ಮಾಡಿ, ಫಾರೂಕ್ ಕಕ್ಕಿಂಜೆ ಹಾಗೂ ನೌಫಲ್ ಕಕ್ಕಿಂಜೆ ಅವರು ಕೂಡ ಮಹಿಳೆಯ ನೆರವಿಗೆ ನಿಂತು ಸಾಥ್ ನೀಡಿದರು. ಅಸ್ವಸ್ಥಗೊಂಡ ಪ್ರಯಾಣಿಕರನ್ನು ಬಾಳೆಹೊನ್ನೂರು ನಿವಾಸಿ ಅನ್ನಪೂರ್ಣ ಎಂದು ಗುರುತಿಸಲಾಗಿದೆ. ಪ್ರಸ್ತುತ ಕಕ್ಕಿಂಜೆಯ ಶ್ರೀ ಕೃಷ್ಣ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಅವರು ಚಿಕಿತ್ಸೆಗೆ ಸ್ಪಂದಿಸುತ್ತಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ ಎಂದು ವೈದ್ಯರು ದೃಢಪಡಿಸಿದ್ದಾರೆ.

### ಹೆಚ್.ಎಸ್.ಕೆ ಪಾಲಿಟೆಕ್ನಿಕ್ನಲ್ಲಿ ರಕ್ತದಾನ ಶಿಬಿರ

**ಉದಯವಾಹಿನಿ, ಬಳ್ಳಾರಿ**

ನಗರದ ವಿವಿ ಸಂಘದ ಅಧೀನದಲ್ಲಿರುವ ಹಾನಗಲ್ ಶ್ರೀ ಕುಮಾರೇಶ್ವರ ಪಾಲಿಟೆಕ್ನಿಕ್ ತಾಂತ್ರಿಕ ವಿದ್ಯಾಲಯದಲ್ಲಿ ನಿನ್ನೆ ಹೆಚ್.ಎಸ್.ಕೆ ಪಾಲಿಟೆಕ್ನಿಕ್ನ ಎನ್.ಎಸ್.ಎಸ್ ಘಟಕ ಹಾಗೂ ಸ್ಪಂದನಾ ಬ್ಲಡ್ ಬ್ಯಾಂಕ್ ಸಹಯೋಗದೊಂದಿಗೆ ಕಾಲೇಜಿನಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಸ್ಪಂದನಾ ಬ್ಲಡ್ ಬ್ಯಾಂಕ್ ನ ಡಾ. ಪ್ರಕಾಶ್ ಪಾಟೀಲ್ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು, ಪ್ರಾಚಾರ್ಯ ಬಿ.ಶ್ರೀಶೈಲಗೌಡ, ಅಕ್ಯಾಡೆಮಿಕ್ ಡೀನ್, ಎಲ್ಲಾ ವಿಭಾಗದ ಮುಖ್ಯಸ್ಥರು, ಸಿಬ್ಬಂದಿ, ವಿದ್ಯಾರ್ಥಿಗಳು ಮತ್ತು ಬ್ಲಡ್ ಬ್ಯಾಂಕ್ ನ ಸಿಬ್ಬಂದಿ ಹಾಜರಿದ್ದರು. ಪ್ರಾಂಶುಪಾಲರು ತಮ್ಮ ಭಾಷಣದಲ್ಲಿ ರಕ್ತದಾನ ಮಾಡುವುದು ನಮ್ಮ ಸಾಮಾಜಿಕ ಬದ್ಧತೆಯನ್ನು ತೋರಿಸುತ್ತದೆ ಮತ್ತು ಅದು ನಮ್ಮ ಕರ್ತವ್ಯ ಪ್ರಾಣ ಉಳಿಸುವಲ್ಲಿ ಮುಖ್ಯ ಪಾತ್ರ ವಹಿಸುತ್ತದೆ.ನಂತರ ಮಾತನಾಡಿದ ಡಾ. ಪ್ರಕಾಶ್ ಪಾಟೀಲ್ ಈಗಿನ ಸಮಾಜದಲ್ಲಿ ರಕ್ತದಾನ ಬಹಳ ಮುಖ್ಯ ರಕ್ತದಾನ ಮಾಡಿದರೆ 24 ತಾಸುಗಳಲ್ಲಿ ರಕ್ತ ಉತ್ಪತ್ತಿಯಾಗುತ್ತದೆ. ಇದರಿಂದ ನಮ್ಮ ದೇಹದಲ್ಲಿನ ಕೊಬ್ಬಿನ ಅಂಶ ಕಡಿಮೆಯಾಗುತ್ತದೆ. ಮಾನಸಿಕ ತೃಪ್ತಿ ಸಿಗುತ್ತದೆ, ನೆನಪಿನ ಶಕ್ತಿಯು ಕೂಡ ವೃದ್ಧಿಯಾಗುತ್ತದೆ ಆದ್ದರಿಂದ ತಾವೆಲ್ಲರು ಸ್ವಯಂ ಪ್ರೇರಿತವಾಗಿ ಬಂದು ಈ ರಕ್ತದಾನ ಮಾಡಿ ಎಂದು ಕರೆ ನೀಡಿದರು.

### ಚರಂಡಿಗೆ ಬಿದ್ದ ಮಗು; ಸಮಯಪ್ರಜ್ಞೆಯಿಂದ ಪಾರು

**ಉದಯವಾಹಿನಿ, ಸುಳ್ಯ**

ರಸ್ತೆ ಬದಿ ನಡೆಯುತ್ತಿದ್ದ ಜೆಸಿಬಿ ಕಾಮಗಾರಿ ವೇಳೆ ತೆರೆದಿದ್ದ ಚರಂಡಿಗೆ ಮಗು ಬಿದ್ದು ಕೂದಲೆಳೆಯ ಅಂತರದಲ್ಲಿ ಅಪಾಯದಿಂದ ಪಾರಾದ ಘಟನೆ ಸುಳ್ಯದ ಶ್ರೀರಾಮಪೇಟೆಯಲ್ಲಿ ನಡೆದಿದೆ. ಮುಳಿಯ ಜ್ಯುವೆಲ್ಲರ್ಸ್ ಸಮೀಪ ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿಯನ್ನು ಜೆಸಿಬಿ ಮೂಲಕ ನಡೆಸಲಾಗುತ್ತಿತ್ತು. ಕಾಮಗಾರಿ ವೇಳೆ ರಸ್ತೆ ಬದಿಯ ಫುಟ್‌ಪಾತ್‌ನ ಒಂದು ಭಾಗವನ್ನು ಅಗೆದು ಹಾಕಲಾಗಿತ್ತು. ಈ ವೇಳೆ ಚರಂಡಿಯ ಮುಚ್ಚಳವನ್ನೂ ತೆಗೆದು, ಅದನ್ನು ತೆರೆದ ಸ್ಥಿತಿಯಲ್ಲೇ ಬಿಡಲಾಗಿತ್ತು ಎನ್ನಲಾಗಿದೆ. ಇದೇ ಸಂದರ್ಭದಲ್ಲಿ ಮಗುವೊಂದು ಕುಟುಂಬ ಸದಸ್ಯರೊಂದಿಗೆ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿತ್ತು. ಕಾಮಗಾರಿ ನಡೆಯುತ್ತಿದ್ದುದನ್ನು ನೋಡುತ್ತಾ ಕುಟುಂಬದವರು ರಸ್ತೆ ಬದಿಗೆ ಹತ್ತಿರವಾಗಿದ್ದಾರೆ. ಈ ವೇಳೆ ಮಗು ಆಕಸ್ಮಿಕವಾಗಿ ತೆರೆದಿದ್ದ ಚರಂಡಿಗೆ ಬಿದ್ದಿದೆ. ಘಟನೆ ಗಮನಿಸಿದ ತಕ್ಷಣ ಸ್ಥಳದಲ್ಲಿದ್ದ ಸಾರ್ವಜನಿಕರು ಧಾವಿಸಿ ಮಗುವನ್ನು ಚರಂಡಿಯಿಂದ ಮೇಲಕ್ಕೆ ಎತ್ತಿದ್ದಾರೆ. ಅದೃಷ್ಟವಶಾತ್ ಮಗು ಯಾವುದೇ ಗಂಭೀರ ಗಾಯಗಳಿಲ್ಲದೆ ಪಾರಾಗಿದೆ. ರಸ್ತೆ ಬದಿ ಕಾಮಗಾರಿ ನಡೆಯುವ ಸಂದರ್ಭದಲ್ಲಿ ಸಾರ್ವಜನಿಕರ ಸುರಕ್ಷತೆಗಾಗಿ ಸೂಕ್ತ ಬ್ಯಾರಿಕೇಡ್ ಹಾಗೂ ಎಚ್ಚರಿಕೆ ಫಲಕಗಳನ್ನು ಅಳವಡಿಸುವ ಅಗತ್ಯವಿದೆ. ಆದರೆ ಚರಂಡಿ ಮುಚ್ಚಳ ತೆರವುಗೊಳಿಸಿದ ಬಳಿಕ ಅದನ್ನು ತೆರೆದೇ ಬಿಟ್ಟಿರುವುದು ಸಾರ್ವಜನಿಕರ ಆತಂಕಕ್ಕೆ ಕಾರಣವಾಗಿದೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಗ್ಗೆ | 10:30 ರಿಂದ 12:00 |
| ಗುಳಿಕ ಕಾಲ | ಬೆಳಗ್ಗೆ | 07:30 ರಿಂದ 09:00 |
| ಯಮಗಂಡ ಕಾಲ | ಮಧ್ಯಾಹ್ನ | 03:00 ರಿಂದ 04:30 |

**ಮೇಷ**: ನಿಮ್ಮ ಹೆಚ್ಚು ಆತ್ಮವಿಶ್ವಾಸವನ್ನು ಇಂದು ಚೆನ್ನಾಗಿ ಬಳಸಿಕೊಳ್ಳಲು ಪ್ರಯತ್ನಿಸಿ. ಒತ್ತಡದ ದಿನದ ಹೊರತಾಗಿಯೂ ನೀವು ನಿಮ್ಮ ಚೈತನ್ಯವನ್ನು ಮರಳಿ ಪಡೆಯಲು ಸಾಧ್ಯವಾಗುತ್ತದೆ.

**ವೃಷಭ**: ಕೋಪದ ಬಡಿದೆಬ್ಬಿಸುವಿಕೆ ವಾದ ಮತ್ತು ಘರ್ಷಣೆಗೆ ಕಾರಣವಾಗಬಹುದು. ನೀವು ನಿಮ್ಮ ಹೂಡಿಕೆಗಳನ್ನು ಸಂಪ್ರದಾಯಬದ್ಧವಾಗಿ ಉಳಿತಾಯ ಮಾಡಿದರೆ ಹಣ ಮಾಡುತ್ತೀರಿ.

**ಮಿಥುನ**: ನೀವು ಇದು ಒಳ್ಳೆಯ ಆರೋಗ್ಯ ಹೊಂದಿರುವುದರಿಂದ ಅದು ನಿಮಗೆ ಯಶಸ್ಸು ನೀಡುವ ಸಾಧ್ಯತೆಯಿದೆ. ಆದರೆ ನಿಮ್ಮ ಶಕ್ತಿಯನ್ನು ನಾಶಪಡಿಸುವ ಎಲ್ಲವನ್ನೂ ನೀವಿಂದು ತಪ್ಪಿಸಬೇಕು.

**ಕರ್ಕಾಟಕ**: ನೀವು ವಿರಾಮದ ಸಂತೋಷವನ್ನು ಅನುಭವಿಸಲಿದ್ದೀರಿ. ಬಯಸದೆ ಇರುವ ಯಾವುದೇ ಅತಿಥಿ ಇಂದು ನಿಮ್ಮ ಮನೆಗೆ ಬರಬಹುದು. ನಿಮ್ಮ ಮಾತುಗಳ ಬಗ್ಗೆ ಎಚ್ಚರ ವಹಿಸಿ.

**ಸಿಂಹ**: ಹೆಚ್ಚಿನ ಕ್ಯಾಲೋರಿ ಆಹಾರವನ್ನು ತಪ್ಪಿಸಿ ಮತ್ತು ನಿಮ್ಮ ವ್ಯಾಯಾಮವನ್ನು ತಪ್ಪದೆ ಮಾಡಿ. ನಿಮ್ಮ ಪೋಷಕರು ನೀಡಿದ ಬೆಂಬಲದಿಂದ ಹಣಕಾಸು ಸಮಸ್ಯೆಗಳು ನಿವಾರಣೆಯಾದಂತೆನಿಸುತ್ತವೆ.

**ಕನ್ಯಾ**: ನೀವು ಹೇರಳ ಶಕ್ತಿಯನ್ನು ಹೊಂದಿರುತ್ತೀರಿ – ಆದರೆ ಕೆಲಸದ ಒತ್ತಡ ನಿಮ್ಮನ್ನು ಉದ್ವಿಗ್ನಗೊಳಿಸುವಂತೆ ತೋರುತ್ತದೆ. ಹಣಕಾಸು ಲಾಭಗಳು ವಿವಿಧ ಮೂಲಗಳಿಂದ ಬರುತ್ತದೆ.

**ತುಲಾ**: ಸ್ನೇಹಿತರು ನಿಮ್ಮ ಆಲೋಚನೆಗಳ ಮೇಲೆ ಗಮನಾರ್ಹ ಪ್ರಭಾವ ಬೀರಬಹುದಾದ ಯಾರಾದರೂಬ್ಬರನ್ನು ನಿಮಗೆ ಪರಿಚಯಿಸುತ್ತಾರೆ. ನಿಮ್ಮ ಹಿರಿಯರ ಸಲಹೆ ತೆಗೆದುಕೊಳ್ಳಿ

**ವೃಶ್ಚಿಕ**: ನೀವು ಬಹುಕಾಲದಿಂದ ಎದುರು ನೋಡುತ್ತಿದ್ದ ಜೀವನದ ಒತ್ತಡಗಳಿಂದ ಇಂದು ಶಮನ ಪಡೆಯುತ್ತೀರಿ. ಅವುಗಳನ್ನು ದೂರವಿಸಿರಿಸಲು ಜೀವನಶೈಲಿ ಬದಲಿಸಲು ಇದು ಸರಿ ಸಮಯ.

**ಧನಸ್ಸು**: ಬಸುರಿಯು ನೆಲದ ಮೇಲೆ ನಡೆದುಕೊಂಡು ಹೋಗುವಾಗ ವಿಶೇಷ ಕಾಳಜಿ ವಹಿಸಬೇಕು ಮತ್ತು ಸಾಧ್ಯವಾದರೆ ನಿಮ್ಮ ಸ್ನೇಹಿತರು ಧೂಮಪಾನ ಮಾಡುವಾಗ ಅವರ ಜೊತೆ ನಿಲ್ಲಬೇಡಿ.

**ಮಕರ**: ಅತಿಯಾಗಿ ತಿನ್ನುವುದು, ಕ್ಯಾಲೋರಿ ಆಹಾರ ತಪ್ಪಿಸಬೇಕು. ಯಾವುದೇ ಸಮಯದಲ್ಲಿ ಹಣದ ಅಗತ್ಯವಿರುತ್ತದೆ ಆದ್ದರಿಂದ ಸಾಧ್ಯವಾದಷ್ಟು ನಿಮ್ಮ ಹಣವನ್ನು ಸಂಗ್ರಹಿಸುವ ಬಗ್ಗೆ ಆಲೋಚಿಸಿ.

**ಕುಂಭ**: ಕ್ರೀಡೆಗಳು ಮತ್ತು ಇತರ ಹೊರಾಂಗಣ ಚಟುವಟಿಕೆಗಳಲ್ಲಿ ಭಾಗವಹಿಸುವುದು ನಿಮ್ಮ ಕಳೆದುಕೊಂಡ ಚೈತನ್ಯವನ್ನು ಸಂಗ್ರಹಿಸಲು ಸಹಾಯ ಮಾಡುತ್ತದೆ.

**ಮೀನ**: ನಿಮ್ಮ ಅಪಾರ ವಿಶ್ವಾಸ ಮತ್ತು ಸುಲಭದ ಕೆಲಸದ ವೇಳಾಪಟ್ಟಿ ಇಂದು ವಿಶ್ರಾಂತಿಗೆ ಸಾಕಷ್ಟು ಸಮಯ ನೀಡುತ್ತದೆ. ಒಂದು ವೈವಾಹಿಕ ಸಂಬಂಧವನ್ನು ಹೊಂದಲು ಒಳ್ಳೆಯ ಸಮಯ.

ಕಾನೂನು ಕೇವಲ ಕಾಯಿದೆ, ಶಾಸನ ಅಥವಾ ಕಡತಕ್ಕೆ ಸೀಮಿತವಾಗಿಲ್ಲ, ಅದು ಮೂಲತಃ ಜನರು ಮತ್ತು ಸಮಾಜಕ್ಕೆ ಸಂಬಂಧಿಸಿದ ವಿಷಯವಾಗಿದೆ

# ವಿದ್ಯಾರ್ಥಿಗಳು ಪಠ್ಯಪುಸ್ತಕ ಮೀರಿ ವಿಶಾಲ ತಿಳುವಳಿಕೆಬೆಳೆಸಿಕೊಳ್ಳಬೇಕು

**ಉದಯವಾಹಿನಿ, ಕಲಬುರಗಿ**

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ (ಸಿಯುಕೆ) ಕಾನೂನು ವಿಭಾಗವು ಸಿಯುಕೆ ಸಭಾಂಗಣದಲ್ಲಿ ಕಾನೂನು ವಿದ್ಯಾರ್ಥಿಗಳಿಗಾಗಿ ಪರಿಚಯ ಕಾರ್ಯಕ್ರಮವನ್ನು ಆಯೋಜಿಸಿತು.

**1.** ಶಾಸನ ಅಥವಾ ಕಡತಕ್ಕೆ ಸೀಮಿತವಾಗಿಲ್ಲ
**2.** ಹಕ್ಕುಗಳ ರಕ್ಷಣೆ ಹಾಗೂ ಸಮಾಜದ ಸುಗಮ
**3.** ವಕೀಲರ ಪಾತ್ರ ಅತ್ಯಂತ ಮಹತ್ವದ್ದಾಗಿದೆ

ಕಾರ್ಯಕ್ರಮವನ್ನು ಉದ್ಘಾಟಿಸಿ ಮುಖ್ಯ ಭಾಷಣ ಮಾಡಿದ ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಅಶೋಕ್ ಎಸ್. ಕಿಣಗಿ ಅವರು, ಕಾನೂನು ವಿದ್ಯಾರ್ಥಿಗಳು ತಮ್ಮ ಪಠ್ಯಕ್ರಮದ ವಿಷಯಗಳಿಗೆ ಮಾತ್ರ ಸೀಮಿತವಾಗದೆ, ಇತಿಹಾಸ, ತತ್ವಶಾಸ್ತ್ರ, ಆರ್ಥಿಕತೆ ಮತ್ತು ಸಮಾಜದ ಕುರಿತು ವಿಶಾಲವಾದ ತಿಳುವಳಿಕೆಯನ್ನು ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು. ಕಾನೂನು ಕೇವಲ ಕಾಯಿದೆ, ಶಾಸನ ಅಥವಾ ಕಡತಕ್ಕೆ ಸೀಮಿತವಾಗಿಲ್ಲ, ಅದು ಮೂಲತಃ ಜನರು ಮತ್ತು ಸಮಾಜಕ್ಕೆ ಸಂಬಂಧಿಸಿದ ವಿಷಯವಾಗಿದೆ ಎಂದು ನ್ಯಾಯಮೂರ್ತಿ ಕಿಣಗಿ ಹೇಳಿದರು. ಕಕ್ಷಿದಾರರ ಮಾತುಗಳನ್ನು ಎಚ್ಚರಿಕೆಯಿಂದ ಆಲಿಸಿ, ಪ್ರಕರಣದ ಪ್ರಮುಖ ಸಂಗತಿಗಳನ್ನು ಗುರುತಿಸುವುದು, ಅನ್ವಯವಾಗುವ ಕಾನೂನನ್ನು ತಿಳಿದುಕೊಳ್ಳುವುದು ಹಾಗೂ ಶಾಸನದ ಉದ್ದೇಶವನ್ನು ಅರ್ಥಮಾಡಿಕೊಳ್ಳುವುದು ವಕೀಲರಿಗೆ ಅತ್ಯಗತ್ಯ ಎಂದರು. ಅಲ್ಲದೆ, ಸಂಬಂಧಿತ ಕಾನೂನಿನಿಂದ ಯಾರಿಗೆ ಪ್ರಯೋಜನವಾಗುತ್ತದೆ ಹಾಗೂ ಅದರ ಪರಿಣಾಮಗಳನ್ನು ಯಾರು ಎದುರಿಸಬೇಕಾಗುತ್ತದೆ ಎಂಬುದನ್ನೂ ವಕೀಲರು ವಿಶ್ಲೇಷಿಸಬೇಕು ಎಂದು ಅವರು ತಿಳಿಸಿದರು.

ಹಕ್ಕುಗಳ ರಕ್ಷಣೆ ಹಾಗೂ ಸಮಾಜದ ಸುಗಮ ಕಾರ್ಯನಿರ್ವಹಣೆಯಲ್ಲಿ ವಕೀಲರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ನ್ಯಾಯಾಲಯಕ್ಕೆ ಹಾಜರಾಗುವ ಮುನ್ನ ಸಂಪೂರ್ಣ ಸಿದ್ಧತೆಯೊಂದಿಗೆ ಆಗಮಿಸಬೇಕು. ಪ್ರಕರಣವನ್ನು ಸಮಗ್ರವಾಗಿ ಅಧ್ಯಯನ ಮಾಡುವುದು, ಪ್ರಕರಣದ ಸಂಪೂರ್ಣ ದಾಖಲೆಗಳನ್ನು ಓದುವುದು, ವಾಸ್ತವಾಂಶಗಳು ಹಾಗೂ ಅನ್ವಯವಾಗುವ ಕಾನೂನು ನಿಬಂಧನೆಗಳನ್ನು ಅರ್ಥಮಾಡಿಕೊಳ್ಳುವುದು, ಸಂಬಂಧಿತ ತೀರ್ಪುಗಳನ್ನು ಪರಿಶೀಲಿಸುವುದು ಮತ್ತು ವಾದವನ್ನು ವ್ಯವಸ್ಥಿತವಾಗಿ ಮಂಡಿಸಲು ಸಿದ್ಧರಾಗುವುದು ವಕೀಲರ ಕರ್ತವ್ಯವಾಗಿದೆ ಎಂದರು. ಕಾನೂನಿನಲ್ಲಿನ ಹೊಸ ಬೆಳವಣಿಗೆಗಳು, ಉದಯೋನ್ಮುಖ ಆಧುನಿಕ ತಂತ್ರಜ್ಞಾನ ವಿಷಯಗಳ ಕುರಿತು ನಿರಂತರವಾಗಿ ನಮ್ಮನ್ನು ನಾವು ನವೀಕೃತರಾಗಿರಬೇಕು ಎಂದು ಸಲಹೆ ನೀಡಿದರು.

**ಯಾವುದೇ "ತೀರ್ಪಿನ ಮುಖ್ಯಾಂಶಗಳನ್ನು ಮಾತ್ರ ಓದಬಾರದು;** ಸಂಪೂರ್ಣ ತೀರ್ಪನ್ನು ಓದಿ, ಅದರಲ್ಲಿನ ನ್ಯಾಯಾಂಗದ ತರ್ಕ ಮತ್ತು ತೀರ್ಪಿನ ಆಧಾರವಾಗಿರುವ ಕಾನೂನು ತತ್ವವನ್ನು ಅರ್ಥಮಾಡಿಕೊಳ್ಳಬೇಕು," ಎಂದು ಸಲಹೆ ನೀಡಿದರು. ಪರಿಣಾಮಕಾರಿ ಕಾನೂನು ವೃತ್ತಿಗಾಗಿ ನ್ಯಾಯಾಂಗದ ತರ್ಕ ಮತ್ತು ಕಾನೂನು ತತ್ವಗಳ ಸಮಗ್ರ ಅರಿವು ಅಗತ್ಯ ಎಂದರು.ವಕಾಲತ್ತಿನಲ್ಲಿ ಸಂವಹನ ಮತ್ತು ಪ್ರಸ್ತುತಿ ಕೌಶಲ್ಯಗಳ ಮಹತ್ವವನ್ನು ಅವರು ವಿವರಿಸಿದರು. ವಕೀಲರು ತಮ್ಮ ವಾದಗಳನ್ನು ನ್ಯಾಯಾಲಯದ ಮುಂದೆ ಸ್ಪಷ್ಟವಾಗಿ, ನಿಖರವಾಗಿ ಮತ್ತು ಜವಾಬ್ದಾರಿಯುತವಾಗಿ ಮಂಡಿಸಬೇಕು. ತರಗತಿಯಲ್ಲಿ ವಿದ್ಯಾರ್ಥಿಗಳು ಮಾಡುವ ತಪ್ಪುಗಳನ್ನು ಶಿಕ್ಷಕರು ತಿದ್ದಬಹುದು; ಆದರೆ ನ್ಯಾಯಾಲಯದಲ್ಲಿ ವಕೀಲರು ಮಾಡುವ ತಪ್ಪುಗಳು ಪ್ರಕರಣ ಮತ್ತು ಕಕ್ಷಿದಾರರ ಮೇಲೆ ಗಂಭೀರ ಪರಿಣಾಮ ಬೀರಬಹುದು ಎಂದು ಅವರು ಎಚ್ಚರಿಸಿದರು. ಕಾನೂನು ಕರಡು ರಚನೆ, ಬರವಣಿಗೆ, ಸಂವಹನ ಮತ್ತು ಭಾಷಾ ಕೌಶಲ್ಯಗಳನ್ನು ಬಲಪಡಿಸಿಕೊಳ್ಳುವ ಅಗತ್ಯವನ್ನು ಅವರು ಒತ್ತಿ ಹೇಳಿದರು. ಸಮರ್ಥ ಹಾಗೂ ಜವಾಬ್ದಾರಿಯುತ ಕಾನೂನು ವೃತ್ತಿಪರರಾಗಲು ವಿದ್ಯಾರ್ಥಿಗಳು ಶ್ರಮಿಸಬೇಕು ಎಂದು ತಿಳಿಸಿದರು.




ಕಾನೂನು ನಿರ್ಧಾರಗಳು ಕೆಲವೊಮ್ಮೆ ಮಾನವ ಜೀವನದ ಮೇಲೆ ಗಂಭೀರ ಪರಿಣಾಮ ಬೀರಬಹುದಾದ ಹಿನ್ನೆಲೆಯಲ್ಲಿ, ವಕೀಲರು ತಮ್ಮ ವೃತ್ತಿಪರ ಜವಾಬ್ದಾರಿಯನ್ನು ತಮ್ಮ ಜ್ಞಾನ, ಹೊಣೆಗಾರಿಕೆ ಮತ್ತು ಸೂಕ್ಷ್ಮತೆಯಿಂದ ನಿರ್ವಹಿಸಬೇಕು.

– ನ್ಯಾಯಮೂರ್ತಿ ಕಿಣಗಿ

### ಅನುಭವವೂ ತುಂಬಾ ಮುಖ್ಯ

ವಿದ್ಯಾರ್ಥಿಗಳು ನಿಯಮಿತವಾಗಿ ನ್ಯಾಯಾಲಯದ ಕಲಾಪಗಳಿಗೆ ಹಾಜರಾಗಬೇಕು, ಅನುಭವಿ ಹಿರಿಯ ವಕೀಲರಿಂದ ಕಲಿಯಬೇಕು. ಎಲ್‌ಎಲ್.ಬಿ. ಪದವಿ ಇದ್ದರೇ ಮಾತ್ರ ವಕೀಲರಾಗಲು ಸಾಕಾಗುವುದಿಲ್ಲ; ಪ್ರಾಯೋಗಿಕ ಜ್ಞಾನ ಮತ್ತು ಅನುಭವವೂ ಅಷ್ಟೇ ಮುಖ್ಯ ಎಂದು ಅವರು ಅಭಿಪ್ರಾಯಪಟ್ಟರು.

## ಹಿಂದೂ ಕಾರ್ಯಕರ್ತರ ಮೇಲಿನ ಕಾನೂನು ದುರುಪಯೋಗ ತಡೆಗೆ ಆಗ್ರಹ

**ಉದಯವಾಹಿನಿ, ಬೀದರ್**

ರಾಜ್ಯದಲ್ಲಿ ಕಾನೂನಿನ ಆಳ್ವಿಕೆ, ಸಂವಿಧಾನಬದ್ಧ ಹಕ್ಕುಗಳು ಹಾಗೂ ನಾಗರಿಕರ ಜೀವ ಮತ್ತು ಸ್ವಾತಂತ್ರ್ಯದ ರಕ್ಷಣೆಯನ್ನು ಖಚಿತಪಡಿಸಬೇಕು ಎಂದು ಆಗ್ರಹಿಸಿ ಹಿಂದೂ ರಾಷ್ಟ್ರ ಸಮನ್ವಯ ಸಮಿತಿಯ ವತಿಯಿಂದ ಜಿಲ್ಲಾಧಿಕಾರಿ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

ರಾಷ್ಟ್ರ ರಕ್ಷಣಾ ಪಡೆಯ ಅಧ್ಯಕ್ಷ ಪುನೀತ್ ಕೆರೆಹಳ್ಳಿ ಅವರು ನಡೆಸುತ್ತಿರುವ ಉಪವಾಸ ಸತ್ಯಾಗ್ರಹದ ಹಿನ್ನೆಲೆಯಲ್ಲಿ ರಾಜ್ಯಪಾಲರು ತುರ್ತು ಮಧ್ಯಪ್ರವೇಶ ಮಾಡಬೇಕು. ಅವರ ಆರೋಗ್ಯದ ದೃಷ್ಟಿಯಿಂದ ಸ್ವತಂತ್ರ ವೈದ್ಯಕೀಯ ತಂಡದಿಂದ ತಕ್ಷಣ ತಪಾಸಣೆ ನಡೆಸಿ ಅಗತ್ಯ ಚಿಕಿತ್ಸೆ ಹಾಗೂ ಜೀವ ರಕ್ಷಣೆಗೆ ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಬಸವನಗುಡಿ ಪೊಲೀಸ್ ಠಾಣೆ ವ್ಯಾಪ್ತಿಯ ಪ್ರಕರಣಕ್ಕೆ ಸಂಬಂಧಿಸಿದಂತೆ ಪುನೀತ್ ಕೆರೆಹಳ್ಳಿ ಹಾಗೂ ಅವರ ಸಹಚರರ ವಿರುದ್ಧ ದಾಖಲಿಸಿರುವ ಎಫ್‌ಐಆರ್‌ನ್ನು ಮರುಪರಿಶೀಲಿಸಿ



ಸೂಕ್ತ ಕ್ರಮ ಕೈಗೊಳ್ಳಬೇಕು. ಘಟನೆಗೆ ಸಂಬಂಧಿಸಿದ ಸಿಸಿಟಿವಿ ದೃಶ್ಯಾವಳಿಗಳನ್ನು ಸುರಕ್ಷಿತವಾಗಿ ಸಂರಕ್ಷಿಸಿ, ಸಾಕ್ಷ್ಯ ನಾಶಕ್ಕೆ ಯತ್ನಿಸಿದವರು ಹಾಗೂ ಕರ್ತವ್ಯಲೋಪ ಎಸಗಿದ ಅಧಿಕಾರಿಗಳ ವಿರುದ್ಧ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಆಗ್ರಹಿಸಲಾಗಿದೆ.

ಇದೇ ವೇಳೆ ಬಂಟ್ವಾಳದ ಅಬ್ದುಲ್ ರೆಹಮಾನ್ ಹತ್ಯೆ ಪ್ರಕರಣದಲ್ಲಿ ಭರತ್ ಕುಂಡ್ಮೇಲ್ ಸೇರಿದಂತೆ ಕೆಲವರ ವಿರುದ್ಧ ಕೈಗೊಂಡಿರುವ ಕಾನೂನು ಕ್ರಮ ಹಾಗೂ ವಿವಿಧೆಡೆ ಹಿಂದೂ ಕಾರ್ಯಕರ್ತರಿಗೆ ನೀಡಲಾಗುತ್ತಿರುವ ಗಡಿಪಾರು ಮತ್ತು ಗುಂಡಾ ಕಾಯಿದೆ ನೋಟಿಸ್‌ಗಳ ಕುರಿತು ಸ್ವತಂತ್ರ ಪರಿಶೀಲನೆ ನಡೆಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

## ಬಸ್‌ಗೆ ಬೆಂಕಿ; ಪ್ರಯಾಣಿಕರು ಸೇಫ್

**ಉದಯವಾಹಿನಿ, ಶಿವಮೊಗ್ಗ**

ಚಲಿಸುತ್ತಿದ್ದ ಖಾಸಗಿ ಸ್ಲೀಪರ್ ಬಸ್‌ಗೆ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿಕೊಂಡು ಬಸ್‌ನ ಸುಮಾರು ಶೇ.80ರಷ್ಟು ಭಾಗ ಸುಟ್ಟುಹೋದ ಘಟನೆ ಗುರುವಾರ ಮುಂಜಾನೆ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಮುಂಬಾಳು ಗ್ರಾಮದ ಬಳಿ ನಡೆದಿದೆ. ಆನಂದಪುರಂ ಪೊಲೀಸ್ ಠಾಣೆ ವ್ಯಾಪ್ತಿಯ ಮುಂಬಾಳು ಗ್ರಾಮದ ಬಳಿ ಬೆಳಗ್ಗೆ ಸುಮಾರು 5.45ಕ್ಕೆ ಬಸ್ ಚಲಿಸುತ್ತಿದ್ದಾಗ ಏಕಾಏಕಿ ಬೆಂಕಿ ಕಾಣಿಸಿಕೊಂಡಿದೆ. ಬೆಂಗಳೂರಿನಿಂದ ಸಾಗರದತ್ತ ತೆರಳುತ್ತಿದ್ದ ಬಸ್‌ನಲ್ಲಿ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಬೆಂಕಿ ಕಾಣಿಸಿಕೊಂಡ ಕೂಡಲೇ ಚಾಲಕ ಹಾಗೂ ಕ್ಲೀನರ್ ಸಮಯಪ್ರಜ್ಞೆ ಮೆರೆದು ಪ್ರಯಾಣಿಕರನ್ನು ಸುರಕ್ಷಿತವಾಗಿ ಕೆಳಗಿಳಿಸಿದ್ದಾರೆ. ಸಾಗರದತ್ತ ತೆರಳುತ್ತಿದ್ದ ಮಾರ್ಗದಲ್ಲಿ ಆ ಸಮಯದಲ್ಲಿ ಕೇವಲ ಇಬ್ಬರು ಪ್ರಯಾಣಿಕರು ಮಾತ್ರ ಬಸ್‌ನಲ್ಲಿದ್ದರು. ಶಿವಮೊಗ್ಗದಲ್ಲಿ ನಡೆದ ಹಿಂದಿನ ನಿಲುಗಡೆಯಲ್ಲೇ ಬಹುತೇಕ ಪ್ರಯಾಣಿಕರು ಬಸ್‌ನಿಂದ ಇಳಿದಿದ್ದರು ಎಂದು ತಿಳಿದುಬಂದಿದೆ. ಬೆಂಕಿಯ ತೀವ್ರತೆಗೆ ಬಸ್‌ನ ಸುಮಾರು ಶೇ.80ರಷ್ಟು ಭಾಗ ಸುಟ್ಟುಹೋಗಿದೆ. ಮಾಹಿತಿ ತಿಳಿಯುತ್ತಿದ್ದಂತೆ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಿದ್ದಾರೆ. ಆನಂದಪುರ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಪ್ರವೀಣ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಘಟನೆ ಕುರಿತು ಆನಂದಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಹೆಚ್ಚಿನ ತನಿಖೆ ಮುಂದುವರಿದಿದೆ.

## ಅಭಿವೃದ್ಧಿಗೆ ಶಿಕ್ಷಣವೇ ಅಡಿಪಾಯ



**ಉದಯವಾಹಿನಿ, ಬೀದರ**

ಶಿಕ್ಷಣವೆಂಬುದು ವ್ಯಕ್ತಿಯ ಬದುಕನ್ನು ರೂಪಿಸುವುದಷ್ಟೇ ಅಲ್ಲದೆ, ಸಮಾಜ ಹಾಗೂ ರಾಷ್ಟ್ರದ ಭವಿಷ್ಯವನ್ನು ಕಟ್ಟುವ ಪ್ರಮುಖ ಶಕ್ತಿಯಾಗಿದೆ. ಪ್ರತಿಯೊಂದು ಕ್ಷೇತ್ರದಲ್ಲಿಯೂ ಯಶಸ್ಸು ಸಾಧಿಸಲು ಶಿಕ್ಷಣ ಪ್ರಮುಖ ಅಂಗವಾಗಿದ್ದು, ಉತ್ತಮ ಶಿಕ್ಷಕರ ಸೇವೆ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಈ ಹಿನ್ನೆಲೆಯಲ್ಲಿ ಶ್ರೀಮತಿ ಸುನಿತಾ ಚಿಕ್ಕಪೇಟೆ ಅವರು ರಾಜ್ಯಮಟ್ಟದ ಉತ್ತಮ ಶಿಕ್ಷಕಿ ಪ್ರಶಸ್ತಿಗೆ ಭಾಜನರಾಗಿರುವುದು ಬೀದರ್ ಜಿಲ್ಲೆಯ ಶೈಕ್ಷಣಿಕ ಕ್ಷೇತ್ರಕ್ಕೆ ಹೆಮ್ಮೆಯ ಸಂಗತಿಯಾಗಿದೆ ಎಂದು ಸುಭಾಶ ಚಂದ್ರ ಬೋಸ್ ಗೆಳೆಯರ ಬಳಗದ ಗೌರವಾಧ್ಯಕ್ಷರಾದ ಅಶೋಕ ಪಾಟೀಲ್ ಅವರು ಹೇಳಿದರು. ಅವರು ಶ್ರೀಮತಿ ಸುನೀತಾ ಚಿಕ್ಕಪೇಟೆ ಅವರು ಉತ್ತಮ ಶಿಕ್ಷಕಿ ರಾಜ್ಯ ಪ್ರಶಸ್ತಿ ಪಡೆದಿರುವ ಹಿನ್ನೆಲೆಯಲ್ಲಿ ಅವರಿಗೆ ಸುಭಾಷ್ ಚಂದ್ರ ಬೋಸ್ ಗೆಳೆಯರ ಬಳಗದ ವತಿಯಿಂದ ಬೀದರ್ ನಗರದ ಕರೋಡಿಮಲ್ ಕಾಲೋನಿಯಲ್ಲಿ ಹಮ್ಮಿಕೊಂಡ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶ್ರೀಮತಿ ಸುನಿತಾ ಚಿಕ್ಕಪೇಟೆ ಅವರ ಶೈಕ್ಷಣಿಕ ಸೇವೆ, ವಿದ್ಯಾರ್ಥಿಗಳ ಮೇಲಿನ ಕಾಳಜಿ, ಬೋಧನಾ ಕ್ಷೇತ್ರದಲ್ಲಿ ತೋರಿದ ಬದ್ಧತೆ ಹಾಗೂ ಶಿಕ್ಷಣದ ಮೂಲಕ ಸಮಾಜಕ್ಕೆ ನೀಡುತ್ತಿರುವ ಕೊಡುಗೆಯನ್ನು ಗುರುತಿಸಿ ರಾಜ್ಯಮಟ್ಟದ ಉತ್ತಮ ಶಿಕ್ಷಕಿ ಪ್ರಶಸ್ತಿ ದೊರೆತಿರುವುದು, ಅವರ ವೈಯಕ್ತಿಕ ಸಾಧನೆಯಷ್ಟೇ ಅಲ್ಲದೆ ಬೀದರ್ ಜಿಲ್ಲೆಯ ಗೌರವವನ್ನು ಮತ್ತಷ್ಟು ಹೆಚ್ಚಿಸಿದ ಸಾಧನೆಯಾಗಿದೆ. ಶಿಕ್ಷಣವು ಸಮಾಜದ ಅಭಿವೃದ್ಧಿಯ ಮೂಲಾಧಾರವಾಗಿದೆ. ವೈದ್ಯಕೀಯ, ಆಡಳಿತ, ವಿಜ್ಞಾನ, ತಂತ್ರಜ್ಞಾನ, ಕೃಷಿ, ಉದ್ಯಮ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಯಶಸ್ಸು ಸಾಧಿಸಲು ಶಿಕ್ಷಣದ ಪಾತ್ರ ಅತ್ಯಂತ ಮಹತ್ವದ್ದಾಗಿದೆ.

## ಹಣದ ಕೊರತೆ ಇದ್ದಿದ್ದರೆ, ಗ್ಯಾರಂಟಿಗಳು ಮುಂದುವರಿಯುತ್ತಿದ್ದವೇ?: ಡಿಸಿಎಂ

**ಉದಯವಾಹಿನಿ, ಕೊಪ್ಪಳ**



ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಎದುರಿಸುತ್ತಿರುವ ಡೀಸೆಲ್ ಕೊರತೆಯು ತಾತ್ಕಾಲಿಕವಾಗಿದೆ ಮತ್ತು ಸರ್ಕಾರವು ಯಾವುದೇ ಯೋಜನೆಯನ್ನು ಸ್ಥಗಿತಗೊಳಿಸಿಲ್ಲ ಎಂದು ಉಪಮುಖ್ಯಮಂತ್ರಿ ಜಿ ಪರಮೇಶ್ವರ ಗುರುವಾರ ಸ್ಪಷ್ಟಪಡಿಸಿದ್ದಾರೆ. ಕೊಪ್ಪಳ ಜಿಲ್ಲೆಯಲ್ಲಿ ಮಾತನಾಡಿದ ಅವರು, ಸರ್ಕಾರ ಕಳೆದ ಮೂರು ವರ್ಷಗಳಿಂದ ವಾರ್ಷಿಕ 52,000 ಕೋಟಿ ಒದಗಿಸುತ್ತಿದೆ ಹಾಗೂ ಸರ್ಕಾರದ ಆರ್ಥಿಕ ವ್ಯವಸ್ಥೆಯಲ್ಲಿ ಶಿಸ್ತು ಇದೆ ಎಂದು ಪ್ರತಿಪಾದಿಸಿದರು. ಸರ್ಕಾರವನ್ನು ಹೇಗೆ ನಡೆಸಬೇಕೆಂದು ನಮಗೆ ತಿಳಿದಿದೆ. ನಮಗೆ ಏನಾದರೂ ಸಮಸ್ಯೆ ಇದ್ದಿದ್ದರೆ, ನಾವು ಯಾವುದಾದರೂ 'ಗ್ಯಾರಂಟಿ' ಯೋಜನೆಯನ್ನು ನಿಲ್ಲಿಸಬಹುದಿತ್ತು. ಆದರೆ ನಾವು ಕಳೆದ ಮೂರು ವರ್ಷಗಳಿಂದ ಅದಕ್ಕಾಗಿ 52,000 ಕೋಟಿಗಳನ್ನು ನೀಡುತ್ತಲೇ ಬಂದಿದ್ದೇವೆ. ನಮ್ಮ ಸರ್ಕಾರದ ಆರ್ಥಿಕ ವ್ಯವಸ್ಥೆಯಲ್ಲಿ ಶಿಸ್ತು ಇದೆ' ಎಂದು ಹೇಳಿದರು. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು 16 ಬಾರಿ ಬಜೆಟ್ ಮಂಡಿಸಿ ಆರ್ಥಿಕ ಶಿಸ್ತನ್ನು ತಂದಿದ್ದಾರೆ. ಅವರು ಎಂದಿಗೂ ಹಣಕಾಸು ಇಲಾಖೆಯಲ್ಲಿ ಶಿಸ್ತು ತಪ್ಪಲು ಬಿಟ್ಟಿಲ್ಲ' ಎಂದು ಅವರು ಹೇಳಿದರು. 'ಇತರ ರಾಜ್ಯಗಳು ಆರ್ಥಿಕ ಸಂಕಷ್ಟದಲ್ಲಿವೆ. ಆದರೆ, ನಾವು ಹಣಕಾಸು ಇಲಾಖೆಯನ್ನು ಶಿಸ್ತುಬದ್ಧವಾಗಿ ನಿರ್ವಹಿಸುತ್ತಿದ್ದೇವೆ. ಅನಿವಾರ್ಯ ಪರಿಸ್ಥಿತಿ ಎದುರಾದರೆ ಸಾಲ ಪಡೆದಾದರೂ ನಾವು ಪರಿಸ್ಥಿತಿಯನ್ನು ನಿಭಾಯಿಸುತ್ತೇವೆ. ಸಾಲ ಮಾಡಿಯಾದರೂ ಸರ್ಕಾರವನ್ನು ನಡೆಸುತ್ತೇವೆ' ಎಂದು ಪರಮೇಶ್ವರ ಹೇಳಿದರು. ಡೀಸೆಲ್ ಕೊರತೆ ಕುರಿತು ಮಾತನಾಡಿದ ಅವರು, 'ಬಸ್‌ಗಳಿಗೆ ಉಂಟಾಗಿರುವ ಡೀಸೆಲ್ ಕೊರತೆಯು ತಾತ್ಕಾಲಿಕವಾದುದು. ಸರ್ಕಾರವಾಗಿ ನಾವು ಎಲ್ಲವನ್ನೂ ನಿಭಾಯಿಸಬೇಕಾಗುತ್ತದೆ. 1,250 ಕೋಟಿ ರೂಪಾಯಿ ದೊಡ್ಡ ಹೊರೆಯೇನಲ್ಲ' ಎಂದು ತಿಳಿಸಿದರು.

## ಅಂಡರಪಾಸ್ ಸ್ವಚ್ಛಗೊಳಿಸಿ, ಸಂಚಾರಕ್ಕೆ ಮುಕ್ತಗೊಳಿಸಿ

**ಉದಯವಾಹಿನಿ, ಕಲಬುರಗಿ**

ನಗರದ ಜೇವರ್ಗಿ ಕಾಲೋನಿ, ದತ್ತ ನಗರ ಬಳಿಯ ರೈಲ್ವೆ ಕಿ.ಮೀ. 566/1 ಮತ್ತು 566/2 ರ ಅಂಡರ್‌–ಪಾಸ್ ಸ್ವಚ್ಛಗೊಳಿಸಿ ಸಾರ್ವಜನಿಕ ಸಂಚಾರಕ್ಕೆ ಮುಕ್ತಗೊಳಿಸಬೇಕು ಎಂದು ಜೇವರ್ಗಿ ಕಾಲೋನಿ, ದತ್ತ ನಗರ, ಬಿದ್ದಾಪುರ ಕಾಲೋನಿ ಮತ್ತು ಸಿಐವಿ ಕಾಲೋನಿ ನಿವಾಸಿಗಳು ಮನವಿ ಮಾಡಿದ್ದಾರೆ. ಈ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು ಮತ್ತು ಮಹಾನಗರ ಪಾಲಿಕೆ ಆಯುಕ್ತರಿಗೆ ಮನವಿ



ಮಾಡಿರುವ ಅವರು, ರೈಲ್ವೆ ಇಲಾಖೆಯು ಹೊಸ ಜೇವರ್ಗಿ ರಸ್ತೆಯಲ್ಲಿ ಮೇಲ್ಸೇತುವೆ ನಿರ್ಮಾಣದ ಜೊತೆಗೆ 566/1 ಮತ್ತು 566/2 ರಲ್ಲಿ ಎರಡು ಅಂಡರ್‌–ಪಾಸ್ ಗಳನ್ನು ನಿರ್ಮಿಸಿದೆ. ಆದರೆ ಇಂದಿಗೂ ಅದು ಬಳಕೆಗೆ ಬಂದಿಲ್ಲ ಎಂದು ತಿಳಿಸಿದ್ದಾರೆ. ಮಹಾನಗರ ಪಾಲಿಕೆಯ ಎರಡು ಚರಂಡಿಗಳನ್ನು ಈ ಬ್ರಿಡ್ಜ್ ಕೆಳಗೆ ಬಿಡಲಾಗಿದೆ. ಇದರಿಂದ ಕೊಳಚೆ ನೀರು ಶಾಶ್ವತವಾಗಿ ನಿಂತಿದೆ. ಈ ಕಲುಷಿತ ನೀರು ಇಂಗಿ ಬಡಾವಣೆಯ ಸಾರ್ವಜನಿಕ ಕುಡಿಯುವ ಬೋರವೆಲ್ ನೀರು ಸಂಪೂರ್ಣ ಕಲುಷಿತಗೊಂಡಿದೆ. ಜನರ ಆರೋಗ್ಯಕ್ಕೆ ದೊಡ್ಡ ಅಪಾಯ ಎದುರಾಗಿದೆ. ಈ ಬ್ರಿಡ್ಜ್ ಪ್ರಾರಂಭವಾದರೆ ಕೇಂದ್ರ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ ಮತ್ತು ಸೂಪರ್ ಮಾರ್ಕೆಟ್ ಕೇವಲ 1 ಕಿ.ಮೀ. ಅಂತರದಲ್ಲಿ ಬರುತ್ತದೆ. ಇಲ್ಲದಿದ್ದರೆ ನಾವು 4 ಕಿ.ಮೀ. ಸುತ್ತು ಹಾಕಿ ಹೊಸ ಜೇವರ್ಗಿ ರಸ್ತೆ ಮೇಲ್ವೇತುವೆ ಮೂಲಕ ಹೋಗಬೇಕಾಗಿದೆ. ಈ ಅಂಡರ್‌–ಪಾಸ್ ತೆರೆದರೆ ಸಾವಿರಾರು ವಿದ್ಯಾರ್ಥಿಗಳು, ನೌಕರರು ಮತ್ತು ನಾಗರಿಕರಿಗೆ ಪ್ರತಿದಿನ ಪೆಟ್ರೋಲ್ ಮತ್ತು ಸಮಯ ಉಳಿತಾಯವಾಗುತ್ತದೆ. ಹೊಸ ಜೇವರ್ಗಿ ರಸ್ತೆ ಮೇಲ್ಸೆತುವೆ ಮೇಲಿನ ವಾಹನ ದಟ್ಟಣೆ ಕಡಿಮೆಯಾಗುತ್ತದೆ. ಆದ್ದರಿಂದ ಪಾಲಿಕೆಯ ಚರಂಡಿ ನೀರನ್ನು ಬ್ರಿಡ್ಜ್ ಕೆಳಗಿನಿಂದ ಬೇರೆಡೆಗೆ ತಿರುಗಿಸಲು ಆದೇಶಿಸಬೇಕು.

## ಕಲ್ಯಾಣ ಕರ್ನಾಟಕ ಯೋಜನೆಗಳ ದುರುಪಯೋಗ ಆರೋಪ

**ಉದಯವಾಹಿನಿ, ಬೀದರ್**

ಕಲ್ಯಾಣ ಕರ್ನಾಟಕ ಅಭಿವೃದ್ಧಿ ಯೋಜನೆಯಡಿ ಬೀದರ್ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಹಾಗೂ ಫಲಾನುಭವಿಗಳಿಗೆ ವಿತರಿಸಬೇಕಾದ ಸಾಮಗ್ರಿಗಳ ದುರುಪಯೋಗದ ಕುರಿತು ಕೇಳಿಬರುತ್ತಿರುವ ಆರೋಪಗಳ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸುವಂತೆ ಕರ್ನಾಟಕ ರಕ್ಷಣಾ ವೇದಿಕೆ( ಪ್ರವೀಣ ಶೆಟ್ಟಿ ಬಣ) ಆಗ್ರಹಿಸಿ ಇಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಲಾಯಿತು. ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗೆ ಸಂಬಂಧಿಸಿದಂತೆ 2018–19ನೇ ಸಾಲಿನಲ್ಲಿ ಫಲಾನುಭವಿಗಳಿಗೆ ನೀಡಬೇಕಿದ್ದ ಹೊಲಿಗೆ ಯಂತ್ರಗಳು, ಜಮಖಾನೆಗಳು, ಪುಸ್ತಕಗಳು, ಬೋರ್ಡ್‌ಗಳು ಹಾಗೂ ದಿನಚರಿ ಪುಸ್ತಕಗಳು ಸೇರಿದಂತೆ ವಿವಿಧ ಸಾಮಗ್ರಿಗಳು ಅರ್ಹ ಫಲಾನುಭವಿಗಳಿಗೆ ತಲುಪದೆ ಬೇರೆ ರೀತಿಯಲ್ಲಿ ಬಳಕೆಯಾಗಿವೆ ಎಂಬ ಆರೋಪಗಳಿವೆ. ಈ ಬಗ್ಗೆ ಖರೀದಿ ಹಾಗೂ ವಿತರಣೆಯ ಸಂಪೂರ್ಣ ದಾಖಲೆಗಳನ್ನು ಪರಿಶೀಲಿಸಬೇಕು ಎಂದು ಸಂಘಟನೆ ಒತ್ತಾಯಿಸಿದ್ದಾರೆ. ಅದೇ ರೀತಿ ಯಾದಗಿರಿ ಜಿಲ್ಲೆಯ ಸುರಪುರ, ಯಾದಗಿರಿ, ಶಹಾಪುರ ಹಾಗೂ ಬೀದರ್ ಜಿಲ್ಲೆಯ ಹುಮ್ನಾಬಾದ್ ಜೈಲುಗಳಲ್ಲಿ ವಿತರಿಸಲಾದ ಪುಸ್ತಕಗಳ ಮೂಲ, ಖರೀದಿ ಬಿಲ್, ವಿತರಣೆ ದಾಖಲೆ ಹಾಗೂ ಪುಸ್ತಕಗಳ ಮೇಲಿರುವ ಗುರುತು/ಸ್ಟಿಕ್ಕರ್‌ಗಳನ್ನೂ ಪರಿಶೀಲಿಸಬೇಕು ಎಂದು ಮನವಿಯಲ್ಲಿ ತಿಳಿಸಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು, ಸಂಸ್ಥೆಗಳು ಹಾಗೂ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದವರಿಂದ ಮಾಹಿತಿ ಪಡೆದು, ದಾಖಲೆಗಳು, ಛಾಯಾಚಿತ್ರಗಳು, ವೀಡಿಯೋಗಳು ಮತ್ತು ಪತ್ರಿಕಾ ವರದಿಗಳನ್ನು ತನಿಖೆಯ ಭಾಗವಾಗಿ ಪರಿಶೀಲಿಸಬೇಕು. ಆರೋಪಗಳು ತನಿಖೆಯಲ್ಲಿ ಸಾಬೀತಾದಲ್ಲಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ಸೇನೆ ಒತ್ತಾಯಿಸಿದೆ.

## ಮಂಗಳೂರು ದಸರಾ: ಅ. 12 ರಂದು ಸಿಎಂ ಉದ್ಘಾಟನೆ

**ಉದಯವಾಹಿನಿ, ಮಂಗಳೂರು**

ಕರಾವಳಿ ಪ್ರದೇಶದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಹೆಮ್ಮೆಯ ಸಂಕೇತವಾಗಿರುವ ಐತಿಹಾಸಿಕ ಮಂಗಳೂರು ದಸರಾ ಹಾಗೂ ನವರಾತ್ರಿ ಮಹೋತ್ಸವ–2026 ಅನ್ನು ಅಕ್ಟೋಬರ್ 11 ರಿಂದ 22 ರವರೆಗೆ ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುವುದು. ಮಾಜಿ ಕೇಂದ್ರ ಹಣಕಾಸು ಸಚಿವರು ಹಾಗೂ ದೇವಾಲಯದ ಜೀರ್ಣೋದ್ಧಾರದ ರೂವಾರಿ ಬಿ. ಜನಾರ್ದನ ಪೂಜಾರಿ ಅವರ ಮಾರ್ಗದರ್ಶನದಲ್ಲಿ ನಡೆಯಲಿರುವ ಈ ಮಹೋತ್ಸವಕ್ಕೆ ಸಕಲ ಸಿದ್ಧತೆಗಳು ಪೂರ್ಣಗೊಂಡಿವೆ ಎಂದು ಪದ್ಮರಾಜ್ ಪೂಜಾರಿ ತಿಳಿಸಿದ್ದಾರೆ. ಈ ವರ್ಷ ಕ್ಷೇತ್ರವನ್ನು ವಿಶೇಷವಾಗಿ ಅಲಂಕರಿಸಲಾಗಿದೆ. ಸುಂದರವಾಗಿ ವಿನ್ಯಾಸಗೊಳಿಸಲಾದ ಭವ್ಯ ದರ್ಬಾರ್ ಹಾಲ್‌ನಲ್ಲಿ ಶ್ರೀ ಮಹಾಗಣಪತಿ, ಶ್ರೀ ಆದಿಶಕ್ತಿ, ನವದುರ್ಗೆಯರು ಮತ್ತು ವಿದ್ಯಾದೇವಿ ಶ್ರೀ ಶಾರದಾ ಮಾತೆಯ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಲು ವ್ಯವಸ್ಥೆ ಮಾಡಲಾಗಿದೆ. ಭಜನೆ, ನೃತ್ಯ, ಸಂಗೀತ, ಕ್ರೀಡಾಕೂಟ ಹಾಗೂ ವಿವಿಧ ಜಾನಪದ ಕಲಾಪ್ರಕಾರಗಳು ಉತ್ಸವದ ಮೆರುಗನ್ನು ಹೆಚ್ಚಿಸಲಿವೆ. ಅ.12 ರಂದು ಮುಖ್ಯಮಂತ್ರಿಗಳಿಂದ ಉದ್ಘಾಟನೆ

ಅಕ್ಟೋಬರ್ 11 ರಂದು ವೈದಿಕ ಧಾರ್ಮಿಕ ವಿಧಿವಿಧಾನಗಳು ಆರಂಭಗೊಳ್ಳಲಿದ್ದು, ಮಧ್ಯಾಹ್ನ ಶ್ರೀ ಶಾರದಾ ಮಾತೆ ಹಾಗೂ ನವದುರ್ಗೆಯರ ಪ್ರತಿಷ್ಠಾಪನೆ ನಡೆಯಲಿದೆ. ಅಕ್ಟೋಬರ್ 12 ರಂದು ಸಂಜೆ 6.30 ಕ್ಕೆ ಸಿಎಂ ಡಿ. ಕೆ. ಶಿವಕುಮಾರ್ ಅವರು ಮಂಗಳೂರು ದಸರಾ ಮಹೋತ್ಸವಕ್ಕೆ ಚಾಲನೆ ನೀಡುವರು.

ಅಗತ್ಯವಿರುವ ಸಂಪೂರ್ಣ ಮಾಹಿತಿಯನ್ನು ಪಡೆದುಕೊಂಡು ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು

# ಬರ ಪರಿಸ್ಥಿತಿ ಕುರಿತು ಅಧಿಕಾರಿಗಳೊಂದಿಗೆ ಸಭೆರೈತರ ಸಂಕಷ್ಟಕ್ಕೆ ಅಗತ್ಯ ನೆರವು

**ಉದಯವಾಹಿನಿ, ರಾಯಚೂರು**

ಈ ವರ್ಷ ತೀವ್ರ ಬರಗಾಲದ ಪರಿಸ್ಥಿತಿಯನ್ನು ರಾಯಚೂರು ಜಿಲ್ಲೆಯಲ್ಲಿ ಎದುರಿಸಲಾಗುತ್ತಿದ್ದು, ನಮ್ಮ ಸರ್ಕಾರ ರೈತರ ಸಂಕಷ್ಟದಲ್ಲಿ ಭಾಗಿಯಾಗಿ ಅವರಿಗೆ ಅಗತ್ಯ ನೆರವು ನೀಡುವ ಕೆಲಸ ಮಾಡುತ್ತಿದೆ ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಅಜಯ್ ಧರ್ಮಸಿಂಗ್ ಅವರು ಹೇಳಿದರು.

**1.** ಶ್ರೀಘ್ರ ಐಸಿಸಿ ಸಭೆ ಆಯೋಜನೆ
**2.** 300 ಕೋಟಿ ರೂ. ನೀಡಲಾಗಿದ್ದು
**3.** ಸಮಸ್ಯೆಗಳ ಬಗ್ಗೆ ಸಲಹೆ ನೀಡಿದ್ದು

ಅಕ್ಟೋಬರ್ 07ರ ಬುಧವಾರ ದಂದು ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ರಾಯಚೂರು ಜಿಲ್ಲೆಯಲ್ಲಿ ಬರ ಪರಿಸ್ಥಿತಿ, ಮುಂದಿನ ಬೇಸಿಗೆಯವರೆಗೆ ಕುಡಿಯುವ ನೀರಿನ ಸಮಸ್ಯೆ ಬಾರದಂತೆ ನೀರಿನ ಕಾಯ್ದಿರಿಸುವುದು, ಕೃಷಿ ಚಟುವಟಿಕೆಗಳು, ನೀರಾವರಿ ಸಮಸ್ಯೆಗಳು ಹಾಗೂ ಜಾನುವಾರುಗಳಿಗೆ ಮೇವಿನ ಲಭ್ಯತೆ ಕುರಿತು ಜನಪ್ರತಿನಿಧಿಗಳು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆಯ ನಡೆಸಿ ಅವರು ಮಾತನಾಡಿದರು.



ಜಿಲ್ಲೆಯ ಎಲ್ಲಾ ಶಾಸಕರು ತಮ್ಮ ತಮ್ಮ ತಾಲ್ಲೂಕಿನ ಸಮಸ್ಯೆಗಳ ಬಗ್ಗೆ ಸಲಹೆ ನೀಡಿದ್ದು, ಸರ್ಕಾರವು ರೈತರ ಹಿತ ಕಾಯಲು ಸುಮಾರು 1,550 ಕೋಟಿ ರೂ. ರಾಜ್ಯದಲ್ಲಿ ಘೋಷಿಸಿದ್ದು, ನೇರವಾಗಿ ಇನ್ಪುಟ್ ಸಬ್ಸಿಡಿ ಮುಖಾಂತರ ಪ್ರತಿ ರೈತರಿಗೆ 2500 ರೂ. ನೀಡುವ ಕೆಲಸ ಮಾಡಲಾಗುತ್ತಿದೆ. ಇದರ ಜೊತೆಗೆ ಕುಡಿಯುವ ನೀರಿನ ಬರಗಾಲ ಪರಿಸ್ಥಿತಿಯನ್ನು ಎದುರಿಸಲು ರಾಜ್ಯಮಟ್ಟದಲ್ಲಿ ಸುಮಾರು 300 ಕೋಟಿ ರೂ. ನೀಡಲಾಗಿದ್ದು, ರಾಯಚೂರು ಜಿಲ್ಲೆಗೆ ಮೊದಲನೇ ಕಂತಿನಲ್ಲಿ 6 ಕೋಟಿ ಹಾಗೂ ಎರಡನೇ ಕಂತಿನಲ್ಲಿ 5 ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದರು. ಕೇಂದ್ರ ಸರ್ಕಾರದ ಮಾನದಂಡಗಳನ್ನು ಗಮನದಲ್ಲಿಟ್ಟು ಕೊಂಡು ಕರ್ನಾಟಕ ರಾಜ್ಯದಲ್ಲಿ ಒಟ್ಟು 201 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಕೆಲವು ಕಡೆಗಳಲ್ಲಿ ಮಾನಿಟರಿಂಗ್ ಹಾಗೂ ಇನ್ನು ಕೆಲವು ಕಡೆಗಳಲ್ಲಿ ಸಿವಿಯರ್ ಆಗಿ ಪರಿಗಣಿಸಿ ಮಾರ್ಗಸೂಚಿಗಳನ್ವಯ ಕ್ರಮ ಕೈಗೊಳ್ಳಲಾಗಿದೆ. ರಾಯಚೂರು ಜಿಲ್ಲಾ ಉಸ್ತುವಾರಿಯಾಗಿ ಕೆಲದಿನಗಳ ಹಿಂದೆ ನೇಮಕಗೊಂಡ ನಂತರ, ಪ್ರಜಾಸೇವೆ, ಬರ ವೀಕ್ಷಣೆ, ಸ್ವಾತಂತ್ರ್ಯೋತ್ಸವ ಹಾಗೂ ಹೈದರಾಬಾದ್ ಕರ್ನಾಟಕ ವಿಮೋಚನಾ ದಿನಾಚರಣೆ ಸೇರಿದಂತೆ ವಿವಿಧ ಹಂತಗಳಲ್ಲಿ ಜಿಲ್ಲೆಗೆ ಭೇಟಿ ನೀಡಿ ಇಲ್ಲಿನ ವಿವಿಧ ಸಮಸ್ಯೆಗಳ ಕುರಿತು ಸಮಾಲೋಚನೆ ನಡೆಸಲಾಗಿದೆ ಎಂದರು.

ಅಧಿಕಾರಿಗಳು ಜಿಲ್ಲೆಯ ಎಲ್ಲಾ ಕಡೆಗಳಲ್ಲಿ ಖುದ್ದಾಗಿ ಭೇಟಿ ನೀಡಿ, ಪರಿಶೀಲನೆ ನಡೆಸಿ, ಅಗತ್ಯವಿರುವ ಸಂಪೂರ್ಣ ಮಾಹಿತಿ ಪಡೆದುಕೊಂಡು ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು, ಬರಗಾಲದ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆ ಯಾಗದಂತೆ ಮುನ್ನೆಚ್ಚರಿಕೆ ವಹಿಸಿ, ಬಿಡುಗಡೆಯಾದ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರು ಸೂಚನೆ ನೀಡಿದರು.

ಜಿಲ್ಲಾಡಳಿತ, ಪೊಲೀಸ್ ಇಲಾಖೆ, ನೀರಾವರಿ ಇಲಾಖೆ ಹಾಗೂ ಆಡಳಿತ ಮತ್ತು ವಿರೋಧ ಪಕ್ಷದ ಎಲ್ಲಾ ಜನಪ್ರತಿನಿಧಿಗಳು ಒಟ್ಟಾಗಿ ಈ ಬರಗಾಲವನ್ನು ಸಮರ್ಥವಾಗಿ ಎದುರಿಸಲು ಕೈಜೋಡಿಸಬೇಕಿದೆ. ಜಿಲ್ಲೆಯಾದ್ಯಂತ ಬರ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸಲು ಆಡಳಿತ ಯಂತ್ರವು ಸಜ್ಜಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವರು ಹೇಳಿದರು.

ಪ್ರತಿ ಗ್ರಾಮದಲ್ಲಿ ಜನಸಂಖ್ಯೆ ಎಷ್ಟು, ಎಷ್ಟು ಪ್ರಮಾಣದ ನೀರು ಅಗತ್ಯವಿದೆ ಹಾಗೂ ಎಷ್ಟು ಬೋರ್‌ವೆಲ್‌ಗಳ ಅವಶ್ಯಕತೆ ಇದೆ ಎಂಬುದರ ಕುರಿತು ಸಮಗ್ರ ಮಾಹಿತಿ ಪಡೆಯಬೇಕು. ಕುಡಿಯುವ ನೀರಿನ ಯೋಜನೆಗೆ ಸಂಬಂಧಿಸಿದ ಅಧಿಕಾರಿಗಳು ಏನು ಕ್ರಮ ಕೈಗೊಂಡಿದ್ದಾರೆ ಎಂಬುದನ್ನು ತಿಳಿಸಬೇಕು.

– ಹಂಪನಗೌಡ ಬಾದರ್ಲಿ, ಶಾಸಕ

ಕಳೆದ ಒಂದು ವರ್ಷದಿಂದ ಜಲಮೂಲ ಇಲ್ಲ ಎಂದು ಹೇಳಲಾಗುತ್ತಿದೆ. ಬಾಡಿಗೆ ಬೋರವೆಲ್ ಮೂಲಕ ನೀರು ನೀಡಲಾಗುತ್ತಿದೆ ಎಂದು ಅಧಿಕಾರಿಗಳು ಹೇಳುತ್ತಿದ್ದರೂ ವಾಸ್ತವ ಸ್ಥಿತಿ ಬೇರೆ ಇದೆ.

– ಬಸನಗೌಡ ತುರವಿಹಾಳ್, ಶಾಸಕ

ಉದಯ UV ವಾಹಿನಿ
ದೇಶ/ವಿದೇಶ
ಶುಕ್ರವಾರ
09 ಅಕ್ಟೋಬರ್ 2026


ಏಜೆಂಟರಿಂದ ಮೋಸಹೋಗಿ ರಷ್ಯಾದ ಸೇನೆಯಲ್ಲಿ ಸಿಲುಕಿಕೊಂಡಿದ್ದ ತೆಲಂಗಾಣದ ವ್ಯಕ್ತಿಗಳು ವಾಪಸಾಗಲು ಕೇಂದ್ರ ಸರ್ಕಾರ ನೆರವು ನೀಡುತ್ತಿದೆ.

# ರಷ್ಯಾ ಸೇನೆಯಿಂದ ಆಂಧ್ರ, ತೆಲಂಗಾಣದ 10 ಮಂದಿ ಬಿಡುಗಡೆ

**ನಿಜಾಮಾಬಾದ್:** ಏಜೆಂಟರಿಂದ ಮೋಸಹೋಗಿ ರಷ್ಯಾದ ಸೇನೆಯಲ್ಲಿ ಸಿಲುಕಿಕೊಂಡಿದ್ದ ತೆಲಂಗಾಣದ ವ್ಯಕ್ತಿಗಳು ವಾಪಸಾಗಲು ಕೇಂದ್ರ ಸರ್ಕಾರ ನೆರವು ನೀಡುತ್ತಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಅಧಿಕಾರಿಗಳು ಈಗಾಗಲೇ ಮಾಸ್ಕೋದಲ್ಲಿರುವ ಭಾರತೀಯ ರಾಯಭಾರ ಕಚೇರಿಗೆ ಪತ್ರ ಬರೆದಿದ್ದಾರೆ.

1. ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಅಧಿಕಾರಿಗಳ ಪ್ರಯತ್ನ
2. ಮಾಸ್ಕೋದಲ್ಲಿರುವ ಭಾರತೀಯ ರಾಯಭಾರ ಕಚೇರಿಗೆ ಪತ್ರ
3. ರಷ್ಯಾದ ಒಕ್ಕೂಟದ ರಕ್ಷಣಾ ಸಚಿವಾಲಯದೊಂದಿಗೆ ಸಮನ್ವಯ

ನಿಜಾಮಾಬಾದ್ ಸಂಸದ ಧರ್ಮಪುರಿ ಅರವಿಂದ್ ಅವರು ವಿದೇಶಾಂಗ ವ್ಯವಹಾರಗಳ ಸಚಿವಾಲಯದೊಂದಿಗೆ ಸಮಾಲೋಚನೆ ನಡೆಸಿದರೆ, ರಾಜ್ಯ ಎನ್‌ಆರ್‌ಐ ಸಲಹಾ ಸಮಿತಿಯ ಉಪಾಧ್ಯಕ್ಷ ಮಂಡ ಭೀಮ್ ರೆಡ್ಡಿ ಅವರು ರಷ್ಯಾದ ಒಕ್ಕೂಟದ ರಕ್ಷಣಾ ಸಚಿವಾಲಯದೊಂದಿಗೆ ಸಮನ್ವಯ ಸಾಧಿಸಿದ್ದಾರೆ.

ಈ ಹಿನ್ನೆಲೆಯಲ್ಲಿ, ಗದ್ದಂ ಶೇಖರ್ (ಬಂಡಾ ಲಿಂಗಾಪುರ್, ಜಗಿತಿಯಾಲ ಜಿಲ್ಲೆ), ಕೌಡ ರಾಜಶೇಖರ್ (ಕೇಶಾಪುರ್) ಮತ್ತು ಕಸ್ತೂರಿ ತಿರುಪತಿ (ಧರ್ಪಲ್ಲಿ, ನಿಜಾಮಾಬಾದ್ ಜಿಲ್ಲೆ) ದೆಹಲಿಗೆ ಆಗಮಿಸಿದರು. ಇದಕ್ಕೂ ಮುನ್ನ, ವರಕಂತಿ ಕಾರ್ತಿಕ್ (ಕಿಸಾನ್ ನಗರ, ನಿಜಾಮಾಬಾದ್), ರೆಬ್ಬ ಭರತ್ (ಧರ್ಪಲ್ಲಿ), ಸುರೇಶ್ (ಡೋಮಕೊಂಡ, ಕಾಮರೆಡ್ಡಿ ಜಿಲ್ಲೆ), ಗೊರುವಂತುಲ ಲಿಂಬಾದ್ರಿ (ಬಂಡಾ ಲಿಂಗಾಪುರ್), ಗೊಲ್ಲ ಬಾಲಯ್ಯ (ಸಿರ್ಸಿಲ್ಲಾ), ಕರಿ ನಾಗಾರ್ಜುನ (ವಿಜಯವಾಡ–ಆಂಧ್ರಪ್ರದೇಶ) ಮತ್ತು ಪೋಡಿ ಗೋವಿಂದ (ಅನಕಾಪಲ್ಲಿ–ಆಂಧ್ರಪ್ರದೇಶ) ಬುಧವಾರ ಸಂಜೆ ರಷ್ಯಾದಿಂದ ದೆಹಲಿಗೆ ಆಗಮಿಸಿದ್ದಾರೆ.

ಭುಕ್ಯಾ ರವೀಂದರ್ (ಮುನಿಪಲ್ಲಿ, ಜಾಕ್ರನ್‌ಪಲ್ಲಿ ತಾಲ್ಲೂಕು, ನಿಜಾಮಾಬಾದ್ ಜಿಲ್ಲೆ) ಮತ್ತು ಮೇಘಾವತ್ ಪ್ರಕಾಶ್ (ದಮ್ಮನ್ನಪೇಟ, ಧರ್ಪಲ್ಲಿ ತಾಲ್ಲೂಕು) ಇನ್ನೂ ರಷ್ಯಾದ ಸೇನೆಯಲ್ಲಿದ್ದಾರೆ. ಆದ್ರೆ ಅವರನ್ನು ಗಡಿಗೆ ನಿಯೋಜಿಸಿಲ್ಲ ಎಂದು ವರದಿಯಾಗಿದೆ. ಅಲ್ಲಿನ ಅಧಿಕಾರಿಗಳು ಅವರಿಗೆ ಸಂಬಂಧಿಸಿದ ಫೋಟೋಗಳು ಮತ್ತು ವೈಯಕ್ತಿಕ ವಿವರಗಳನ್ನು ಸಂಗ್ರಹಿಸಿದ್ದಾರೆ. ಶಿರ್ಸು ಅಶೋಕ್ (ಪೆದ್ದವಲ್ಗೋಟ್, ಸಿರಿಕೊಂಡ ತಾಲ್ಲೂಕು) ಮತ್ತು ಮೊಹಮ್ಮದ್ ಅಫ್ಜಲ್ ಖಾನ್ (ತಾಡ್‌ಕೋಲ್, ಬಾನ್ಸ್‌ವಾಡ) ಅವರನ್ನು ರಷ್ಯಾದ ಸೇನೆಯಲ್ಲಿ ಸೇವೆ ಸಲ್ಲಿಸುವಂತೆ ಒತ್ತಾಯಿಸಲಾಗುತ್ತಿದೆ. ಈ ನಾಲ್ವರಿಗೂ ರಷ್ಯಾದ ಪೌರತ್ವ ನೀಡಿರುವುದರಿಂದ ಅವರನ್ನು ಬಿಡುಗಡೆ ಮಾಡುವುದು ಕಷ್ಟ ಎಂದು ರಷ್ಯಾದ ಸೇನಾ ಅಧಿಕಾರಿಗಳು ಹೇಳುತ್ತಿದ್ದಾರೆ ಎಂದು ವರದಿಯಾಗಿದೆ.

ಇದೇ ವೇಳೆ, ಶಾಂತಪುರಿ ರಾಜು ಮತ್ತು ಚಕ್ಕರ್ಲ ಚಿನ್ನವೆಂಕಟಿ (ಖೋಜಾಪುರ, ಚಂದುರ್ತಿ ತಾಲ್ಲೂಕು, ಸಿರ್ಸಿಲ್ಲಾ ಜಿಲ್ಲೆ) ಅವರು ತಮ್ಮ ಆರ್ಥಿಕ ಅಗತ್ಯಗಳ ಕಾರಣದಿಂದಾಗಿ ರಷ್ಯಾದ ಸೇನೆಯಲ್ಲೇ ಸೇವೆಯನ್ನು ಮುಂದುವರಿಸುವ ಇಂಗಿತವನ್ನು ಅಧಿಕಾರಿಗಳೆದುರು ವ್ಯಕ್ತಪಡಿಸಿದ್ದಾರೆ.



### ಸಹವರ್ತಿಗಳೊಂದಿಗೆ ಚರ್ಚೆ

ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಹಿರಿಯ ಅಧಿಕಾರಿಗಳು ರಷ್ಯಾದ ತಮ್ಮ ಸಹವರ್ತಿಗಳೊಂದಿಗೆ ಈ ವಿಷಯದ ಬಗ್ಗೆ ಚರ್ಚಿಸುತ್ತಿದ್ದಾರೆ ಎಂದು ತಿಳಿದುಬಂದಿದೆ. ತೆಲಂಗಾಣ ಅಧಿಕಾರಿಗಳು ಒದಗಿಸಿದ ವಿವರಗಳನ್ನು ಪರಿಶೀಲಿಸಿದ ನಂತರ ಈ ನಾಲ್ವರನ್ನೂ ಬಿಡುಗಡೆ ಮಾಡುವ ಸಾಧ್ಯತೆಯಿದೆ. ಇವರಲ್ಲದೆ, ತಮ್ಮ ಸಂಬಂಧಿಕರು ರಷ್ಯಾದ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂದು ತಿಳಿಸಿ, ದೊಮ್ಮಟಿ ಕಿಶನ್ (ಯಲ್ಲಾರೆಡ್ಡಿಪೇಟೆ, ಸಿರ್ಸಿಲ್ಲಾ ಜಿಲ್ಲೆ), ಮುಕ್ಕೇರ ರಾಜಕುಮಾರ್ (ಕೋರುಟ್ಲ), ಪೋತರಾಜು ವಿಜಯಕೃಷ್ಣ (ವಾರಂಗಲ್) ಮತ್ತು ಸುಪ್ಪನ್ ಸ್ವಾಮಿ (ಮದ್ನೂರು, ಕಾಮರೆಡ್ಡಿ ಜಿಲ್ಲೆ) ಅವರ ಕುಟುಂಬ ಸದಸ್ಯರು ಬುಧವಾರ ಹೈದರಾಬಾದ್‌ನ ಪ್ರವಾಸಿ ಪ್ರಜಾವಾಣಿ' ಕೇಂದ್ರದಲ್ಲಿ ದೂರುಗಳನ್ನು ಸಲ್ಲಿಸಿದ್ದಾರೆ. ಇಲ್ಲಿಯವರೆಗೆ ಇದೇ ರೀತಿ ಸುಮಾರು 20 ವ್ಯಕ್ತಿಗಳ ವಿವರಗಳನ್ನು ಒಳಗೊಂಡ ಮನವಿಗಳು ಸ್ವೀಕೃತವಾಗಿವೆ.

## ದೆಹಲಿಯಲ್ಲಿ ಐದು ಅಂತಸ್ತಿನ ಕಟ್ಟಡ ಕುಸಿತ: ಮೂವರು ಸಾವು, 11 ಮಂದಿಗೆ ಗಾಯ: ಮುಂದುವರಿದ ರಕ್ಷಣಾ ಕಾರ್ಯಾಚರಣೆ

**ನವದೆಹಲಿ:** ದೆಹಲಿಯ ಹೊಸ ಸೀಮಾಪುರಿಯ ಈದ್ಗಾ ಮೀನು ಮಾರುಕಟ್ಟೆಯ ಬಳಿ ಐದು ಅಂತಸ್ತಿನ ಕಟ್ಟಡವೊಂದು ಕುಸಿದುಬಿದ್ದಿದ್ದು, ಮೂವರು ಮೃತ ಪಟ್ಟು 11ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಈ ಘಟನೆ ಸ್ಥಳೀಯರಲ್ಲಿ ಆತಂಕ ಮೂಡಿಸಿದೆ.

ಮಧ್ಯಾಹ್ನ 3:15ರ ಸುಮಾರಿಗೆ ಕಟ್ಟಡ ಕುಸಿತದ ಬಗ್ಗೆ ಅಗ್ನಿಶಾಮಕ ನಿಯಂತ್ರಣ ಕೊಠಡಿಗೆ ಕರೆ ಬಂದಿತ್ತು. ಮಾಹಿತಿ ಪಡೆದ ತಕ್ಷಣ ದೆಹಲಿ ಅಗ್ನಿಶಾಮಕ ದಳದ ತಂಡವು ಸ್ಥಳಕ್ಕೆ ಆಗಮಿಸಿ ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆಯನ್ನು ಪ್ರಾರಂಭಿಸಿತು. ಪ್ರಸ್ತುತ ದೆಹಲಿ ಪೊಲೀಸರು ಮತ್ತು ಅಗ್ನಿಶಾಮಕ ದಳದ ತಂಡಗಳು ಸ್ಥಳದಲ್ಲಿದ್ದು, ರಕ್ಷಣಾ ಕಾರ್ಯಾಚರಣೆ ಮುಂದುವರಿಸಿವೆ.

ಲಭ್ಯವಿರುವ ಮಾಹಿತಿಯ ಪ್ರಕಾರ, ಘಟನೆಯಲ್ಲಿ ಮಗು ಸೇರಿದಂತೆ ಮೂವರು ಪ್ರಾಣಕಳೆದುಕೊಂಡಿದ್ದಾರೆ. 12 ವರ್ಷದ ಬಾಲಕಿ, ಗರ್ಭಿಣಿ ಮಹಿಳೆ ಮತ್ತು ಇನ್ನೊಬ್ಬ ಮಗು ಮೃತಪಟ್ಟಿದೆ ಎಂದು ವರದಿಯಾಗಿದೆ. ಅಷ್ಟೇ ಅಲ್ಲ ಸುಮಾರು 11 ಜನ ಗಾಯಗೊಂಡಿದ್ದಾರೆ ಎಂದು ತಿಳಿದು ಬಂದಿದೆ. ಅವಶೇಷಗಳ ಅಡಿಯಲ್ಲಿ ಜನರು ಸಿಕ್ಕಿಹಾಕಿಕೊಂಡಿರುವ ವರದಿಗಳಿವೆ. ಗಾಯಗೊಂಡವರನ್ನು ತಕ್ಷಣವೇ ರಾಜೀವ್ ಗಾಂಧಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅಲ್ಲಿ ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ.




ಘಟನೆಯ ನಂತರದ ದೃಶ್ಯಾವಳಿಗಳಿರುವ ವಿಡಿಯೋವೊಂದು ಹೊರಬಿದ್ದಿದ್ದು, ಅದರಲ್ಲಿ ಅವಶೇಷಗಳು ಕಾಣಿಸುತ್ತಿವೆ. ನೂರಾರು ಸ್ಥಳೀಯರು ಅವಶೇಷಗಳನ್ನು ತೆರವುಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಅವರೊಂದಿಗೆ ದೆಹಲಿ ಪೊಲೀಸರು ರಕ್ಷಣಾ ಕಾರ್ಯಾಚರಣೆಯನ್ನು ಮುಂದುವರಿಸಿದ್ದಾರೆ.

ಅಗ್ನಿಶಾಮಕ ಇಲಾಖೆಯ ಪ್ರಕಾರ, ಆರಂಭದಲ್ಲಿ ಮೂರು ವಾಟರ್ ಟೆಂಡರ್‌ಗಳುಮತ್ತು ಇನ್ಸಿಡೆಂಟ್ ರೆಸ್ಪಾನ್ಸ್ ಟೀಮ್‌ಗಳನ್ನು ಸ್ಥಳಕ್ಕೆ ಕಳುಹಿಸಲಾಗಿತ್ತು. ಮುಖ್ಯ ಅಗ್ನಿಶಾಮಕ ಅಧಿಕಾರಿ ಎ.ಕೆ. ಮಲಿಕ್ ಅವರು ಘಟನೆಯ ಕುರಿತು ವಿವರಗಳನ್ನು ನೀಡಿದ್ದಾರೆ. ಪ್ರಸ್ತುತ ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆಗಳು ನಡೆಯುತ್ತಿವೆ ಎಂದು ತಿಳಿಸಿದ್ದಾರೆ. ಎಸ್‌ಟಿಒ ಮನೋಜ್ ತ್ಯಾಗಿ ಅವರು ಸ್ಥಳದಲ್ಲಿದ್ದು, ರಕ್ಷಣಾ ಕಾರ್ಯಾಚರಣೆಯ ಮೇಲ್ವಿಚಾರಣೆ ಮಾಡುತ್ತಿದ್ದಾರೆ.

ಈ ಕಟ್ಟಡವು ಒಳಭಾಗದ ರಸ್ತೆಯಲ್ಲಿದ್ದು, ಕಳೆದ ವರ್ಷವಷ್ಟೇ ನಿರ್ಮಿಸಲಾಗಿತ್ತು ಎಂದು ವರದಿಯಾಗಿದೆ. ಐದು ಅಂತಸ್ತಿನ ಈ ಕಟ್ಟಡದ ನೆಲ ಅಂತಸ್ತಿನಲ್ಲಿ ಅಂಗಡಿಗಳಿದ್ದವು ಮತ್ತು ಮೇಲಿನ ನಾಲ್ಕು ಅಂತಸ್ತುಗಳಲ್ಲಿ ವಿವಿಧ ಕುಟುಂಬಗಳು ವಾಸಿಸುತ್ತಿದ್ದವು. ಕಟ್ಟಡದ ಮಾಲೀಕರು ಮತ್ತು ಅವರ ಕುಟುಂಬವೂ ಅಲ್ಲಿಯೇ ವಾಸಿಸುತ್ತಿದ್ದರು. ಅವರೂ ಕೂಡ ಅವಶೇಷಗಳಡಿ ಸಿಕ್ಕಿಹಾಕಿಕೊಂಡಿದ್ದಾರೆ ಎಂದು ವರದಿಯಾಗಿದೆ. ಸ್ಥಳೀಯರು ಅವಶೇಷಗಳಡಿಯಿಂದ ಇಬ್ಬರು ಮಕ್ಕಳನ್ನು ಹೊರತೆಗೆದು ಆಸ್ಪತ್ರೆಗೆ ಸಾಗಿಸುವಲ್ಲಿ ರಕ್ಷಣಾ ತಂಡ ಯಶಸ್ವಿಯಾಗಿದೆ.

## ನನ್ನನ್ನು ಆಯ್ಕೆ ಮಾಡುವುದು ಅನುಮಾನ; ನೊಬೆಲ್ ಶಾಂತಿ ಪ್ರಶಸ್ತಿ ಬಗ್ಗೆ ಟ್ರಂಪ್ ಪುನರುಚ್ಚಾರ

**ವಾಷಿಂಗ್ಟನ್:** 2026ನೇ ಸಾಲಿನ ನೊಬೆಲ್ ಪ್ರಶಸ್ತಿಗಳು ಪ್ರಕಟವಾಗುತ್ತಿದ್ದು, ಶುಕ್ರವಾರ ನೊಬೆಲ್ ಶಾಂತಿ ಪುರಸ್ಕಾರದ ಹೆಸರು ಘೋಷಣೆಯಾಗಲಿದೆ. ಅದಕ್ಕೂ ಮುನ್ನ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೆ ತಾವು ಈ ಪ್ರಶಸ್ತಿಗೆ ಅರ್ಹ ಎಂದು ಪ್ರತಿಪಾದಿಸಿದ್ದಾರೆ. ಓವಲ್ ಕಚೇರಿಯಲ್ಲಿ ಮಾತನಾಡಿರುವ ತಮ್ಮ ಈ ಹಕ್ಕು ಮಂಡನೆಗೆ ಸಮಂಜಸ ಕಾರಣ ಇದೆ ಎಂದಿದ್ದು, ನಾರ್ವೇಜಿಯನ್ ನೊಬೆಲ್ ಸಮಿತಿಯು ಅಂತಿಮವಾಗಿ ತಮ್ಮನ್ನು ಆಯ್ಕೆ ಮಾಡಲಿದೆಯೇ ಎಂಬ ಬಗ್ಗೆ ಅವರು ಸಂಶಯವನ್ನೂ ವ್ಯಕ್ತಪಡಿಸಿದ್ದಾರೆ. ಇದು ಸೂಕ್ತ ಸಮಯವಾಗಿದೆ ಎಂದಿರುವ ಟ್ರಂಪ್, ಕಳೆದ ಬಾರಿ ಅದನ್ನು ಸ್ವೀಕರಿಸಿದವರಿಂದ ನನಗೆ ಅದು ಪರೋಕ್ಷವಾಗಿ ದೊರೆತಾಗ ನನಗೆ ಬಹಳ ಗೌರವವೆನಿಸಿತು. ತಮಗಿಂತ ಹೆಚ್ಚಾಗಿ ಇತಿಹಾಸದಲ್ಲಿ ಬೇರೆ ಯಾರೂ ಇದಕ್ಕೆ ಅರ್ಹರಲ್ಲ ಎಂದಿದ್ದಾರೆ. ಅಮೆರಿಕದ ನಾಯಕರ ರಾಜತಾಂತ್ರಿಕ ಮಧ್ಯಸ್ಥಿಕೆಗಳು ಸಾಧನೆಗಳನ್ನು ಮೀರಿವೆ. ಎರಡನೇ ಅವಧಿಗೆ ಅಧಿಕಾರ ವಹಿಸಿಕೊಂಡ ಬಳಿಕ ತಾವು ಎಂಟು ಪ್ರತ್ಯೇಕ ಸಂಘರ್ಷಗಳನ್ನು ಯಶಸ್ವಿಯಾಗಿ ಬಗೆಹರಿಸಿದ್ದೇವೆ. ಬೇರೆ ಯಾರೂ ಮಾಡಿರದಂತಹ ಕೆಲಸಗಳನ್ನು ನಾನು ಮಾಡಿದ್ದೇನೆ. ನಾನೇನೂ ಬಡಾಯಿ ಕೊಚ್ಚಿಕೊಳ್ಳುತ್ತಿಲ್ಲ, ಕೇವಲ ವಾಸ್ತವ ಸಂಗತಿ ಹೇಳುತ್ತಿದ್ದೇನೆ. ಬಹುಶಃ ಈ ಹಿಂದೆ ಯಾವ ಅಧ್ಯಕ್ಷರೂ ಯಾವುದೇ ಯುದ್ಧ ಇತ್ಯರ್ಥಪಡಿಸಿರಲಿಕ್ಕಿಲ್ಲ. ಆದರೆ ನಾನು ಎಂಟು ಯುದ್ಧಗಳನ್ನು ಇತ್ಯರ್ಥ ಪಡಿಸಿದ್ದೇನೆ ಎಂದಿದ್ದಾರೆ. ಆಯ್ಕೆ ಸಮಿತಿಯು ತಮ್ಮನ್ನು ಪರಿಗಣಿಸದೇ ಹೋಗುವ ಸಾಧ್ಯತೆ ಗಮನದಲ್ಲಿಟ್ಟುಕೊಂಡು ಟೀಕಿಸಿರುವ ಅಧ್ಯಕ್ಷ ಟ್ರಂಪ್, ನನ್ನಂತಹವರಿಗೆ ಪ್ರಶಸ್ತಿ ನೀಡದಿರುವ ಕುಖ್ಯಾತಿಯನ್ನು ಈ ಸಮಿತಿ ಹೊಂದಿದೆ ಎಂದು ಟೀಕಿಸಿದ್ದಾರೆ. ಪ್ರಶಸ್ತಿ ನನಗೆ ಸಿಗಲಿ ಅಥವಾ ಸಿಗದಿರಲಿ, ನಾನು ಅದಕ್ಕಿಂತಲೂ ಹೆಚ್ಚಿನದನ್ನೇ ಮಾಡಿದ್ದೇನೆ. ಅದು ಅವರಿಗೆ ದೊಡ್ಡ ಅವಮಾನವಾಗುತ್ತದೆ ಎಂದು ನಾನು ಭಾವಿಸುತ್ತೇನೆ. ನಾನು ಇದನ್ನು ತಿರಸ್ಕಾರದಿಂದ ಹೇಳುತ್ತಿಲ್ಲ. ಎಂಟು ಯುದ್ಧಬಗೆಹರಿಸಿದ್ದು ಇಂತಹ ಕೆಲಸವನ್ನು ಹಿಂದೆ ಯಾರೂ ಮಾಡಿರಲಿಲ್ಲ. ಅದಕ್ಕಾಗಿ ನಾನು ಹೀಗೆ ಹೇಳುತ್ತಿದ್ದೇನೆ ಎಂದಿದ್ದಾರೆ.

## ಸೌದಿ ವಿಮಾನ ನಿಲ್ದಾಣಗಳ ಮೇಲಿನ ದಾಳಿ ಸಂಪೂರ್ಣ ಖಂಡನೀಯ: ಭಾರತ; ಮೃತರ ಕುಟುಂಬಗಳಿಗೆ ಸಂತಾಪ

**ನವದೆಹಲಿ:** ಸೌದಿ ಅರೇಬಿಯಾದ ಅಬ್ಹಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ರಿಯಾದ್‌ನ ಕಿಂಗ್ ಖಾಲಿದ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ನಡೆದ ದಾಳಿಯನ್ನು ಭಾರತ ಖಂಡಿಸಿದೆ. ದಾಳಿಯಲ್ಲಿ ಮೂವರು ಮೃತಪಟ್ಟಿದ್ದು, 36 ಮಂದಿ ಗಾಯಗೊಂಡಿದ್ದಾರೆ. ನಾಗರಿಕ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ನಡೆಸುವ ದಾಳಿಗಳು ಸಂಪೂರ್ಣವಾಗಿ ಸ್ವೀಕಾರಾರ್ಹವಲ್ಲ ಎಂದು ಭಾರತ ಹೇಳಿದೆ.

ಕಳೆದ ಕೆಲವು ದಿನಗಳಲ್ಲಿ ನಡೆದ ದಾಳಿಗಳಿಂದ ನಾಗರಿಕರು ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ. ಮೃತಪಟ್ಟವರ ಕುಟುಂಬಗಳಿಗೆ ಸಂತಾಪ ಸೂಚಿಸಿರುವ ಸಚಿವಾಲಯ, ಗಾಯಗೊಂಡವರು ಶೀಘ್ರ ಚೇತರಿಸಿಕೊಳ್ಳಲಿ ಎಂದು ಹಾರೈಸಿದೆ.

ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡ ಕುಟುಂಬಗಳಿಗೆ ನಮ್ಮ ಆಳವಾದ ಸಂತಾಪಗಳನ್ನು ಸೂಚಿಸುತ್ತೇವೆ. ಗಾಯಗೊಂಡವರು ಶೀಘ್ರ ಚೇತರಿಸಿಕೊಳ್ಳಲಿ ಎಂದು ಹಾರೈಸುತ್ತೇವೆ ಎಂದು ಒಇಎ ಹೇಳಿಕೆಯಲ್ಲಿ ತಿಳಿಸಿದೆ. ಸೌದಿ ಅರೇಬಿಯಾಕ್ಕೆ ಭಾರತ ತನ್ನ ಒಗ್ಗಟ್ಟನ್ನು ವ್ಯಕ್ತಪಡಿಸಿದೆ. ಸೌದಿ ಅರೇಬಿಯಾದ ನಾಗರಿಕ ವಿಮಾನಯಾನ ಪ್ರಾಧಿಕಾರ ಪ್ರಕಾರ, ಎರಡು ವಿಮಾನ ನಿಲ್ದಾಣಗಳ ಮೇಲಿನ ದಾಳಿಗಳು ಅಕ್ಟೋಬರ್ 6 ಮತ್ತು ನಿನ್ನೆ ಪ್ರತ್ಯೇಕವಾಗಿ ನಡೆದಿವೆ. ಅಬ್ಹಾ ವಿಮಾನ ನಿಲ್ದಾಣದಲ್ಲಿ ನಡೆದ ದಾಳಿಯಲ್ಲಿ ಇಬ್ಬರು ಮೃತಪಟ್ಟಿದ್ದು, 28 ಮಂದಿ ಗಾಯಗೊಂಡಿದ್ದಾರೆ.



ಕಿಂಗ್ ಖಾಲಿದ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲಿನ ದಾಳಿಯಲ್ಲಿ ಒಬ್ಬರು ಮೃತಪಟ್ಟಿದ್ದು, ಎಂಟು ಮಂದಿ ಗಾಯಗೊಂಡಿದ್ದಾರೆ.

ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಹಾನಿಯ ಪ್ರಮಾಣವನ್ನು ಅಂದಾಜಿಸಲಾಗುತ್ತಿದ್ದು, ವಿಮಾನ ನಿಲ್ದಾಣಗಳ ಸೌಲಭ್ಯಗಳ ಸುರಕ್ಷತೆಯನ್ನೂ ಪರಿಶೀಲಿಸಲಾಗುತ್ತಿದೆ ಎಂದು ಉಂಅಂ ತಿಳಿಸಿದೆ. ಸೌದಿ ಅರೇಬಿಯಾ ಮತ್ತು ಅದರ ಮಿತ್ರರಾಷ್ಟ್ರಗಳೊಂದಿಗೆ ದೀರ್ಘಕಾಲದಿಂದ ಸಂಘರ್ಷ ನಡೆಸುತ್ತಿರುವ ಯೆಮೆನ್‌ನ ಹೌತಿ ಬಂಡುಕೋರರ ಸಂಘಟನೆ ಈ ದಾಳಿಗಳ ಹೊಣೆ ಹೊತ್ತುಕೊಂಡಿದೆ. ಹೌತಿ ಸೇನೆಯ ವಕ್ತಾರ ಯಾಹ್ಯಾ ಸರೀ, ಸೌದಿ ಅರೇಬಿಯಾ ಮತ್ತು ಸೌದಿ ಬೆಂಬಲಿತ ಗುರಿಗಳ ಮೇಲೆ ಕ್ಷಿಪಣಿ ದಾಳಿ ನಡೆಸಿರುವುದಾಗಿ ಹೇಳಿದ್ದಾರೆ. ಇದಕ್ಕೆ ಪ್ರತಿಯಾಗಿ, ಸೌದಿ ನೇತೃತ್ವದ ಮೈತ್ರಿಪಡೆಗಳು ಯೆಮೆನ್‌ನಲ್ಲಿ ಹೌತಿ ಬಂಡುಕೋರರಿಗೆ ಸೇರಿದ 82 ಸೇನಾ ಗುರಿಗಳನ್ನು ನಾಶಪಡಿಸಿರುವುದಾಗಿ ತಿಳಿಸಿವೆ.

ಭಾರತೀಯ ವಾಯುಪಡೆ ದಿನದ ಹಿನ್ನೆಲೆ ವಾಯುಪಡೆ ಯೋಧರು, ಮಾಜಿ ಯೋಧರು ಮತ್ತು ಅವರ ಕುಟುಂಬದವರಿಗೆ ಶುಭಾಶಯ

# ವಾಯು ಸೇನಾ ಸಿಬ್ಬಂದಿ ಶೌರ್ಯ ಶ್ಲಾಘಿಸಿದ ರಾಷ್ಟ್ರಪತಿ ಮುರ್ಮು, ಪ್ರಧಾನಿ ಮೋದಿ

**ನವದೆಹಲಿ:** ಭಾರತೀಯ ವಾಯುಪಡೆ ದಿನದ ಅಂಗವಾಗಿ ವಾಯುಪಡೆ ಸಿಬ್ಬಂದಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಮತ್ತು ಇತರೆ ಹಿರಿಯ ನಾಯಕರು ಶುಭಾಶಯ ಕೋರಿದ್ದು, ದೇಶದ ವಾಯು ಪ್ರದೇಶ ರಕ್ಷಿಸುವಲ್ಲಿ ಅವರ ಧೈರ್ಯ, ಸಮರ್ಪಣಾ ಭಾವ ಮತ್ತು ಬದ್ಧತೆಯನ್ನು ಶ್ಲಾಘಿಸಿದರು.

1. ವಾಯುಪಡೆಯ ವೃತ್ತಿಪರತೆ, ಶಿಸ್ತು ಮಾದರಿ
2. ಐಎಎಫ್ ಪ್ರತಿಯೊಬ್ಬ ನಾಗರಿಕನ ಗಮನವನ್ನು ಸೆಳೆದಿದೆ
3. ಇವರ ದೇಶಭಕ್ತಿ, ವೃತ್ತಿಪರತೆ ಯುವ ಪೀಳಿಗೆಗೆ ಸ್ಫೂರ್ತಿ

ಶುಭಾಶಯ ತಿಳಿಸಿ ಮಾತನಾಡಿರುವ ರಾಷ್ಟ್ರಪತಿ ಮುರ್ಮು, ದೇಶದ ರಕ್ಷಣೆಯಲ್ಲಿ ವಾಯುಪಡೆಯ ಯೋಧರ ಧೈರ್ಯ, ನಿಖರತೆ ಮತ್ತು ಕಾರ್ಯಾಚರಣೆಯ ಸನ್ನದ್ಧತೆಯನ್ನು ಆಪರೇಷನ್ ಸಿಂಧೂರ್ ಪ್ರದರ್ಶಿಸಿದೆ ಎಂದಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ವಾಯುಪಡೆ ದಿನದಂದು ಎಲ್ಲಾ ವಾಯುಪಡೆ ಯೋಧರು, ಮಾಜಿ ಯೋಧರು ಮತ್ತು ಅವರ ಕುಟುಂಬದವರಿಗೆ ಶುಭಾಶಯಗಳು. ಭಾರತೀಯ ವಾಯುಪಡೆಯು ವೃತ್ತಿಪರತೆ, ಶಿಸ್ತು ಮತ್ತು ಸನ್ನದ್ಧತೆಯ ಉನ್ನತ ಗುಣಮಟ್ಟವನ್ನು ಎತ್ತಿಹಿಡಿಯುವ ಮೂಲಕ ರಾಷ್ಟ್ರಕ್ಕೆ ಮಾದರಿಯಾದ ಸೇವೆಯನ್ನು ಸಲ್ಲಿಸಿದೆ ಎಂದು ತಿಳಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಕೂಡ ವಾಯುಪಡೆ ಸಿಬ್ಬಂದಿಗೆ ಶುಭಾಶಯ ಕೋರಿದ್ದು, ವಾಯುಪಡೆ ದಿನದಂದು, ನಮ್ಮ ವಾಯು ಪ್ರದೇಶವನ್ನು ರಕ್ಷಿಸುವ ಅವರ ಧೈರ್ಯ ಮತ್ತು ಬದ್ಧತೆಗೆ ನಾವು ಗೌರವ ಸಲ್ಲಿಸುತ್ತೇವೆ ಎಂದು ಹೇಳಿದ್ದಾರೆ. ವಾಯುಪಡೆಯ ವಿಡಿಯೋ ಹಂಚಿಕೊಂಡಿರುವ ಅವರು, ವಾಯುಪಡೆ ಸಿಬ್ಬಂದಿ ಸವಾಲುಗಳನ್ನು ಎದುರಿಸಿ, ರಾಷ್ಟ್ರೀಯ ಭದ್ರತೆಯನ್ನು ಖಾತ್ರಿಪಡಿಸುವಲ್ಲಿನ ಅವರ ಪಾತ್ರವನ್ನು ಶ್ಲಾಘಿಸಿದ್ದಾರೆ. ಆಕಾಶದಲ್ಲಿ ತನ್ನ ಶಕ್ತಿಯನ್ನು ಪ್ರದರ್ಶಿಸುವ ಮೂಲಕ, ಐಎಎಫ್ ಪ್ರತಿಯೊಬ್ಬ ನಾಗರಿಕನ ಗಮನವನ್ನು ಸೆಳೆದಿದೆ ಎಂದು ತಿಳಿಸಿದ್ದಾರೆ.



ಬ್ರಿಟಿಷ್ ಆಳ್ವಿಕೆಯ ಅವಧಿಯಲ್ಲಿ 1932ರಲ್ಲಿ ಭಾರತೀಯ ವಾಯುಪಡೆಯು ಸಹಾಯಕ ವಾಯುಪಡೆಯಾಗಿ ಸ್ಥಾಪನೆಯಾದ ದಿನವನ್ನು ಸ್ಮರಿಸಲು, ಪ್ರತಿ ವರ್ಷ ಅಕ್ಟೋಬರ್ 8 ರಂದು ಭಾರತೀಯ ವಾಯುಪಡೆ ದಿನವನ್ನು ದೇಶಾದ್ಯಂತ ಆಚರಿಸಲಾಗುತ್ತದೆ.

### ಶುಭಾಶಯ ಕೋರಿದ ಅಮಿತ್ ಶಾ

ಕೇಂದ್ರ ಗೃಹ ಸಚಿವ ಅಮಿತ್ ಶಾ ಕೂಡ ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಶುಭಾಶಯ ಕೋರಿದ್ದು, ಶೌರ್ಯ, ನಿಖರ ಕಾರ್ಯಕ್ಷಮತೆ ಮತ್ತು ಪ್ರಬಲ ದಾಳಿಯ ಸಾಮರ್ಥ್ಯದಂತಹ ಸಾಹಸಗಾಥೆಗಳನ್ನು ಹೊಂದಿರುವ ನೈಜ ವೀರರ ಪಡೆಯಿದು. ಇವರ ಈ ಶೌರ್ಯಕ್ಕೆ ಭೂಮಿಯಷ್ಟೇ ಅಲ್ಲದೆ, ದೂರದ ಬಾಹ್ಯಾಕಾಶದಲ್ಲಿರುವ ಉಪಗ್ರಹಗಳೂ ಸಾಕ್ಷಿಯಾಗಿವೆ. ಇವರ ದೇಶಭಕ್ತಿ ಮತ್ತು ವೃತ್ತಿಪರತೆಯು ಮುಂದಿನ ಪೀಳಿಗೆಗೆ ಸ್ಫೂರ್ತಿಯನ್ನು ನೀಡುತ್ತಲೇ ಇರುತ್ತದೆ. ದೇಶಕ್ಕಾಗಿ ತಮ್ಮ ಪ್ರಾಣವನ್ನೇ ಅರ್ಪಿಸಿದ ಆ ಹುತಾತ್ಮರಿಗೆ ನಾನು ನಮಸ್ಕರಿಸುತ್ತೇನೆ ಎಂದಿದ್ದಾರೆ.

## ಮಿನಿ ನ್ಯೂಸ್

### ನಟ ದರ್ಶನ್‌ಗೆ ಸುಪ್ರೀಂ ಕೋರ್ಟ್ ಶಾಕ್

**ನವದೆಹಲಿ:** ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಸಿಲುಕಿ ಆರೋಪಿಯಾಗಿ ಪರಪ್ಪನ ಅಗ್ರಹಾರ ಜೈಲಿನಲ್ಲಿರುವ ನಟ ದರ್ಶನ್‌ಗೆ ಸುಪ್ರೀಂ ಕೋರ್ಟ್ ನಲ್ಲಿ ಮತ್ತೆ ಹಿನ್ನಡೆಯಾಗಿದೆ. ಪ್ರಕರಣದ 14ನೇ ಆರೋಪಿ ಪ್ರದೂಷ್‌ನನ್ನು ಮಾಫಿ ಸಾಕ್ಷಿಯಾಗಿ ಪರಿಗಣಿಸಿರುವುದನ್ನು ಪ್ರಶ್ನಿಸಿ ನಟ ದರ್ಶನ್ ಪತ್ನಿ ವಿಜಯಲಕ್ಷ್ಮಿ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯ ಇಂದು ವಜಾಗೊಳಿಸಿದೆ. ಹೈಕೋರ್ಟ್ ನೀಡಿದ ಆದೇಶವನ್ನು ಪ್ರಶ್ನಿಸಿ ವಿಜಯಲಕ್ಷ್ಮೀ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು. ನ್ಯಾ. ಜೆ.ಬಿ ಪಾರ್ದಿವಾಲ ನೇತೃತ್ವದ ದ್ವಿ ಸದಸ್ಯ ಪೀಠ ವಿಚಾರಣೆ ನಡೆಸಿ ಮಾಫಿ ಸಾಕ್ಷಿಗೆ ಸಂಬಂಧಿಸಿದಂತೆ ಸೆಷನ್ಸ್ ನ್ಯಾಯಲಯದ ಆದೇಶ ಎತ್ತಿ ಹಿಡಿದ ಹೈಕೋರ್ಟ್ ನಿಲುವು ಸರಿಯಾಗಿದೆ ಎಂದು ಸುಪ್ರೀಂಕೋರ್ಟ್ ಹೇಳಿದೆ. ವಿಜಯಲಕ್ಷ್ಮಿ ಪರ ಹಿರಿಯ ವಕೀಲ ನಾಗಮುತ್ತು ವಾದ ಮಂಡಿಸಿದರು, ಮಾಫಿ ಸಾಕ್ಷಿಯನ್ನು ಪರಿಗಣಿಸುವ ಅಧಿಕಾರ ಪ್ರಿನ್ಸಿಪಲ್ ಕೋರ್ಟ್‌ಗೆ ಮಾತ್ರ ಇದೆ ಎಂದು ವಾದಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಪೀಠ, ಮಾಫಿ ಸಾಕ್ಷಿಯನ್ನು ಪರಿಗಣಿಸಲು ಸಾಧ್ಯವಿಲ್ಲ ಎಂಬ ವಾದವನ್ನು ಒಪ್ಪಲು ಸಾಧ್ಯವಿಲ್ಲ. ಪ್ರಕರಣದಲ್ಲಿ ಬೇರೆ ಯಾವುದೇ ಕಾನೂನು ಅಂಶಗಳಿದ್ದರೆ ಆ ಕುರಿತು ವಾದ ಮಂಡಿಸುವಂತೆ ಪೀಠ ಸೂಚಿಸಿತು. ಟ್ರಯಲ್ ಕೋರ್ಟ್‌ಗೆ ಅಧಿಕಾರ ಇಲ್ಲ ಎಂಬ ವಿಚಾರವನ್ನೇ ಮುಂ ದಿಟ್ಟುಕೊಂಡು ವಾದಿಸುವ ಬದಲು, ಅದಕ್ಕಿಂತ ಪರಿಣಾಮಕಾರಿ ಕಾನೂನು ಅಂಶಗಳಿದ್ದರೆ ಅವುಗಳನ್ನು ಮಂಡಿಸುವಂತೆ ನ್ಯಾಯಮೂರ್ತಿ ಪರ್ದಿವಾಲಾ ಸೂಚಿಸಿದರು.



### ಭಾರತೀಯನ ಮದುವೆಯಾದಾಕ್ಷಣ Indian ಆಗಲ್ಲ: ಹೈಕೋರ್ಟ್

**ಕೋಲ್ಕತ್ತಾ:** ವಂಚನೆಯ ಮೂಲಕ ಭಾರತೀಯ ದಾಖಲೆಗಳನ್ನು ಪಡೆದಿರುವ ಆರೋಪ ಎದುರಿಸುತ್ತಿರುವ ಭಾರತೀಯ ಪ್ರಜೆಯ ಬಾಂಗ್ಲಾದೇಶಿ ಪತ್ನಿಗೆ ಭಾರತ ಪ್ರವೇಶ ನಿರಾಕರಿಸಿರುವ ವಲಸೆ ಅಧಿಕಾರಿಗಳ ಕ್ರಮ ಸರಿಯಾಗಿದೆ ಎಂದು ಕೋಲ್ಕತ್ತಾ ಹೈಕೋರ್ಟ್ ಬುಧವಾರ ಹೇಳಿದೆ. ತಮ್ಮ ಬಾಂಗ್ಲಾದೇಶಿ ಪತ್ನಿ ಹಾಗೂ ಅಪ್ರಾಪ್ತ ಪುತ್ರನಿಗೆ ಭಾರತ ಪ್ರವೇಶಕ್ಕೆ ಅವಕಾಶ ನೀಡುವಂತೆ ಕೋರಿ ಭಾರತೀಯ ಪ್ರಜೆಯೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ರಾವ್ ವಜಾಗೊಳಿಸಿದ್ದಾರೆ. ಅರ್ಜಿದಾರರು ಸೆಪ್ಟೆಂಬರ್ 5ರಂದು ತಮ್ಮ ಪತ್ನಿ ಹಾಗೂ ಪುತ್ರನಿಗೆ ಭಾರತ ಪ್ರವೇಶಿಸಲು ಅನುಮತಿ ನೀಡುವಂತೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರು. ಆದರೆ, ವಲಸೆ ಅಧಿಕಾರಿಗಳು ಪತ್ನಿಯ ಭಾರತ ಪ್ರವೇಶವನ್ನು ನಿರಾಕರಿಸಿರುವುದು ಸರಿಯಾಗಿದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ವಿವಾಹದ ಬಳಿಕ ಎಕ್ಸ್–1 ವೀಸಾದಲ್ಲಿ ಭಾರತಕ್ಕೆ ಭೇಟಿ. ಅರ್ಜಿದಾರರ ಪತ್ನಿ ಬಾಂಗ್ಲಾದೇಶದ ಪ್ರಜೆಯಾಗಿದ್ದು, ವಿವಾಹದ ಬಳಿಕ ಭಾರತೀಯ ಪ್ರಜೆಯ ಪತ್ನಿಯಾಗಿ ಬಹು–ಪ್ರವೇಶದ ಎಕ್ಸ್–1 ವೀಸಾ ಮೂಲಕ ಭಾರತಕ್ಕೆ ಬರುತ್ತಿದ್ದರು. ಅವರಿಗೆ ಕೊನೆಯದಾಗಿ 2025ರ ಸೆಪ್ಟೆಂಬರ್ 25ರಂದು ವೀಸಾ ನೀಡಲಾಗಿತ್ತು. ಅದು 2026ರ ಸೆಪ್ಟೆಂಬರ್ 24ರವರೆಗೆ ಮಾನ್ಯವಾಗಿತ್ತು. 2026ರ ಏಪ್ರಿಲ್‌ನಲ್ಲಿ ಅವರು ಬಾಂಗ್ಲಾದೇಶಕ್ಕೆ ತೆರಳಿದ್ದರು. ಬಳಿಕ ಭಾರತಕ್ಕೆ ವಾಪಸಾಗುವ ವೇಳೆ ಆಗಸ್ಟ್ 23ರಂದು ವಲಸೆ ಸಂಬಂಧಿತ ಕಾರಣಗಳಿಂದ ಅವರಿಗೆ ಪ್ರವೇಶ ನಿರಾಕರಿಸಲಾಗಿತ್ತು. 'ಭಾರತ–ಬಾಂಗ್ಲಾದೇಶದಲ್ಲಿ ಆಗಾಗ್ಗೆ ವಾಸ' ಅರ್ಜಿದಾರರ ಪರ ವಕೀಲರು, ಮಹಿಳೆ ಕೆಲವೊಮ್ಮೆ ಭಾರತದಲ್ಲೂ, ಕೆಲವೊಮ್ಮೆ ಬಾಂಗ್ಲಾದೇಶದಲ್ಲೂ ವಾಸಿಸುತ್ತಾರೆ ಎಂದು ನ್ಯಾಯಾಲಯಕ್ಕೆ ತಿಳಿಸಿದರು. ಯಾವುದೇ ಕಾರಣ ನೀಡದೆ ವಲಸೆ ಅಧಿಕಾರಿಗಳು ತಮ್ಮ ಪತ್ನಿಗೆ ಭಾರತ ಪ್ರವೇಶ ನಿರಾಕರಿಸಿದ್ದಾರೆ ಎಂದು ಅವರು ವಾದಿಸಿದರು. ಪತ್ನಿಯನ್ನು ಭಾರತಕ್ಕೆ ಕರೆತರಲು ಸಲ್ಲಿಸಿದ್ದ ಮನವಿಯನ್ನು ಅಧಿಕಾರಿಗಳು ಪರಿಗಣಿಸಿಲ್ಲ ಎಂದು ಆರೋಪಿಸಿ ಅರ್ಜಿ ಸಲ್ಲಿಸಲಾಗಿತ್ತು.

### ಮೋದಿ – ಟ್ರಂಪ್ ಸಂಬಂಧ ಶ್ಲಾಘಿಸಿದ ಶ್ವೇತಭವನ

**ವಾಷಿಂಗ್ಟನ್/ ನವದೆಹಲಿ:** ಅಮೆರಿಕದ ಶಕ್ತಿಯುತ ಮಿತ್ರರಾಷ್ಟ್ರಗಳಲ್ಲಿ ಭಾರತವೂ ಒಂದಾಗಿದೆ ಎಂದು ಅಮೆರಿಕದ ಶ್ವೇತಭವನ ತಿಳಿಸಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ನಡುವಿನ ನಿಕಟ ಬಾಂಧವ್ಯವು ಉಭಯ ದೇಶಗಳ ಸಂಬಂಧವನ್ನು ಇನ್ನಷ್ಟು ಬಲಪಡಿಸಿದೆ ಎಂದು ಶ್ವೇತಭವನದ ವಕ್ತಾರೆ ಅನ್ನಾ ಕೆಲ್ಲಿ ತಿಳಿಸಿದ್ದಾರೆ. ಸಾರ್ವಜನಿಕ ಸೇವೆಯಲ್ಲಿ ಪ್ರಧಾನಿ ಮೋದಿ ಅವರ 25 ವರ್ಷಗಳ ಅವಧಿ ಹಾಗೂ ಅಮೆರಿಕದ ಅಧ್ಯಕ್ಷರೊಂದಿಗಿನ ಅವರ ಸಂಬಂಧದ ಕುರಿತು ಶ್ವೇತಭವನದ ಅಭಿಪ್ರಾಯ ಕುರಿತ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆಯಾಗಿ ಈ ಹೇಳಿಕೆಯನ್ನು ಶ್ವೇತಭವನ ನೀಡಿದೆ. 2001ರ ಅಕ್ಟೋಬರ್ 7ರಂದು ಗುಜರಾತ್‌ನ ಮುಖ್ಯಮಂತ್ರಿಯಾಗಿ ಮೊದಲ ಬಾರಿಗೆ ಅಧಿಕಾರ ವಹಿಸಿಕೊಂಡಾಗಿನಿಂದ ಮೋದಿ ರಾಜ್ಯದಲ್ಲಿ ಮುಖ್ಯಸ್ಥರಾಗಿ ಸೇವೆ ಪೂರೈಸಿದ್ದರು. 2014ರ ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ ಭರ್ಜರಿ ವಿಜಯ ಸಾಧಿಸಿ ದೇಶದ ಪ್ರಧಾನಿಯಾದರು. ವಾಣಿಜ್ಯ ಮತ್ತು ಇತರೆ ನೀತಿ ವಿಷಯಗಳಿಗೆ ಸಂಬಂಧಿಸಿದ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳುವ ನಿಟ್ಟಿನಲ್ಲಿ ಭಾರತ ಮತ್ತು ಅಮೆರಿಕ ಕಾರ್ಯನಿರ್ವಹಿಸುತ್ತಿರುವ ನಡುವೆ ಶ್ವೇತಭವನದ ಹೇಳಿಕೆ ಹೊರ ಬಿದ್ದಿದ್ದು, ಇದು ಉಭಯ ನಾಯಕರ ನಡುವಿನ ವೈಯಕ್ತಿಕ ಬಾಂಧವ್ಯವನ್ನು ಎತ್ತಿ ತೋರಿಸಿದೆ. ಆದಾಗ್ಯೂ, ಇದರಲ್ಲಿ ಯಾವುದೇ ಹೊಸ ದ್ವಿಪಕ್ಷೀಯ ಉಪಕ್ರಮ ಪ್ರಕಟಿಸಲಾಗಿಲ್ಲ. ಭಾರತ ಮತ್ತು ಅಮೆರಿಕದ ನಡುವೆ ಪರಸ್ಪರ ರಕ್ಷಣೆಗೆ ಸಂಬಂಧಿಸಿದ ಯಾವುದೇ ಔಪಚಾರಿಕ ಒಪ್ಪಂದವಿಲ್ಲದಿದ್ದರೂ, ಸತತ ಆಡಳಿತಗಳ ಅವಧಿಯಲ್ಲಿ ರಕ್ಷಣೆ, ತಂತ್ರಜ್ಞಾನ, ವ್ಯಾಪಾರ ಮತ್ತು ಕಾರ್ಯತಂತ್ರದ ವಿಷಯಗಳಲ್ಲಿ ಎರಡೂ ದೇಶಗಳು ವ್ಯಾಪಕ ಸಹಕಾರ ಹೊಂದಿದೆ.

### ಕರ್ನಾಟಕ ಸೇರಿ ಹಲವು ರಾಜ್ಯಗಳಲ್ಲಿ ಈರುಳ್ಳಿ ದರ ಕುಸಿತ ಸಾಧ್ಯತೆ

**ನವದೆಹಲಿ:** ಗಗನಕ್ಕೇರಿದ್ದ ಈರುಳ್ಳಿ ದರ ಕೊನೆಗೂ ಇಳಿಕೆಯಾಗುವ ಲಕ್ಷಣಗಳು ಕಾಣಿಸುತ್ತಿದ್ದು, ಖಾರಿಫ್ ಬೆಳೆ ಕಟಾವು ಹಂತಕ್ಕೆ ಬಂದಿರುವುದು ಗ್ರಾಹಕರಿಗೆ ತುಸು ನೆಮ್ಮದಿ ತಂದಿದೆ ಎನ್ನಲಾಗಿದೆ. ಹೌದು.. ಖಾರಿಫ್ ಹಂಗಾಮಿನ ಈರುಳ್ಳಿ ಬೆಳೆ ಕಟಾವಿಗೆ ಬಂದಿದ್ದು, ಈಗಾಗಲೇ ಈರುಳ್ಳಿ ದಾಸ್ತಾನು ಮಾರುಕಟ್ಟೆಗೆ ಬರಲು ಆರಂಭಿಸಿದೆ. ಈ ಬೆಳವಣಿಗೆ ಈರುಳ್ಳಿ ದರ ಇಳಿಕೆಯಾಗುವ ಸಾಧ್ಯತೆ ಎಂದು ಹೇಳಲಾಗುತ್ತಿದೆ. ಈ ಬಗ್ಗೆ ಕೇಂದ್ರ ಸರ್ಕಾರ ಮಾಹಿತಿ ನೀಡಿದ್ದು, ಖಾರಿಫ್ ಹಂಗಾಮಿನ ಈರುಳ್ಳಿ ಮಾರುಕಟ್ಟೆಗೆ ಬರಲು ಆರಂಭಿಸಿರುವುದರಿಂದ ಚಿಲ್ಲರೆ ಈರುಳ್ಳಿ ಬೆಲೆ ಮತ್ತಷ್ಟು ಇಳಿಕೆಯಾಗುವ ನಿರೀಕ್ಷೆಯಿದೆ ಎಂದು ತಿಳಿಸಿದೆ. ಖಾರಿಫ್ ಬೆಳೆ ಪೂರೈಕೆ ಹೆಚ್ಚಾಗುತ್ತಿರುವುದರ ಜತೆಗೆ ರಬಿ ಹಂಗಾಮಿನಲ್ಲಿ ಸಂಗ್ರಹಿಸಿರುವ ಈರುಳ್ಳಿ ದಾಸ್ತಾನು ಕೂಡ ಮಾರುಕಟ್ಟೆಯ ಬೇಡಿಕೆಯನ್ನು ಪೂರೈಸುತ್ತಿದೆ ಎಂದು ಸರ್ಕಾರ ಹೇಳಿದೆ. ಈರುಳ್ಳಿಯ ಲಭ್ಯತೆ ಹಾಗೂ ಬೆಲೆಗಳ ಮೇಲೆ ಕೇಂದ್ರ ಸರ್ಕಾರ ನಿರಂತರ ನಿಗಾ ವಹಿಸಿದೆ ಎಂದು ಆಹಾರ ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ. ಕರ್ನಾಟಕ, ಆಂಧ್ರಪ್ರದೇಶ ಹಾಗೂ ರಾಜಸ್ಥಾನ ಸೇರಿದಂತೆ ಪ್ರಮುಖ ಈರುಳ್ಳಿ ಉತ್ಪಾದಕ ರಾಜ್ಯಗಳಿಂದ ತಾಜಾ ಖಾರಿಫ್ ಈರುಳ್ಳಿ ಮಾರುಕಟ್ಟೆಗೆ ಬರಲು ಆರಂಭಿಸಿದೆ. ಮತ್ತೊಂದೆಡೆ ಸಂಗ್ರಹಿಸಿಟ್ಟಿರುವ ರಬಿ ಹಂಗಾಮಿನ ದಾಸ್ತಾನುಗಳಿಂದಲೂ ಮಾರುಕಟ್ಟೆಯ ಬೇಡಿಕೆ ಪೂರೈಸಲಾಗುತ್ತಿದೆ ಎಂದು ಸಚಿವಾಲಯ ತಿಳಿಸಿದೆ. ಸಾಮಾನ್ಯ ಜನರಿಗೆ ಬೆಲೆ ಏರಿಕೆಯ ಹೊರೆ ತಗ್ಗಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ತನ್ನ ಬಫರ್ ದಾಸ್ತಾನಿನಿಂದ ಈರುಳ್ಳಿಯನ್ನು ರಿಯಾಯಿತಿ ದರದಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಿದೆ. ಮುಂಬರುವ ದಿನಗಳಲ್ಲಿ ಖಾರಿಫ್ ಈರುಳ್ಳಿಯ ಪೂರೈಕೆ ಮತ್ತಷ್ಟು ಹೆಚ್ಚಾಗುವ ನಿರೀಕ್ಷೆಯಿದೆ. ಹಬ್ಬದ ಋತುವಿನ ಹಿನ್ನೆಲೆಯಲ್ಲಿ ಸರ್ಕಾರದ ವಿತರಣಾ ಪ್ರಯತ್ನಗಳನ್ನೂ ಬಲಪಡಿಸಲಾಗುತ್ತಿದೆ. ಹೀಗಾಗಿ ಮಾರುಕಟ್ಟೆಯಲ್ಲಿ ಈರುಳ್ಳಿ ಪೂರೈಕೆ ಸಮರ್ಪಕವಾಗಿಯೇ ಮುಂದುವರಿಯಲಿದ್ದು, ಬೆಲೆಗಳು ಮತ್ತಷ್ಟು ಇಳಿಕೆಯಾಗುವ ಸಾಧ್ಯತೆಯಿದೆ ಎಂದು ಆಹಾರ ಸಚಿವಾಲಯ ತಿಳಿಸಿದೆ.

# ನಾನಾ ಪಾಟೇಕರ್ ಸ್ಮರಣೆ

ಹಿರಿಯ ನಟ ನಾನಾ ಪಾಟೇಕರ್ ತಮ್ಮ 75ನೇ ವಯಸ್ಸಿನಲ್ಲಿ ನಿಧನರಾಗಿದ್ದು, ಭಾರತೀಯ ಚಿತ್ರರಂಗದ ಅತ್ಯಂತ ವಿಶಿಷ್ಟ ನಟನಾ ಪಯಣವೊಂದು ಅಂತ್ಯಗೊಂಡಿದೆ. ಗೋವಾದಲ್ಲಿ ಹೃದಯಾಘಾತದಿಂದ ಅವರು ನಿಧನರಾದರು ಎಂದು ಪುತ್ರ ಮಲ್ಹಾರ್ ಪಾಟೇಕರ್ ಖಚಿತಪಡಿಸಿದ್ದಾರೆ.

ಗುರುವಾರ (ಅಕ್ಟೋಬರ್ 8ರ) ಮುಂಜಾನೆ 5:20ರ ಸುಮಾರಿಗೆ ಗೋವಾದ ಡೋನಾ ಪೌಲಾದಲ್ಲಿರುವ ತಮ್ಮ ನಿವಾಸದಲ್ಲಿ ತೀವ್ರ ಹೃದಯಾಘಾತಕ್ಕೊಳಗಾಗಿ ನಿಧನರಾ ದರು. ಮನೆಯಲ್ಲಿ ಅಸ್ವಸ್ಥರಾಗಿ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಅವರನ್ನು ಕೂಡಲೇ ಅಲ್ಲಿನ ಮಣಿಪಾಲ್ ಆಸ್ಪತ್ರೆಗೆ ಕರೆದೊ ಯ್ಯಲಾಯಿತು. ಅಂತಿಮವಾಗಿ ಅವರು ಮೃತಪಟ್ಟಿ ದ್ದಾರೆಂದು ಆಸ್ಪತ್ರೆ ಘೋಷಿಸಿತು.



ಹಲವು ತಲೆಮಾರುಗಳವರೆಗೆ ನಾನಾ ಪಾಟೇಕರ್ ಚಿರಪರಿಚಿತ. ತಮ್ಮ ಸಿನಿಮಾ ಮತ್ತು ಸಮಾಜ ಸೇವೆಯ ಮೂಲಕ ಅವರು ಜನಮಾನಸದಲ್ಲಿ ನೆನಪಾಗಿ ಉಳಿದಿದ್ದಾರೆ. ಅವರ ಧ್ವನಿ, ಹಾವಭಾವಗಳು ಮತ್ತು ಎದ್ದು ಕಾಣುವ ತೀವ್ರತೆಯು ಕ್ಷಣಮಾತ್ರದಲ್ಲಿಯೇ ದೃಶ್ಯವೊಂದರ ವಾತಾವರಣವನ್ನೇ ಬದಲಾಯಿಸಬಲ್ಲ ಸಾಮರ್ಥ್ಯವನ್ನು ಹೊಂದಿದ್ದವು. ಕೇವಲ ಕೆಲವೇ ಸಂಭಾಷಣೆಗಳ ಮೂಲಕ ದೃಶ್ಯದ ಮೇಲೆ ಪ್ರಭಾವ ಬೀರಬಲ್ಲ ಹಾಗೂ ಪೋಷಕ ಪಾತ್ರವನ್ನೂ ಸಹ ಮರೆಯಲಾ ಗದಂತಾಗಿಸುವ ಶಕ್ತಿ ಅವರಲ್ಲಿತ್ತು. ಅಂದರೆ ಅಭಿನಯ ಅತ್ಯುನ್ನತ ಮಟ್ಟದಲ್ಲಿತ್ತು. ಇನ್ಮುಂದೆ ಅವರು ನೆನಪು ಮಾತ್ರ!

**3 ಬಾರಿ ರಾಷ್ಟ್ರೀಯ ಪ್ರಶಸ್ತಿ ವಿಜೇತ, ಕಾರ್ಗಿಲ್ ಸ್ವಯಂಸೇವಕ ಮತ್ತು ಸಮಾಜ ಸೇವಕ**

**ಬಹುಮುಖ ಪ್ರತಿಭೆ, ಅಮೋಘ ಅಭಿನಯದಿಂದ ಚಿತ್ರರಂಗದಲ್ಲಿ ಮರೆಯಲಾಗದ ಛಾಪು:** 1951ರ ಜನವರಿ 1ರಂದು ಜನಿಸಿದ ನಾನಾ ಪಾಟೇಕರ್ ಅವರ ಮೂಲ ಹೆಸರು ವಿಶ್ವನಾಥ್ ಪಾಟೇಕರ್. ತಮ್ಮ ವಿಶಿಷ್ಟ ಅಭಿನಯದಿಂದ ಹಿಂದಿ ಮತ್ತು ಮರಾಠಿ ಚಲನಚಿತ್ರರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿದರು. ಉಗ್ರ ಸ್ವಭಾವದ ನಾಯಕ, ಭಯಾನಕ ಖಳನಾಯಕ, ಪೊಲೀಸ್ ಅಧಿಕಾರಿ, ಸಂಕಷ್ಟದಲ್ಲಿರುವ ವ್ಯಕ್ತಿ ಹಾಗೂ ಹಾಸ್ಯ – ಹೀಗೆ ವೈವಿಧ್ಯಮಯ ಪಾತ್ರಗಳನ್ನು ನಿರ್ವಹಿಸುವಲ್ಲಿ ಅವರು ಸಮಾನ ಪ್ರಾವೀಣ್ಯತೆ ಹೊಂದಿದ್ದರು. ತಮ್ಮ ಸಮಕಾಲೀನ ಅನೇಕ ತಾರೆಗಳಿಗಿಂತ ಭಿನ್ನವಾಗಿದ್ದರು. ಎಂದಿಗೂ ಸಾಂಪ್ರದಾಯಿಕ ಗ್ಲ್ಯಾಮರ್ ಅಥವಾ ಆಕರ್ಷಣೆಯನ್ನು ಅವಲಂಬಿಸಲಿಲ್ಲ. ಅವರ ಅಭಿನಯವು ಅವರ ಧ್ವನಿ, ಬಾಡಿ ಲ್ಯಾಂಗ್ವೇಜ್ ಮತ್ತು ಪಾತ್ರಗಳಿಗೆ ಜೀವ ತುಂಬುವ ಸಾಮರ್ಥ್ಯದ ಮೇಲೆ ರೂಪುಗೊಂಡಿತ್ತು.

**ಪ್ರತಿಷ್ಠಿತ ಪ್ರಶಸ್ತಿಗಳು:** ಅವರು ನಟನೆಗೆ 3 ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳು, ಮಹಾರಾಷ್ಟ್ರ ರಾಜ್ಯ ಚಲನಚಿತ್ರ ಪ್ರಶಸ್ತಿಗಳು ಮತ್ತು ಇತರೆ ಹಲವಾರು ಗೌರವಗಳ ಮೂಲಕ ಮನ್ನಣೆ ಪಡೆದರು. ಚಲನಚಿತ್ರ ಮತ್ತು ಕಲೆಗೆ ನೀಡಿದ ಕೊಡುಗೆಗಾಗಿ ಅವರಿಗೆ 2013ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನೂ ನೀಡಿ ಗೌರವಿಸಲಾಯಿತು.

**ಪರಿಂದಾದಿಂದ ಕ್ರಾಂತಿವೀರ್‌ವರೆಗೆ ಆಕರ್ಷಕ ಅಭಿನಯ:** 1978ರಲ್ಲಿ 'ಗಮನ್' ಚಿತ್ರದ ಮೂಲಕ ಹಿಂದಿ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದರು. ನಂತರದ ಚಿತ್ರಗಳು ಅವರನ್ನು ತಮ್ಮ ತಲೆಮಾರಿನ ಅತ್ಯಂತ ಗೌರವಾನ್ವಿತ ನಟರಲ್ಲಿ ಒಬ್ಬರನ್ನಾಗಿಸಿತು. ಪರಿಂದಾ ಚಿತ್ರದಲ್ಲಿನ ಅವರ ಅಭಿನಯಕ್ಕಾಗಿ ಅವರಿಗೆ ಅತ್ಯುತ್ತಮ ಪೋಷಕ ನಟ ವಿಭಾಗದಲ್ಲಿ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಲಭಿಸಿತು. ನಂತರ ಅವರು ಅಂಗಾರ್, ತಿರಂಗಾ, ಕ್ರಾಂತಿ ವೀರ್, ಅಗ್ನಿ ಸಾಕ್ಷಿ, ಖಾಮೋಷಿ: ದಿ ಮ್ಯೂಸಿಕಲ್, ಯಶ್ವಂತ್', ಅಬ್ ತಕ್ ಛಪ್ಪನ್ ಮತ್ತು 'ಅಪಹರಣ್ ಅನೇಕ ಚಿತ್ರಗಳಲ್ಲಿ ಅಭಿನಯಿಸಿದರು.

## ಕ್ರಾಂತಿವೀರ್ ಚಿತ್ರವು ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ತಂದುಕೊಟ್ಟಿತು

ಕ್ರಾಂತಿವೀರ್ ಚಿತ್ರವು ಅವರಿಗೆ ಅತ್ಯುತ್ತಮ ನಟನಾಗಿ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯನ್ನು ತಂದುಕೊಟ್ಟಿತು ಮತ್ತು ಭಾವನಾತ್ಮಕವಾಗಿ ತೀವ್ರತೆಯ ಅಗತ್ಯವಿರುವ ಪಾತ್ರಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ನಿರ್ವಹಿಸಬಲ್ಲ ನಟ ಎಂಬ ಅವರ ಖ್ಯಾತಿಯನ್ನು ಮತ್ತಷ್ಟು ಗಟ್ಟಿಗೊಳಿಸಿತು. ಆದರೆ ನಾನಾ ಅವರ ವೃತ್ತಿಜೀವನವು ಕೇವಲ ಗಂಭೀರ ಹಾಗೂ ಭಾವನಾತ್ಮಕ ಪಾತ್ರಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಅವರ ವೃತ್ತಿಜೀವನದ ನಂತರದ ಹಂತದಲ್ಲಿ ಪ್ರೇಕ್ಷಕರ ನಡುವೆ ಅಪಾರ ಜನಪ್ರಿಯತೆ ಗಳಿಸಿದ ಮತ್ತೊಂದು ಆಯಾಮವೂ ಅವರಲ್ಲಿತ್ತು. ವೆಲ್ಕಮ್ ಚಿತ್ರದಲ್ಲಿನ ಉದಯ್ ಶೆಟ್ಟಿ ಪಾತ್ರದ ಮೂಲಕ, ಅವರು ಹಾಸ್ಯಪ್ರಜ್ಞೆಯನ್ನೂ ಅದ್ಭುತವಾಗಿ ಪ್ರದರ್ಶಿಸಿ ಅನೇಕ ವೀಕ್ಷಕರನ್ನು ಅಚ್ಚರಿಗೊಳಿಸಿದರು. ಅವರ ಈ ಅಭಿನಯವು ಆ ಚಲನಚಿತ್ರ ಸರಣಿಯ ಅತ್ಯಂತ ಸ್ಮರಣೀಯ ಅಂಶಗಳಲ್ಲಿ ಒಂದಾಗಿ ಉಳಿಯಿತು. ಅದ್ಭುತ ಡೈಲಾಗ್ಸ್ ಮತ್ತು ಗಂಭೀರ ಪಾತ್ರಗಳಿಗೆ ಹೆಸರುವಾಸಿಯಾಗಿದ್ದ ನಟ, ಪೂರ್ಣ ಪ್ರಮಾಣದ ಹಾಸ್ಯಮಯ ಚಿತ್ರದಲ್ಲೂ ಅಷ್ಟೇ ಪರಿಣಾಮಕಾರಿಯಾಗಿ ಅಭಿನಯಿಸಬಲ್ಲರು ಎಂಬುದನ್ನು ಇದು ತೋರಿಸಿಕೊಟ್ಟಿತು. ಅವರ ಇತರೆ ಗಮನಾರ್ಹ ಚಲನಚಿತ್ರಗಳಲ್ಲಿ 'ರಾಜು ಬನ್ ಗಯಾ ಜಂಟಲ್‌ಮ್ಯಾನ್, ವಜೂದ್, ಹೂ ತು ತು, ಗ್ಯಾಂಗ್, ದೀವಾನಗಿ, ಭೂತ್, ವೆಲ್ಕಮ್ ಬ್ಯಾಕ್, ನಟ್‌ಸಾಮ್ರಾಟ್, ರಾಜನೀತಿ ಮತ್ತು ದಿ ವ್ಯಾಕ್ಸಿನ್ ವಾರ್ ಒಳಗೊಂಡಂತೆ ಮುಂತಾದವು ಸೇರಿವೆ.

# ರಾಜ ದಶರಥನಾಗಿ ರಾಮಾಯಣಕ್ಕೆ ಮರಳಿದ ಅರುಣ್ ಗೋವಿಲ್

ಟಿವಿಯಲ್ಲಿ ಭಗವಾನ್ ಶ್ರೀ ರಾಮನಾಗಿ ಸ್ಮರಣೀಯ ಅಭಿನಯ ನೀಡಿದ್ದ ನಟ ಅರುಣ್ ಗೋವಿಲ್ ಅವರೀಗ ಮಹತ್ವಾಕಾಂಕ್ಷೆಯ ರಾಮಾಯಣದಲ್ಲಿ ರಾಜ ದಶರಥ ಪಾತ್ರದ ಮೂಲಕ ಮಹಾಕಾವ್ಯಕ್ಕೆ ಮರಳುತ್ತಿದ್ದು, ಚಿತ್ರತಂಡ ಇಂದು ಅವರ ಹೊಸ ಪೋಸ್ಟರ್ ಅನಾವರಣಗೊಳಿಸಿದೆ.




ಹೊಸದಾಗಿ ಬಿಡುಗಡೆಯಾದ ಸೋಲೋ ಪೋಸ್ಟರ್, ಅಯೋಧ್ಯೆಯ ರಾಜ ಮತ್ತು ಶ್ರೀರಾಮನ ತಂದೆಯಾದ ದಶರಥನ ಪಾತ್ರದಲ್ಲಿ ಅರುಣ್ ಗೋವಿಲ್ ಅವರ ನೋಟವನ್ನು ಪ್ರೇಕ್ಷಕರಿಗೆ ಪರಿಚಯಿಸಿದೆ.

ರಮಾನಂದ್ ಸಾಗರ್ ಅವರ ರಾಮಾಯಣ ಧಾರಾವಾಹಿಯಲ್ಲಿ ಶ್ರೀರಾಮನ ಪಾತ್ರವನ್ನು ನಿರ್ವಹಿಸುವ ಮೂಲಕ ವ್ಯಾಪಕ ಜನಪ್ರಿಯತೆ ಪಡೆದಿರುವ ಅರುಣ್ ಗೋಲ್ ಅವರನ್ನು ಈ ಪಾತ್ರಕ್ಕೆ ಆಯ್ಕೆ ಮಾಡಿರುವುದು ವಿಶೇಷ ಗಮನ ಸೆಳೆದಿದೆ.

ಸಾಮಾಜಿಕ ಜಾಲತಾಣದಲ್ಲಿ ಪೋಸ್ಟರ್ ಹಂಚಿಕೊಂಡಿರುವ ನಿರ್ಮಾಪಕರು, "ಒಂದು ಕಾಲದಲ್ಲಿ ಅವರು ಒಂದು ಪೀಳಿಗೆಗಾಗಿ ರಾಮನ ಪಾತ್ರಕ್ಕೆ ಜೀವ ತುಂಬಿದ್ದರು. ಇದೀಗ, ಅಯೋಧ್ಯೆಯ ರಾಜನಾಗಿ ಅವರು ರಾಮಾಯಣದ ಲೋಕಕ್ಕೆ ಮರಳುತ್ತಿದ್ದಾರೆ. ರಾಜ ದಶರಥನಾಗಿ ಅರುಣ್ ಗೋವಿಲ್" ಎಂದು ಬರೆದುಕೊಂಡಿದ್ದಾರೆ.

ಈ ಪೋಸ್ಟರ್‌ನಲ್ಲಿ ಅರುಣ್ ಗೋವಿಲ್ ಅವರು ರಾಜ ದಶರಥನ ನೋಟದಲ್ಲಿ ಕಾಣಿಸಿಕೊಂಡಿದ್ದಾರೆ. ಇದು ದೀರ್ಘಕಾಲದಿಂದ ಅವರಿಗಿದ್ದ ರಾಮನ ಗುರುತಿನಿಂದ ಭಿನ್ನ ನೋಟದಲ್ಲಿ ತೋರಿಸಿದೆ.

1987ರಲ್ಲಿ ಪ್ರಸಾರ ಕಂಡ ರಮಾನಂದ್ ಸಾಗರ್ ನಿರ್ದೇಶನದ ಪ್ರಸಿದ್ಧ 'ರಾಮಾಯಣ' ಧಾರಾವಾಹಿಯಲ್ಲಿ ನಟ ಅರುಣ್ ಗೋವಿಲ್ ಭಗವಾನ್ ಶ್ರೀರಾಮನಾಗಿ, ನಟಿ ದೀಪಿಕಾ ಚಿಖ್ಲಿಯಾ ಸೀತಾಮಾತೆಯಾಗಿ ಮತ್ತು ಸುನಿಲ್ ಲಹಿರಿ ಲಕ್ಷ್ಮಣನಾಗಿ ಅಭಿನಯಿಸಿದ್ದರು. ಹನುಮನ ಪಾತ್ರದಲ್ಲಿ ದಿ.ಧಾರಾ ಸಿಂಗ್ ಮತ್ತು ರಾವಣನಾಗಿ ದಿ.ಅರವಿಂದ್ ತ್ರಿವೇದಿ ಕಾಣಿಸಿಕೊಂಡಿದ್ದು, ಎಲ್ಲರ ನಟನೆ ಪ್ರೇಕ್ಷಕರ ಮನಮುಟ್ಟಿತ್ತು. ರಾಮಾಯಣ ಭಾರತೀಯ ದೂರದರ್ಶನ ಇತಿಹಾಸದಲ್ಲೇ ಅತ್ಯಂತ ಜನಪ್ರಿಯ ಪೌರಾಣಿಕ ಕಥೆಗಳಲ್ಲಿ ಒಂದಾಗಿದ್ದು, ಇದೀಗ ಅತ್ಯಾಧುನಿಕ ತಂತ್ರಜ್ಞಾನಗಳ ಸಹಾಯದೊಂದಿಗೆ ಹಿರಿತೆರೆ ಮೇಲೆ ಮತ್ತೊಮ್ಮೆ ಬರಲು ಸಜ್ಜಾಗಿದೆ.

ನಿತೇಶ್ ತಿವಾರಿ ನಿರ್ದೇಶನದ ರಾಮಾಯಣ ಚಿತ್ರದಲ್ಲಿ ಬಾಲಿವುಡ್ ಸೂಪರ್ ಸ್ಟಾರ್ ರಣ್‌ಬೀರ್ ಕಪೂರ್ ಶ್ರೀರಾಮನಾಗಿ, ದಕ್ಷಿಣ ಚಿತ್ರರಂಗದ ಖ್ಯಾತ ನಟಿ ಸಾಯಿ ಪಲ್ಲವಿ ಸೀತೆಯಾಗಿ, ಕೆಜಿಎಫ್ ಸ್ಟಾರ್ ಯಶ್ ರಾವಣನಾಗಿ, ಸನ್ನಿ ಡಿಯೋಲ್ ಹನುಮಂತನಾಗಿ ಮತ್ತು ರವಿ ದುಬೆ ಲಕ್ಷ್ಮಣನಾಗಿ ನಟಿಸಿದ್ದಾರೆ. ಉಳಿದಂತೆ ಲಾರಾ ದತ್ತಾ, ರಾಕುಲ್ ಪ್ರೀತ್ ಸಿಂಗ್, ಕಾಜಲ್ ಅಗರ್ವಾಲ್, ಶೀಬಾ ಚಡ್ಡಾ, ವಿವೇಕ್ ಒಬೆರಾಯ್, ಇಂದಿರಾ ಕೃಷ್ಣನ್, ಅಮಿತಾಭ್ ಬಚ್ಚನ್, ಮೋಹಿತ್ ರೈನಾ, ಆದಿನಾಥ್ ಕೊಠಾರೆ ಮತ್ತು ಕುನಾಲ್ ಕಪೂರ್ ಸೇರಿ ಹಲವರು ತಾರಾಬಳಗದಲ್ಲಿದ್ದಾರೆ.

ಈ ಚಲನಚಿತ್ರವನ್ನು 2 ಭಾಗಗಳ ಬೃಹತ್ ಕಥಾಹಂದರದೊಂದಿಗೆ ನಿರ್ಮಿಸಲಾಗುತ್ತಿದೆ. ಮೊದಲ ಭಾಗವು ವಿದೇಶಗಳಲ್ಲಿ ನವೆಂಬರ್ 6, 2026ರಂದು ಬಿಡುಗಡೆಯಾದ್ರೆ, ಭಾರತೀಯ ಚಿತ್ರಮಂದಿರಗಳಲ್ಲಿ ನವೆಂಬರ್ 8, 2026ರಂದು ತೆರೆಕಾಣಲಿದೆ. ಎರಡನೇ ಭಾಗವು 2027ರ ದೀಪಾವಳಿಯಂದು ಬಿಡುಗಡೆಯಾಗಲು ನಿಗದಿಯಾಗಿದೆ.

ನಮಿತ್ ಮಲ್ಹೋತ್ರಾ ಅವರ ಪ್ರೈಮ್ ಫೋಕಸ್ ಸ್ಟುಡಿಯೋಸ್, 'DNEG' ಮತ್ತು ಯಶ್ ಅವರ ಮಾನ್ಸ್ಟರ್ ಮೈಂಡ್ ಕ್ರಿಯೇಷನ್ಸ್ ಸಹಯೋಗದಲ್ಲಿ ನಿರ್ಮಾಣವಾಗಿರುವ ಈ ಚಿತ್ರವು ಹಿಂದಿ, ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂ ಭಾಷೆಗಳಲ್ಲಿ ಚಿತ್ರಮಂದಿರ ಪ್ರವೇಶಿಸಲಿದೆ. ಇದು ಐಮ್ಯಾಕ್ಸ್‌ನಲ್ಲೂ ಬಿಡುಗಡೆಯಾಗಲು ಸಿದ್ಧವಾಗಿದೆ.

ಭಾರತವನ್ನು ಹೊರತುಪಡಿಸಿ ಜಾಗತಿಕ ವಿತರಣೆಯನ್ನು ಸೋನಿ ಪಿಕ್ಚರ್ಸ್ ನಿರ್ವಹಿಸಲಿದೆ. ಇತ್ತ ಧರ್ಮ ಪ್ರೊಡಕ್ಷನ್ಸ್ ಹಿಂದಿ ಭಾಷಿಕ ಮಾರುಕಟ್ಟೆಯಲ್ಲಿ ಚಿತ್ರವನ್ನು ವಿತರಿಸಲಿದೆ. ವಿದೇಶಗಳಲ್ಲಿ ಬರೋಬ್ಬರಿ 50,000 ಸ್ಕ್ರೀನ್‌ಗಳಲ್ಲಿ ರಾಮಾಯಣ ಪ್ರದರ್ಶನಗೊಳ್ಳಲಿದೆ. ಭಾರತದಲ್ಲಿ 9,000 ಪರದೆಗಳಲ್ಲಿ ಬಿಡುಗಡೆ ಆಗಲಿದೆ.

# ಪ್ರೇಮದ ಊರಲಿ




## ಕಲೆಕ್ಷನ್‌ನಲ್ಲಿ ಭಾರಿ ಏರಿಕೆ, ಶೋಗಳ ಸಂಖ್ಯೆಯಲ್ಲೂ ಹೆಚ್ಚಳ

ಯುವನಟ ಶ್ರೀರಾಮ್, ತಪಸ್ವಿನಿ ಪೂಣಚ್ಚ, ರಮಿಕಾ ಶಿವು ಹಾಗೂ ಹಿರಿಯ ನಟ ರಂಗಾಯಣ ರಘು ಮುಖ್ಯಭೂಮಿಕೆಯಲ್ಲಿರುವ ಪ್ರೇಮದ ಊರಲಿ ಚಿತ್ರಮಂದಿರಗಳಲ್ಲಿ ತನ್ನ ಯಶಸ್ಸಿನ ಓಟ ಮುಂದುವರಿಸಿದೆ. ಕೇವಲ 10 ಲಕ್ಷ ರೂಪಾಯಿಯೊಂದಿಗೆ ಬಾಕ್ಸ್ ಆಫೀಸ್ ಪ್ರಯಾಣ ಪ್ರಾರಂಭಿಸಿದ್ದ ಚಿತ್ರ ತನ್ನ 13ನೇ ದಿನ ಬರೋಬ್ಬರಿ 4.50 ಕೋಟಿ ರೂಪಾಯಿ ಕಲೆಕ್ಷನ್ ಮಾಡಿದೆ. ರಾಷ್ಟ್ರಪ್ರಶಸ್ತಿ ವಿಜೇತ ನಿರ್ದೇಶಕ ಮನೋಜ್ ಕುಮಾರ್ ಸಾರಥ್ಯದಲ್ಲಿ ಮೂಡಿ ಬಂದಿರುವ 2ನೇ ಸಿನಿಮಾ ಇದಾಗಿದ್ದು, ತಮ್ಮ ಎರಡನೇ ಪ್ರಯತ್ನದಲ್ಲೂ ಅಭೂತಪೂರ್ವ ಯಶಸ್ಸು ಕಂಡಿದ್ದಾರೆ. ಸಿನಿಮಾವೊಂದರ ಯಶಸ್ಸಿಗೆ ಕಂಟೆಂಟ್ ಬಹಳ ಮುಖ್ಯ ಎಂಬುದನ್ನು ಸಾಬೀತುಪಡಿಸಿದ್ದಾರೆ. ಜೊತೆಗೆ, ಕನ್ನಡಿಗರು ಉತ್ತಮ ಸಿನಿಮಾಗಳ ಕೈಹಿಡಿಯುತ್ತಾರೆ ಎಂಬ ಮಾತು ಕೂಡಾ ಮತ್ತೊಮ್ಮೆ ಪ್ರೂವ್ ಆಗಿದೆ.

**ಪ್ರೇಮದ ಊರಲಿ 13ನೇ ದಿನದ ಕಲೆಕ್ಷನ್:** ಪ್ಯಾನ್ ಇಂಡಿಯಾ ಟ್ರೆಂಡ್ ನಡುವೆ ಕನ್ನಡದಲ್ಲಿ ಸೆಪ್ಟೆಂಬರ್ 25ರಂದು ತೆರೆಕಂಡ ಪ್ರೇಮದ ಊರಲಿ ತನ್ನ 13ನೇ ದಿನ ಬರೋಬ್ಬರಿ 4.50 ಕೋಟಿ ರೂ. ಗ್ರಾಸ್ ಕಲೆಕ್ಷನ್ ಮಾಡಿದೆ. ಈ ಪೈಕಿ 3.85 ಕೋಟಿ ರೂ. ನೆಟ್ ಕಲೆಕ್ಷನ್ ಆಗಿದೆ. ಈ ಚಿತ್ರ ತೆರೆಕಂಡ ದಿನ ಕೇವಲ 10 ಲಕ್ಷ ರೂಪಾಯಿ ಗ್ರಾಸ್ ಕಲೆಕ್ಷನ್ ಮಾಡಿತ್ತು. ಆದರೆ ಪ್ರೇಕ್ಷಕರ ಸಕಾರಾತ್ಮಕ ಬಾಯ್ಮಾತಿನ ಪ್ರಚಾರ ಚಿತ್ರಮಂದಿರಗಳತ್ತ ಜನಸಾಗರ ಹರಿದುಬರಲು ಕಾರಣವಾಯಿತು.

**ಶೋಗಳ ಸಂಖ್ಯೆಯಲ್ಲಿ ಹೆಚ್ಚಳ:** ಚಿತ್ರಮಂದಿರಗಳಲ್ಲಿ ಶೋಗಳ ಸಂಖ್ಯೆಯನ್ನೂ ಹೆಚ್ಚಿಸಲಾಗಿದೆ. ಪ್ರೇಕ್ಷಕರ ಸಂಖ್ಯೆ, ಬೇಡಿಕೆ ಹೆಚ್ಚುತ್ತಿರುವುದರಿಂದ ಹೆಚ್ಚಿನ ಸ್ಕ್ರೀನ್‌ಗಳಲ್ಲಿ ಈ ಸಿನಿಮಾವನ್ನು ಪ್ರದರ್ಶಿಸಲಾಗುತ್ತಿದೆ. ಮೊದಲ ದಿನ ಕೇವಲ 60 ಶೋಗಳಲ್ಲಿ ಸಿನಿಮಾ ಪ್ರದರ್ಶನಗೊಂಡಿತ್ತು. ಶೇ.28ರಷ್ಟು ಆಕ್ಯುಪೆನ್ಸಿ ರೇಟ್ ದಾಖಲಾಗಿತ್ತು. ಸಿನಿಮಾ ಕ್ರೇಜ್ ಹೆಚ್ಚಿದ ಹಿನ್ನೆಲೆ, ಪ್ರತಿದಿನವೂ ಶೋಗಳ ಸಂಖ್ಯೆಯನ್ನು ಹೆಚ್ಚಿಸಲಾಗುತ್ತಿದೆ. ಅದರಂತೆ ಸಿನಿಮಾ 911 ಶೋಗಳಲ್ಲಿ ಪ್ರದರ್ಶನ ಕಂಡಿದೆ. ವೆನಿಲ್ಲಾ ಎಂಟರ್‌ಟೈನ್ಮೆಂಟ್ಸ್ ಮತ್ತು ಜಾನಕಮ್ಮ ಪ್ರೊಡಕ್ಷನ್ಸ್ ಬ್ಯಾನರ್ ಅಡಿ ನಿರ್ಮಾಣಗೊಂಡಿರುವ ಸಿನಿಮಾಗೆ ಸುನಾದ್ ಗೌತಮ್ ಸಂಗೀತ ಸಂಯೋಜಿಸಿದ್ದಾರೆ. ರಾಜ್‌ಕಾಂತ್ ಎಸ್.ಕೆ ಕ್ಯಾಮರಾ ವರ್ಕ್ ಹಾಗೂ ಹರ್ಷಿತ್ ಪ್ರಭು ಅವರ ಸಂಕಲನ ಈ ಚಿತ್ರಕ್ಕಿದೆ. ಕೌಟುಂಬಿಕ ಎಳೆಯೊಂದಿಗೆ ಮೂಡಿಬಂದಿರುವ ಚಿತ್ರ ವಾರದ ದಿನಗಳಲ್ಲಿಯೂ ಗಲ್ಲಾಪೆಟ್ಟಿಗೆಯಲ್ಲಿ ಉತ್ತಮ ವ್ಯವಹಾರ ನಡೆಸುತ್ತಿದ್ದು, ಈ ವಾರಾಂತ್ಯದ ಗಳಿಕೆ ಮೇಲೆ ಬಹುತೇಕರ ಗಮನವಿದೆ.

# ಪಂಜಾಬ್ ಕಿಂಗ್ಸ್‌ಗೆ ದೊಡ್ಡ ಹಿನ್ನಡೆ

## ತಂಡದಿಂದ ಹೊರನಡೆದ ಇಬ್ಬರು ಆಸ್ಟ್ರೇಲಿಯನ್ ಕೋಚ್‌ಗಳು; ಹೊಸಬರಿಗಾಗಿ ಹುಡುಕಾಟ!

ಸಾಯಿರಾಜ್ ಬಹುತುಲೆ ನಿರ್ಗಮನದ ಬೆನ್ನಲ್ಲೇ, ಆಸ್ಟ್ರೇಲಿಯಾದ ಕೋಚ್‌ಗಳಾದ ಜೇಮ್ಸ್ ಹೋಪ್ಸ್ ಮತ್ತು ಬ್ರಾಡ್ ಹ್ಯಾಡಿನ್ ಕೂಡ ಐಪಿಎಲ್ ಫ್ರಾಂಚೈಸಿ 'ಪಂಜಾಬ್ ಕಿಂಗ್ಸ್'ನಿಂದ ಹೊರಬಂದಿದ್ದಾರೆ ಎಂದು ಸುದ್ದಿಸಂಸ್ಥೆ ಐಎಎನ್‌ಎಸ್ ವರದಿ ಮಾಡಿದೆ. ರಿಕಿ ಪಾಂಟಿಂಗ್ ನೇತೃತ್ವದ ಸಹಾಯಕ ಸಿಬ್ಬಂದಿ ತಂಡದಲ್ಲಿ ಹೋಪ್ಸ್ ವೇಗದ ಬೌಲಿಂಗ್ ಕೋಚ್ ಆಗಿ ಮತ್ತು ಹ್ಯಾಡಿನ್ ಫೀಲ್ಡಿಂಗ್ ಕೋಚ್ ಆಗಿ ಕಾರ್ಯನಿರ್ವಹಿಸುತ್ತಿದ್ದರು. ಈ ಇಬ್ಬರೂ ಆಸ್ಟ್ರೇಲಿಯಾದ ರಾಜ್ಯ ತಂಡಗಳಲ್ಲಿ ಉದ್ಯೋಗ ಪಡೆದಿದ್ದಾರೆ. ಗೌತಮ್ ಗಂಭೀರ್ ಅವರ ಮಾರ್ಗದರ್ಶನದಲ್ಲಿ ಭಾರತೀಯ ತಂಡದ ಸ್ಪಿನ್ ಕೋಚ್ ಆಗಿ ಸೇರಲು ಸಾಯಿರಾಜ್ ಬಹುತುಲೆ ತಮ್ಮ ಸ್ಪಿನ್-ಬೌಲಿಂಗ್ ಕೋಚ್ ಹುದ್ದೆಯನ್ನು ತೊರೆದಿರುವುದರಿಂದ, ಈಗ ಪಂಜಾಬ್ ಕಿಂಗ್ಸ್ ಮುಂದಿನ ಆವೃತ್ತಿಗೂ ಮುನ್ನ ಮೂವರು ಹೊಸ ಕೋಚ್‌ಗಳನ್ನು ನೇಮಿಸಿಕೊಳ್ಳಬೇಕಾದ ಅನಿವಾರ್ಯತೆ ಎದುರಾಗಿದೆ.




'ಹೌದು, ಹ್ಯಾಡಿನ್ ಮತ್ತು ಹೋಪ್ಸ್ ಪಂಜಾಬ್ ಕಿಂಗ್ಸ್ ತಂಡದಿಂದ ಹೊರಬಂದಿದ್ದಾರೆ. ಐಪಿಎಲ್ 2026ರ ನಂತರ, ಅವರು ಆಸ್ಟ್ರೇಲಿಯಾದ ಸ್ಥಳೀಯ ರಾಜ್ಯ ತಂಡಗಳಲ್ಲಿ ಮುಖ್ಯ ತರಬೇತುದಾರರಾಗಿ ಸೇರ್ಪಡೆಗೊಂಡಿದ್ದಾರೆ. ಹೋಪ್ಸ್ ಕ್ವೀನ್ಸ್‌ಲ್ಯಾಂಡ್ ತಂಡದ ಮುಖ್ಯ ತರಬೇತುದಾರರಾಗಿ ಜವಾಬ್ದಾರಿ ವಹಿಸಿಕೊಂಡಿದ್ದು, ಬಿಬಿಎಲ್ ತಂಡವಾದ ಬ್ರಿಸ್ಬೇನ್ ಹೀಟ್‌ನಲ್ಲೂ ಅದೇ ಹುದ್ದೆಯನ್ನು ನಿರ್ವಹಿಸುವ ಸಾಧ್ಯತೆ ಇದೆ. ಮತ್ತೊಂದೆಡೆ, ಹ್ಯಾಡಿನ್ ಎನ್‌ಎಸ್‌ಡಬ್ಲ್ಯು ಪುರುಷರ ತಂಡದ ಮುಖ್ಯ ಕೋಚ್ ಆಗಿ ಅಧಿಕಾರ ವಹಿಸಿಕೊಂಡಿದ್ದು, ಬಿಬಿಎಲ್‌ನಲ್ಲಿಯೂ ತರಬೇತುದಾರರ ಪಾತ್ರವನ್ನು ಪಡೆಯುವ ಸಾಧ್ಯತೆಯಿದೆ' ಎಂದು ಐಪಿಎಲ್ ಮೂಲವೊಂದು ಐಎಎನ್‌ಎಸ್‌ಗೆ ತಿಳಿಸಿದೆ. ಈಮಧ್ಯೆ, ಫ್ರಾಂಚೈಸಿ ಕೋಚ್‌ಗಳ ಹುಡುಕಾಟ ನಡೆಸಲಿದ್ದು, ಡಿಸೆಂಬರ್‌ನಲ್ಲಿ ನಡೆಯಲಿರುವ ಹರಾಜಿಗೂ ಮುನ್ನವೇ ಈ ಕುರಿತು ನಿರ್ಧಾರ ಕೈಗೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ.

'ಡಿಸೆಂಬರ್‌ನಲ್ಲಿ ನಡೆಯಲಿರುವ ಐಪಿಎಲ್ ಹರಾಜಿಗೂ ಮುನ್ನವೇ ಪಿಬಿಕೆಎಸ್ ತಂಡದ ಮೂವರು ಹೊಸ ತರಬೇತುದಾರರ ನೇಮಕದ ಬಗ್ಗೆ ನಿರ್ಧಾರ ಹೊರಬೀಳುವ ನಿರೀಕ್ಷೆಯಿದೆ. ಐಪಿಎಲ್ 2027ರ ಅವಧಿಗೆ ತಮ್ಮ ಸಹಾಯಕ ಸಿಬ್ಬಂದಿ ತಂಡಕ್ಕಾಗಿ ಅವರು ಒಬ್ಬ ಭಾರತೀಯ ಮತ್ತು ಇಬ್ಬರು ವಿದೇಶಿ ತರಬೇತುದಾರರನ್ನು ಪರಿಗಣಿಸುತ್ತಿದ್ದಾರೆ' ಎಂದು ಹೇಳಲಾಗಿದೆ. ಪಾಂಟಿಂಗ್ ಮುಖ್ಯ ತರಬೇತುದಾರರಾಗಿ ನೇಮಕಗೊಂಡ ನಂತರ, 2024ರ ಅಂತ್ಯದಲ್ಲಿ ಹೋಪ್ಸ್ PBKS ತಂಡವನ್ನು ಸೇರಿಕೊಂಡರು. ಅವರು ಡೆಲ್ಲಿ ಕ್ಯಾಪಿಟಲ್ಸ್‌ನಲ್ಲೂ ಪಾಂಟಿಂಗ್ ಅವರ ಸಹಾಯಕ ಸಿಬ್ಬಂದಿ ವರ್ಗದಲ್ಲಿದ್ದರು. ಮತ್ತೊಂದೆಡೆ, ತಂಡದ ಸಹಾಯಕ ಸಿಬ್ಬಂದಿಯಲ್ಲಿ ಬದಲಾವಣೆಗಳಾದಾಗಲೂ ಕಿಂಗ್ಸ್ ತಂಡವು ಹ್ಯಾಡಿನ್ ಅವರನ್ನು ಉಳಿಸಿಕೊಂಡಿತು. ಐಪಿಎಲ್ 2025ರ ಮುನ್ನ ಪಂಜಾಬ್ ಕಿಂಗ್ಸ್ ತಂಡದ ತರಬೇತಿ ವಿಭಾಗದಲ್ಲಿ ಪ್ರಮುಖ ಬದಲಾವಣೆಗಳನ್ನು ಮಾಡಲಾಯಿತು. ಟ್ರೆವರ್ ಬೇಲಿಸ್ ಅವರ ಬದಲಿಗೆ ಪಾಂಟಿಂಗ್ ಅವರನ್ನು ಮುಖ್ಯ ತರಬೇತುದಾರರನ್ನಾಗಿ ನೇಮಿಸಲಾಯಿತು. ವೇಗದ ಬೌಲಿಂಗ್ ತರಬೇತುದಾರರಾಗಿ ಚಾರ್ಲ್ ಲ್ಯಾಂಗ್ವೆಲ್ಡ್ ಅವರ ಸ್ಥಾನಕ್ಕೆ ಹೋಪ್ಸ್ ಬಂದರು. ಇತ್ತ, ಸುನೀಲ್ ಜೋಶಿ ಅವರು ಬಿಸಿಸಿಐನ ಸಿಒಇ ನಲ್ಲಿ ಸ್ಪಿನ್-ಬೌಲಿಂಗ್ ತರಬೇತುದಾರರ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರಿಂದ, ಅವರ ಸ್ಥಾನಕ್ಕೆ ಬಹುತುಲೆ ಅವರನ್ನು ಸ್ಪಿನ್-ಬೌಲಿಂಗ್ ತರಬೇತುದಾರರನ್ನಾಗಿ ನೇಮಿಸಲಾಯಿತು. ಅಲ್ಲದೆ, ಟ್ರೆವರ್ ಗೊನ್ಸಾಲ್ವೆಸ್ ಅವರನ್ನು ಸಹಾಯಕ ಬೌಲಿಂಗ್ ತರಬೇತುದಾರರ ಹುದ್ದೆಯಲ್ಲಿ ಮುಂದುವರಿಸಲಾಯಿತು.

# ಮುಖ್ಯ ಆಯ್ಕೆಗಾರ ಹುದ್ದೆಯಿಂದ ಅಜಿತ್ ಅಗರ್ಕರ್ ನಿರ್ಗಮನ ಖಚಿತಪಡಿಸಿದ BCCI

ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯು ಅಜಿತ್ ಅಗರ್ಕರ್ ಅವರು ಮುಖ್ಯ ಆಯ್ಕೆಗಾರ ಹುದ್ದೆಯಿಂದ ನಿರ್ಗಮಿಸಿರುವುದನ್ನು ಖಚಿತಪಡಿಸಿದ ಕೆಲವೇ ಗಂಟೆಗಳಲ್ಲಿ, ಹಿರಿಯ ಆಲ್‌ರೌಂಡರ್ ರವೀಂದ್ರ ಜಡೇಜಾ ನಿಗೂಢವಾದ ಪ್ರತಿಕ್ರಿಯೆಯೊಂದನ್ನು ನೀಡಿದ್ದಾರೆ. ಬಿಸಿಸಿಐನ ಹಿರಿಯ ಪುರುಷರ ಆಯ್ಕೆ ಸಮಿತಿಯ ಅಧ್ಯಕ್ಷರಾಗಿ ಅಗರ್ಕರ್ ಅವರ ಅಧಿಕಾರಾವಧಿಯು ಅಧಿಕೃತವಾಗಿ ಅಕ್ಟೋಬರ್ 4 ರಂದು ಕೊನೆಗೊಂಡಿತು. ಅವರು ಜುಲೈ 2023 ರಲ್ಲಿ ಅಧಿಕಾರ ವಹಿಸಿಕೊಂಡಿದ್ದರು ಮತ್ತು ತಮ್ಮ ಅವಧಿಯನ್ನು ವಿಸ್ತರಿಸಲು ಕೋರಿರಲಿಲ್ಲ. 2024ರ ಐಸಿಸಿ ಪುರುಷರ ಟಿ20 ವಿಶ್ವಕಪ್, 2025ರ ಐಸಿಸಿ ಚಾಂಪಿಯನ್ಸ್ ಟ್ರೋಫಿ ಮತ್ತು 2026ರ ಐಸಿಸಿ ಪುರುಷರ ಟಿ20 ವಿಶ್ವಕಪ್ ಸೇರಿದಂತೆ ಅವರ ಅಧಿಕಾರಾವಧಿಯಲ್ಲಿ ಭಾರತವು ಮೂರು ಐಸಿಸಿ ಟ್ರೋಫಿಗಳನ್ನು ಗೆದ್ದುಕೊಂಡಿತು.

**ರವೀಂದ್ರ ಜಡೇಜಾ ನಿಗೂಢ ಪ್ರತಿಕ್ರಿಯೆ!**



ಮಂಗಳವಾರದಂದು ಆಯ್ಕೆ ಸಮಿತಿಯಲ್ಲಿನ ಹುದ್ದೆ ಖಾಲಿಯಿರುವ ಬಗ್ಗೆ ಬಿಸಿಸಿಐ ಘೋಷಣೆ ಮಾಡಿದ ಬೆನ್ನಲ್ಲೇ, ಜಡೇಜಾ ನಗುವಿನ ಎಮೋಜಿಯೊಂದಿಗೆ ಇದರ ಪ್ರಕ್ರಿಯೆ ಏನು? ಎಂದು ತಮಾಷೆಯಾಗಿ ಪ್ರತಿಕ್ರಿಯಿಸಿದ್ದಾರೆ.

ಈ ವರ್ಷದ ಆರಂಭದಲ್ಲಿ ತವರಿನಲ್ಲಿ ನಡೆದ ಅಫ್ಘಾನಿಸ್ತಾನ ವಿರುದ್ಧದ ಮತ್ತು ಇಂಗ್ಲೆಂಡ್‌ನಲ್ಲಿ ನಡೆದ ಏಕದಿನ ಸರಣಿಗಳಿಂದ ಹೊರಗುಳಿದಿದ್ದ ಜಡೇಜಾ, ವೆಸ್ಟ್ ಇಂಡೀಸ್ ವಿರುದ್ಧದ ಮೂರು ಪಂದ್ಯಗಳ ಸರಣಿಯ ಮೂಲಕ ಏಕದಿನ ತಂಡಕ್ಕೆ ಮರಳಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ. ಆಡಿದ ಎರಡು ಪಂದ್ಯಗಳಲ್ಲಿ, ಅವರು ಕ್ರಮವಾಗಿ 2/75 ಮತ್ತು 0/54 ರ ಬೌಲಿಂಗ್ ಅಂಕಿಅಂಶಗಳನ್ನು (ತಲಾ 10 ಓವರ್‌ಗಳಲ್ಲಿ) ದಾಖಲಿಸಿದರು. 2025 ರಿಂದ ಆಡಿದ ತಮ್ಮ ಕಳೆದ 15 ಏಕದಿನ ಪಂದ್ಯಗಳಲ್ಲಿ, ಜಡೇಜಾ 10 ಇನಿಂಗ್ಸ್‌ಗಳಲ್ಲಿ 29.80ರ ಸರಾಸರಿಯಲ್ಲಿ 149 ರನ್ ಗಳಿಸಿದ್ದಾರೆ; ಇದರಲ್ಲಿ ಅವರ ಗರಿಷ್ಠ ಮೊತ್ತ 32 ಮತ್ತು ಸ್ಟ್ರೈಕ್ ರೇಟ್ 95 ಕ್ಕಿಂತ ಹೆಚ್ಚಿದೆ. ಅವರ ಬೌಲಿಂಗ್ ಪ್ರದರ್ಶನದಲ್ಲಿ ಸ್ವಲ್ಪ ಕುಸಿತ ಕಂಡುಬಂದಿದ್ದು, ಈ ಆಲ್‌ರೌಂಡರ್ 15 ಪಂದ್ಯಗಳಲ್ಲಿ 47.93ರ ಸರಾಸರಿಯಲ್ಲಿ ಕೇವಲ 14 ವಿಕೆಟ್‌ಗಳನ್ನು ಪಡೆದಿದ್ದಾರೆ (ಅತ್ಯುತ್ತಮ ಪ್ರದರ್ಶನ 3/26). ಈ ವರ್ಷ, ಅವರು ಐದು ಪಂದ್ಯಗಳಲ್ಲಿ ಕೇವಲ ಎರಡು ವಿಕೆಟ್‌ಗಳನ್ನು ಪಡೆದಿದ್ದಾರೆ ಮತ್ತು ಮೂರು ಇನಿಂಗ್ಸ್‌ಗಳಲ್ಲಿ 43 ರನ್ ಗಳಿಸಿದ್ದಾರೆ (ಗರಿಷ್ಠ ಮೊತ್ತ 27).

ಮಾನವ್ ಸುತಾರ್‌ರಂತಹ ಯುವ ಸ್ಪಿನ್ನರ್‌ಗಳು ಬರುತ್ತಿದ್ದರೂ, ಭಾರತದ ಟೆಸ್ಟ್ ತಂಡದಲ್ಲಿ ಜಡೇಜಾ ಪ್ರಮುಖ ಆಟಗಾರನಾಗಿ ಮುಂದುವರಿದಿದ್ದಾರೆ. ಶ್ರೀಲಂಕಾ ವಿರುದ್ಧದ ಎರಡು ಟೆಸ್ಟ್ ಪಂದ್ಯಗಳಲ್ಲಿ, ಅವರು ಮೂರು ಇನಿಂಗ್ಸ್‌ಗಳಲ್ಲಿ ಒಟ್ಟು 65 ರನ್ ಗಳಿಸಿದರು (ಗರಿಷ್ಠ ಸ್ಕೋರ್ 43) ಹಾಗೂ 33.57ರ ಸರಾಸರಿಯಲ್ಲಿ ಎಂಟು ವಿಕೆಟ್‌ಗಳನ್ನು ಪಡೆದರು (ಶ್ರೇಷ್ಠ ಪ್ರದರ್ಶನ 3/57). ನವೆಂಬರ್ 22 ರಿಂದ ನ್ಯೂಜಿಲೆಂಡ್‌ನಲ್ಲಿ ಆರಂಭವಾಗಲಿರುವ ಐದು ಏಕದಿನ ಪಂದ್ಯಗಳು ಮತ್ತು ನಂತರ ನಡೆಯಲಿರುವ ಎರಡು ಟೆಸ್ಟ್ ಪಂದ್ಯಗಳಿಗೆ ಜಡೇಜಾ ಅವರ ಲಭ್ಯತೆಯ ಬಗ್ಗೆ ಇನ್ನೂ ಅನಿಶ್ಚಿತತೆ ಇದೆ; ಏಕೆಂದರೆ ಈ ಸರಣಿಗಳಿಗೆ ತಂಡಗಳನ್ನು ಇನ್ನೂ ಪ್ರಕಟಿಸಬೇಕಿದೆ. ವೆಸ್ಟ್ ಇಂಡೀಸ್ ವಿರುದ್ಧದ ಮೊದಲ ಏಕದಿನ ಪಂದ್ಯಕ್ಕೂ ಮುನ್ನ, ಬ್ಯಾಟಿಂಗ್ ಕೋಚ್ ಸಿತಾಂಶು ಕೋಟಕ್ ಅವರು ಜಡೇಜಾ ಅವರ ಆಲ್‌ರೌಂಡ್ ಸಾಮರ್ಥ್ಯ ಮತ್ತು ಅನುಭವವನ್ನು ಪರಿಗಣಿಸಿ, 2027ರ ಏಕದಿನ ವಿಶ್ವಕಪ್‌ಗೆ ಅವರನ್ನು ಬೆಂಬಲಿಸಿದರು. ಐಸಿಸಿ ವರದಿ ಪ್ರಕಾರ, ವೆಸ್ಟ್ ಇಂಡೀಸ್ ವಿರುದ್ಧದ ಮೊದಲ ಏಕದಿನ ಪಂದ್ಯಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಕೋಟಕ್, ಅವರು ಖಂಡಿತವಾಗಿಯೂ ಪರಿಗಣನೆಯಲ್ಲಿದ್ದಾರೆ ಎಂದು ನಾನು ಭಾವಿಸುತ್ತೇನೆ ಎಂದು ಹೇಳಿದರು.

## ಭಾರತ vs ಆಸ್ಟ್ರೇಲಿಯಾ U-19 ಪಂದ್ಯದ ವೇಳೆ ನರೇಂದ್ರ ಮೋದಿ ಕ್ರೀಡಾಂಗಣಕ್ಕೆ ಬಾಂಬ್ ಬೆದರಿಕೆ

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾರತ ಮತ್ತು ಆಸ್ಟ್ರೇಲಿಯಾ ಅಂಡರ್-19 ಕ್ರಿಕೆಟ್ ತಂಡಗಳ ನಡುವಿನ ಪಂದ್ಯ ನಡೆಯುತ್ತಿದ್ದಾಗ, 'ಖಲಿಸ್ತಾನ್ ನ್ಯಾಷನಲ್ ಆರ್ಮಿ' ಹೆಸರಿನಲ್ಲಿ ಬಾಂಬ್ ಬೆದರಿಕೆ ಇಮೇಲ್ ಬಂದಿದೆ.



ದೆಹಲಿ ಮತ್ತು ಅಹಮದಾಬಾದ್‌ನಲ್ಲಿ ನಡೆಯಲಿರುವ ಗಾಯಕ ದಿಲ್ಜಿತ್ ದೋಸಾಂಜ್ ಅವರ ಸಂಗೀತ ಕಾರ್ಯಕ್ರಮಗಳಲ್ಲೂ ಬಾಂಬ್ ಸ್ಫೋಟದ ಎಚ್ಚರಿಕೆಯನ್ನು ಇದರಲ್ಲಿ ನೀಡಲಾಗಿದೆ.

ಬುಧವಾರದಂದು ನರೇಂದ್ರ ಮೋದಿ ಕ್ರೀಡಾಂಗಣದ ಹೊರಗಿನ ಮೈದಾನವೊಂದರಲ್ಲಿ ಭಾರತ ಮತ್ತು ಆಸ್ಟ್ರೇಲಿಯಾ ಅಂಡರ್-19 ತಂಡಗಳ ನಡುವೆ ಪಂದ್ಯ ನಡೆಯುತ್ತಿದ್ದಾಗ ಕ್ರೀಡಾಂಗಣಕ್ಕೆ ಬಾಂಬ್ ಬೆದರಿಕೆ ಇಮೇಲ್ ಬಂದಿದೆ. ಭಾರತ ಮತ್ತು ಆಸ್ಟ್ರೇಲಿಯಾ ಅಂಡರ್-19 ತಂಡಗಳ ನಡುವಿನ ಎರಡನೇ ನಾಲ್ಕು ದಿನಗಳ ಪಂದ್ಯ 'ಗ್ರೌಂಡ್ ಎ' ನಲ್ಲಿ ನಡೆಯುತ್ತಿದ್ದಾಗ ಅಧಿಕಾರಿಗಳಿಗೆ ಈ ಬಾಂಬ್ ಬೆದರಿಕೆ ಸಂದೇಶ ಬಂದಿದೆ.

**ತಕ್ಷಣದ ಪ್ರತಿಕ್ರಿಯೆ ಮತ್ತು ಸ್ಥಳಾಂತರ:** "ಇಮೇಲ್ ಬಂದ ತಕ್ಷಣ ನಾವು ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಿದೆವು. 2023ರ ವಿಶ್ವಕಪ್ ಮತ್ತು ಐಪಿಎಲ್ ಸಮಯ ಸೇರಿದಂತೆ ಈ ಹಿಂದೆ ಕೂಡ ಇಂತಹ ಘಟನೆಗಳು ಒಂದೆರಡು ಬಾರಿ ನಡೆದಿವೆ," ಎಂದು ಗುಜರಾತ್ ಕ್ರಿಕೆಟ್ ಅಸೋಸಿಯೇಷನ್ ಕಾರ್ಯದರ್ಶಿ ಅನಿಲ್ ಪಟೇಲ್ 'ಸ್ಪೋರ್ಟ್‌ಸ್ಟಾರ್'ಗೆ ತಿಳಿಸಿದರು. ಭಾರತ 10 ವಿಕೆಟ್‌ಗಳ ಭರ್ಜರಿ ಗೆಲುವು ಸಾಧಿಸುವ ಮೂಲಕ, ಅಂಡರ್-19 ತಂಡಗಳ ನಡುವಿನ ಎರಡನೇ ಅನಧಿಕೃತ ಟೆಸ್ಟ್ ಪಂದ್ಯವು ಬುಧವಾರ ಬೆಳಗ್ಗೆ 11.15ರ ಸುಮಾರಿಗೆ (ಭಾರತೀಯ ಕಾಲಮಾನ) ಮೂರನೇ ದಿನವೇ ಮುಕ್ತಾಯಗೊಂಡಿತು. ಬೆದರಿಕೆ ಇಮೇಲ್ ಬಂದಾಗ ಎರಡೂ ತಂಡಗಳು ಕ್ರೀಡಾಂಗಣದ ಆವರಣದಲ್ಲಿದ್ದವು.

"ಅವರಿಗೆ ಬೆದರಿಕೆಯ ಬಗ್ಗೆ ತಕ್ಷಣವೇ ತಿಳಿಸಲಾಗಿಲ್ಲ ಎಂದು ತಿಳಿದುಬಂದಿದೆ. ಆದಾಗ್ಯೂ, ಮಾಹಿತಿ ಸಿಕ್ಕ ತಕ್ಷಣ, ನಿಯಮಾವಳಿಯ ಪ್ರಕಾರ ಮಧ್ಯಾಹ್ನ 1 ಗಂಟೆಯ ನಂತರ ಎರಡೂ ತಂಡಗಳು ಕ್ರೀಡಾಂಗಣದಿಂದ ಹೊರಟವು," ಎಂದು 'ಸ್ಪೋರ್ಟ್‌ಸ್ಟಾರ್' ವರದಿ ತಿಳಿಸಿದೆ. ಖಲಿಸ್ತಾನ್ ನ್ಯಾಷನಲ್ ಆರ್ಮಿ ಮತ್ತು ಸಂಗೀತ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಬೆದರಿಕೆಗಳು ಇಮೇಲ್ ಕಳುಹಿಸಿದವರು ತಾವು "ಖಲಿಸ್ತಾನ್ ನ್ಯಾಷನಲ್ ಆರ್ಮಿ"ಗೆ ಸೇರಿದವರು ಎಂದು ಹೇಳಿಕೊಂಡಿದ್ದಾರೆ. ಅಲ್ಲದೆ, ನವೆಂಬರ್ 1 ರಂದು ದೆಹಲಿಯ ಜೆಎಲ್‌ಎನ್ (ಜವಾಹರಲಾಲ್ ನೆಹರು) ಕ್ರೀಡಾಂಗಣದಲ್ಲಿ ಮತ್ತು ನವೆಂಬರ್ 21 ರಂದು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಬಾಂಬ್ ಸ್ಫೋಟದ ಎಚ್ಚರಿಕೆಯನ್ನು ನೀಡಿದ್ದಾರೆ ಎಂದು ಮೂಲಗಳು ಪಿಟಿಐ ಗೆ ತಿಳಿಸಿವೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper. udayavahini.in www.udayavahini.in Udaya vahini news Udaya vahini news